

# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-40 ಶೋಭಕೃತ್ ನಾಮ ಸಂವತ್ಸರ, ಕಾರ್ತಿಕ - ಮಾರ್ಗಶಿರ, ಡಿಸೆಂಬರ್ - 2023, ಸಂಚಿಕೆ-9, ಪುಟಗಳು-36 ಬೆಲೆ ರೂ.15/-





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

## "ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ

# ಆಹ್ವಾನ ಪತ್ರಿಕೆ

ಯತ್ರ ನಾರ್ಯಸ್ತು ಪೂಜ್ಯನ್ತೇ ತತ್ರ ರಮಂನ್ತೇ ದೇವತಾಃ । ಯತ್ರೈತಾಸ್ತು ನ ಪೂಜ್ಯಂತೆ ಸರ್ವಾಸ್ತತ್ರಾ ಫಲಾ ಕ್ರಿಯಾ ॥

**ಶ್ರೀ ಶೋಭಕೃತ್ ಸಂವತ್ಸರ, ಮಾರ್ಗಶಿರ ಮಾಸ, ಕೃಷ್ಣಪಕ್ಷ ದಶಮಿ-ಏಕಾದಶಿ**

**ದಿನಾಂಕ 06-01-2024 ಶನಿವಾರ ಮತ್ತು 07-01-2024 ಭಾನುವಾರ**

**ದಿನಾಂಕ 06-01-2024-ಶನಿವಾರ**

ಪ್ರಾತಃಕಾಲ 6.00 ಘಂಟೆಗೆ : ಪುಣ್ಯಾಹ, ಗಣಪತಿ ಹೋಮ, ವಿಷ್ಣು ಸಹಸ್ರನಾಮ, ಲಲಿತಾ ಸಹಸ್ರನಾಮ, ಪೂರ್ಣಾಹುತಿ ಮತ್ತು ಮಹಾಮಂಗಳಾರತಿ

ಬೆಳಿಗ್ಗೆ 8.00 ಘಂಟೆ-ಧ್ವಜಾರೋಹಣ : ಶ್ರೀ ಅಶೋಕ ಹಾರನಹಳ್ಳಿ, ಮಹಾಸಭಾಧ್ಯಕ್ಷರು

## ಉದ್ಘಾಟನಾ ಸಮಾರಂಭ-ಉಭಯಭಾರತೀ ವೇದಿಕೆ

| | |
|---|---|
| ಶಂಖನಾದ ಮತ್ತು ವೇದಘೋಷ | : ಋತ್ವಿಕರುಗಳಿಂದ |
| ಪ್ರಾರ್ಥನೆ | : ಶ್ರೀಮತಿ ಶ್ವೇತಾ ಶಾಸ್ತ್ರಿ |
| ನಾಡಗೀತೆ ಮತ್ತು ಸಮ್ಮೇಳನದ ಗೀತೆ | : ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ ಹಾಗೂ ಸಂಗಡಿಗರಿಂದ |
| ಸ್ವಾಗತ | : ಡಾ॥ ಶುಭಮಂಗಳ ಸುನಿಲ್, ಸಮ್ಮೇಳನ ಸಂಚಾಲಕರು |
| ಪ್ರಾಸ್ತಾವಿಕ ಭಾಷಣ | : ಶ್ರೀ ಅಶೋಕ ಹಾರನಹಳ್ಳಿ, ಮಹಾಸಭಾ ಅಧ್ಯಕ್ಷರು |
| ಸಮ್ಮೇಳನ ಉದ್ಘಾಟನೆ<br>ಸ್ಮರಣ ಸಂಚಿಕೆ ಲೋಕಾರ್ಪಣೆ | : ಶ್ರೀಮತಿ ನಿರ್ಮಲಾ ಸೀತಾರಾಮನ್, ವಿತ್ತ ಸಚಿವರು, ಭಾರತ ಸರ್ಕಾರ, ಅದ್ವೈತತತ್ವ ವಿಭೂಷಣ,<br>ಅದ್ವೈತತತ್ವ ವಿಭೂಷಣ, ಗುರುಸೇವಾ ಧುರೀಣ ಪದ್ಮಶ್ರೀ ಪುರಸ್ಕೃತ<br>ಡಾ॥ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು-ಶ್ರೀ ಶೃಂಗೇರಿ ಶಾರದಾ ಪೀಠ |
| ಮಳಿಗೆ - ಆಹಾರ ಮೇಳ ಉದ್ಘಾಟನೆ | : ಶ್ರೀ ತೇಜಸ್ವಿ ಸೂರ್ಯ ಎಲ್.ಎಸ್., ಲೋಕಸಭಾ ಸದಸ್ಯರು, ಬೆಂಗಳೂರು ದಕ್ಷಿಣ ಕ್ಷೇತ್ರ |
| ಮುಖ್ಯ ಅತಿಥಿಗಳು | : ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅಧ್ಯಕ್ಷರು-ಅದಮ್ಯ ಚೇತನ, ಉಪಾಧ್ಯಕ್ಷರು ಬಿ.ಜೆ.ಪಿ. ಕರ್ನಾಟಕ<br>ಶ್ರೀ ಉದಯ ಗರುಡಾಚಾರ್, ಶಾಸಕರು-ಚಿಕ್ಕಪೇಟೆ ಕ್ಷೇತ್ರ<br>ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ, ಶಾಸಕರು-ಬಸವನಗುಡಿ ಕ್ಷೇತ್ರ<br>ಶ್ರೀ ಸಿ.ಕೆ. ರಾಮಮೂರ್ತಿ, ಶಾಸಕರು- ಜಯನಗರ ಕ್ಷೇತ್ರ |
| ಕಾರ್ಯಾಧ್ಯಕ್ಷರ ನುಡಿ | : ಶ್ರೀಮತಿ ಮೇದಿನಿ ಉದಯ ಗರುಡಾಚಾರ್ |
| ಸಮ್ಮೇಳನಾಧ್ಯಕ್ಷರ ನುಡಿ | : ಶ್ರೀಮತಿ ಅಲ್ಕಾ ಸುಧೀರ ಇನಾಮದಾರ |
| ವಂದನಾರ್ಪಣೆ | : ಶ್ರೀಮತಿ ಶಾಂತಕುಮಾರಿ ಎನ್. ಚಿಕ್ಕಮಗಳೂರು |
| ನಿರೂಪಣೆ | : ಶ್ರೀಮತಿ ಶಕುಂತಲಾ ಐಯ್ಯರ್, ಬೆಂಗಳೂರು |

**ಶ್ರೀ ಶ್ರೀ ಭಾರತೀತೀರ್ಥ ಸಭಾ ಭವನ**

ಶ್ರೀ ಶೃಂಗೇರಿ ಶಂಕರಮಠದ ಆವರಣ, ಶಂಕರಪುರಂ, ಬೆಂಗಳೂರು-04

ಎಲ್ಲರಿಗೂ ಆದರದ ಸ್ವಾಗತ
ದಯಮಾಡಿ ಬನ್ನಿ.....
ಬಂಧು ಮಿತ್ರರನ್ನೂ ಕರೆತನ್ನಿ

| | | | |
|---|---|---|---|
| **ಅಶೋಕ ಹಾರನಹಳ್ಳಿ** | **ವೆಂಕಟೇಶ್ ಎಸ್. ನಾಯಕ್** | **ಎಸ್. ಶ್ರೀಧರಮೂರ್ತಿ** | **ಡಾ॥ ಶುಭಮಂಗಳ ಸುನಿಲ್** |
| ಅಧ್ಯಕ್ಷರು | ಖಜಾಂಚಿ | ಪ್ರಧಾನ ಕಾರ್ಯದರ್ಶಿ | ಸಂಚಾಲಕರು-ರಾಜ್ಯ ಮಹಿಳಾ ವಿಭಾಗ |

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

## "ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ

### ಉಭಯಭಾರತೀ ವೇದಿಕೆ

ದಿನಾಂಕ 07-01-2024 ಭಾನುವಾರ

ಮಧ್ಯಾಹ್ನ 3.30 ರಿಂದ ಸಂಜೆ 5.30ರ ವರೆಗೆ

## ಸಮಾರೋಪ ಸಮಾರಂಭ

| | | |
|---|---|---|
| ವೇದಘೋಷ | : | ಋತ್ವಿಕರುಗಳಿಂದ |
| ಪ್ರಾರ್ಥನೆ | : | ಶ್ರೀಮತಿ ಶ್ವೇತಾ ಶಾಸ್ತ್ರೀ, ಶ್ರೀಮತಿ ಸುಮಾ ಕಲ್ಯಾಣಿ |
| ಸ್ವಾಗತ | : | **ಶ್ರೀಮತಿ ಮೇಧಿನಿ ಗರುಡಾಚಾರ್,** ಸಮ್ಮೇಳನ ಕಾರ್ಯಾಧ್ಯಕ್ಷರು |
| ಅಧ್ಯಕ್ಷತೆ | : | **ಶ್ರೀ ಅಶೋಕ ಹಾರನಹಳ್ಳಿ,** ಮಹಾಸಭಾ ಅಧ್ಯಕ್ಷರು |
| ಸಮಾರೋಪ ಭಾಷಣ | : | **ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್**<br>ರಾಜವಂಶಸ್ಥರು-ಮೈಸೂರು |
| ಮುಖ್ಯ ಅತಿಥಿಗಳು | : | ಅದ್ವೈತ ತತ್ವವಿಭೂಷಣ, ಗುರು ಸೇವಾಧುರೀಣ ಪದ್ಮಶ್ರೀ ಪುರಸ್ಕೃತ<br>**ಡಾ॥ ಗೌರೀಶಂಕರ್**<br>ಆಡಳಿತಾಧಿಕಾರಿಗಳು, ಶ್ರೀ ಶೃಂಗೇರಿ ಶಂಕರಮಠ<br>**ಡಾ॥ ಗುರುರಾಜ ಕರ್ಜಗಿ,** ಖ್ಯಾತ ಶಿಕ್ಷಣ ತಜ್ಞರು<br>**ಶ್ರೀ ಭೀಮೇಶ್ವರ ಜೋಶಿ**<br>ಧರ್ಮದರ್ಶಿಗಳು, ಹೊರನಾಡು ಶ್ರೀಅನ್ನಪೂರ್ಣೇಶ್ವರಿ ದೇವಸ್ಥಾನ<br>**ಶ್ರೀ ದಿನೇಶ್ ಗುಂಡುರಾವ್**<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು<br>**ಶ್ರೀ ಆರ್.ವಿ. ದೇಶಪಾಂಡೆ,** ಶಾಸಕರು, ಮಾಜಿ ಸಚಿವರು<br>**ಶ್ರೀ ಯು.ಬಿ. ವೆಂಕಟೇಶ್,** ವಿಧಾನಪರಿಷತ್ ಸದಸ್ಯರು |
| ಉಪಸ್ಥಿತಿ | : | **ಶ್ರೀ ವೆಂಕಟೇಶ್ ಎಸ್. ನಾಯಕ್,** ಮಹಾಸಭಾ ಖಜಾಂಚಿ<br>**ಶ್ರೀ ಎಸ್. ಶ್ರೀಧರಮೂರ್ತಿ,** ಮಹಾಸಭಾ ಪ್ರಧಾನ ಕಾರ್ಯದರ್ಶಿ |
| ವಂದನಾರ್ಪಣೆ | : | ಶ್ರೀಮತಿ ರೇಖಾ ಮುರಳೀಧರ್, ರಾಯಚೂರು |
| ನಿರೂಪಣೆ | : | ಶ್ರೀಮತಿ ಡಾ॥ ಶುಭಮಂಗಳ ಸುನಿಲ್ |

ದಿನಾಂಕ 07-01-2024 ಭಾನುವಾರ ಸಂಜೆ 5.30 ರಿಂದ

## ಸಾಂಸ್ಕೃತಿಕ ಕಾರ್ಯಕ್ರಮ

ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ

ನಿರೂಪಣೆ : ಶ್ರೀಮತಿ ಸುಮಾ ಕಲ್ಯಾಣಿ, ಶ್ರೀಮತಿ ಅಂಬಿಕಾ ರಾಮಚಂದ್ರ

ಎಲ್ಲರಿಗೂ ಆದರದ ಸ್ವಾಗತ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

**"ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ**

# ಉಭಯಭಾರತೀ ವೇದಿಕೆ

## ವಿಚಾರ ಗೋಷ್ಠಿ-1

**ದಿನಾಂಕ 06-01-2024 ಶನಿವಾರ ಮಧ್ಯಾಹ್ನ 12.00 ರಿಂದ 1.30ರ ವರೆಗೆ**

| | | |
|---|---|---|
| ವಿಷಯ | : | **ಮಾಧ್ಯಮದಲ್ಲಿ ಮಹಿಳೆಯ ಪಾತ್ರ** |
| ಸ್ವಾಗತ | : | ಶ್ರೀಮತಿ ಸುನೀತ ಶ್ರೀಧರ್, ಚಿಕ್ಕಮಗಳೂರು |
| ಅಧ್ಯಕ್ಷತೆ | : | **ಶ್ರೀಮತಿ ನಂ. ನಾಗಲಕ್ಷ್ಮೀ** |
| ವಿಚಾರ ಮಂಡನೆ | : | ಶ್ರೀಮತಿ ಮಾಳವಿಕಾ ಅವಿನಾಶ್ |
| | | ಶ್ರೀಮತಿ ಸುಧಾ ಬೆಳವಾಡಿ |
| | | ಶ್ರೀಮತಿ ಗೀತಾ ಬಿ.ಯು. |
| ನಿರೂಪಣೆ | : | ಶ್ರೀಮತಿ ವಂದನಾ ಶಾಸ್ತ್ರಿ |

**——— ಭೋಜನ ಮಧ್ಯಾಹ್ನ 1.30 ರಿಂದ ———**

## ಸಾಂಸ್ಕೃತಿಕ ಕಾರ್ಯಕ್ರಮ

**ಮಧ್ಯಾಹ್ನ 1.30 ರಿಂದ 3.00 ಘಂಟೆಯವರೆಗೆ**

**ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ**

| | | |
|---|---|---|
| ಸಂಯೋಜನೆ | : | ಶ್ರೀಮತಿ ಸುಮಂಗಲಾ ಎಸ್. ಆಚಾರ್, ಬೆಂಗಳೂರು |
| ನಿರೂಪಣೆ | : | ಶ್ರೀಮತಿ ಪೂರ್ಣಿಮಾ, ಚನ್ನರಾಯಪಟ್ಟಣ |

## ವಿಚಾರ ಗೋಷ್ಠಿ-2

**ಮಧ್ಯಾಹ್ನ 3.00 ಘಂಟೆಯಿಂದ ಸಂಜೆ 4.00 ರವರೆಗೆ**

| | | |
|---|---|---|
| ವಿಷಯ | : | **ಧರ್ಮ-ಸಂಸ್ಕೃತಿ ಮತ್ತು ಮಹಿಳೆ** |
| ಸ್ವಾಗತ | : | ಶ್ರೀಮತಿ ರಕ್ಷಾ, ಕೋಲಾರ |
| ಅಧ್ಯಕ್ಷತೆ | : | **ಶ್ರೀಮತಿ ರಾಜಲಕ್ಷ್ಮೀ ಜೋಯಿಸ್** |
| ವಿಚಾರ ಮಂಡನೆ | : | ಶ್ರೀ ಶತಾವಧಾನಿ ಗಣೇಶ್ |
| | | ಶ್ರೀಮತಿ ಅಲ್ಕಾ ಸುಧೀರ ಇನಾಮದಾರ |
| ನಿರೂಪಣೆ | : | ಶ್ರೀಮತಿ ಗೀತಾ ಸಂಪತ್, ಕೊಡಗು |

## ಸಾಂಸ್ಕೃತಿಕ ಕಾರ್ಯಕ್ರಮ

**ಸಂಜೆ 4.00 ರಿಂದ 4.45 ರವರೆಗೆ**

"ಶ್ರೀರಾಮದರ್ಶನ"ದೊಂದಿಗೆ – ನೃತ್ಯರೂಪಕ–ಕಥಕ್

**ಕುಮಾರಿ ವಿದ್ಯಾ ಭಾರದ್ವಾಜ್**–ವಿವಿಕ್ತ ನೃತ್ಯಶಾಲೆ ಇವರಿಂದ

**ಸಂಜೆ 4.45 ರಿಂದ 6.30 ಘಂಟೆಯವರೆಗೆ – ಲಯ-ಲಾವಣ್ಯ-ತಾಳವಾದ್ಯ**

**ನಿರ್ದೇಶನ : ವಿದ್ವಾನ್ ಆನೂರು ಅನಂತಕೃಷ್ಣ ಶರ್ಮಾ**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

**"ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ**

## ಉಭಯಭಾರತೀ ವೇದಿಕೆ

**ಸಂಜೆ 6.30 ರಿಂದ ರಾತ್ರಿ 7.15 ರವರೆಗೆ**

**ನೃತ್ಯ ರೂಪಕ : "ಸೀತಾಪರಿಣಯಂ"**

ನಿರ್ದೇಶನ : ಕರ್ನಾಟಕ ಕಲಾಶ್ರೀ **ಶ್ರೀಮತಿ ವಿದ್ಯಾ ರವಿಶಂಕರ್ ಮತ್ತು ತಂಡದವರಿಂದ**

**ರಾತ್ರಿ 7.15 ರನಂತರ ನೃತ್ಯ ರೂಪಕ : ಸಂಪೂರ್ಣ ರಾಮಾಯಣ**

ನಿರ್ದೇಶನ : ಡಾ॥ ಕೃಪಾ ಫಡಕೆ ಮತ್ತು ತಂಡದವರಿಂದ (ನೃತ್ಯಗಿರಿ-ನೃತ್ಯಶಾಲೆ, ಮೈಸೂರು)

ನಿರೂಪಣೆ : ಶ್ರೀಮತಿ ಶ್ವೇತಾ ಪಿ. ರಾವ್

---

### ಗಾರ್ಗಿ ವೇದಿಕೆ

**ದಿನಾಂಕ 06-01-2024 ಶನಿವಾರ**

**ಮಧ್ಯಾಹ್ನ 12.00 ರಿಂದ ಸಂಜೆ 4.30ರ ವರೆಗೆ**

**ಸಾಂಸ್ಕೃತಿಕ ಕಾರ್ಯಕ್ರಮ**

**ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ**

ನಿರೂಪಣೆ : ಶ್ರೀಮತಿ ಶ್ರೀದೇವಿ, ತುಮಕೂರು, ಶ್ರೀಮತಿ ವೈಷ್ಣವಿ ಹುಲಗಿ, ಕೊಪ್ಪ

### "ಪರಿಮಳ ವೇದಿಕೆ"

**ದಿನಾಂಕ 06-01-2024 ಶನಿವಾರ**

**(ಶ್ರೀ ಕೃಷ್ಣವಾದಿರಾಜ ಕಲ್ಯಾಣ ಮಂಟಪ) ಮಧ್ಯಾಹ್ನ 12.00 ಘಂಟೆಯಿಂದ**

**ರಾಜ್ಯಮಟ್ಟದ ಭಜನಾ ಸ್ಪರ್ಧೆ**

ನಿರೂಪಣೆ : ಶ್ರೀಮತಿ ಸುಮಾ ಕಲ್ಯಾಣಿ, ಶ್ರೀಮತಿ ಪ್ರತಿಭಾ ವಿಕ್ರಮ್

ಶ್ರೀಮತಿ ಶ್ರೀಲಕ್ಷ್ಮೀ, ಶ್ರೀಮತಿ ನಾಗರತ್ನ

---

### ಉಭಯಭಾರತೀ ವೇದಿಕೆ

**ದಿನಾಂಕ 07-01-2024 ಭಾನುವಾರ - ಬೆಳಿಗ್ಗೆ 6.30 ರಿಂದ 7.30 ರವರೆಗೆ**

**ಶ್ರೀರಾಮ ಭಜನೆ ಹಾಗೂ ಹನುಮಾನ್ ಚಾಲೀಸಾ ಪಠಣ**

ನಿರೂಪಣೆ : ಶ್ರೀಮತಿ ಛಾಯಾ ರಮೇಶ್, ಮೈಸೂರು

## ಶೋಭಾಯಾತ್ರೆ ಬೆಳಿಗ್ಗೆ 8.30 ರಿಂದ

**ಶೋಭಾಯಾತ್ರೆ ಉದ್ಘಾಟನೆ : ಶ್ರೀಮತಿ ತೇಜಸ್ವಿನಿ ಅನಂತಕುಮಾರ್**

ಅಧ್ಯಕ್ಷರು-ಅದಮ್ಯ ಚೇತನ, ಬೆಂಗಳೂರು

**ಶ್ರೀಮತಿ ಮೇದಿನಿ ಉದಯ ಗರುಡಾಚಾರ್**, ಕಾರ್ಯಾಧ್ಯಕ್ಷರು

ಈ ಬೃಹತ್ ಶೋಭಾಯಾತ್ರೆಯು ಬಸವನಗುಡಿ ದೊಡ್ಡಗಣಪತಿ ದೇವಾಲಯದಿಂದ ಆರಂಭಗೊಂಡು ರಾಮಕೃಷ್ಣ ವೃತ್ತ ಮಾರ್ಗವಾಗಿ ವೇದಘೋಷ-ಭಜನೆ-ಸಂಗೀತ ಹಾಗೂ ವಿವಿಧ ಜಾನಪದ ಕಲಾ ತಂಡಗಳಿಂದ ವೈಶಿಷ್ಟ್ಯಪೂರ್ಣ ಕಲಾ ಪ್ರದರ್ಶನದೊಂದಿಗೆ ಸಹಸ್ರಾರು ವಿಪ್ರ ಬಂಧುಗಳೊಂದಿಗೆ ಸಮ್ಮೇಳನ ಆವರಣ ಶ್ರೀ ಶ್ರೀ ಭಾರತೀತೀರ್ಥ ಸಭಾಭವನವನ್ನು ತಲುಪುವುದು.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

## "ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ

**ದಿನಾಂಕ 07-01-2024 ಭಾನುವಾರ - ಬೆಳಗ್ಗೆ 10.30 ರಿಂದ 11.30 ರವರೆಗೆ**

### ಸಾಂಸ್ಕೃತಿಕ ಕಾರ್ಯಕ್ರಮ- ಉಭಯಭಾರತೀ ವೇದಿಕೆ

**ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ**

**ಭಜನಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ**

ಸಂಯೋಜಕರು : ಶ್ರೀಮತಿ ಅಪರ್ಣಾರಾವ್, ಬೆಂಗಳೂರು

ನಿರೂಪಣೆ : ಶ್ರೀಮತಿ ಮಂಗಳ ಎಸ್., ಮೈಸೂರು

### "ಧೀ ಶಕ್ತಿ" ಪುರಸ್ಕಾರ

**11.30 ರಿಂದ 12.30ರ ವರೆಗೆ**

**ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸಾಧನೆ-ಸೇವೆಗೈದ ವಿಪ್ರ ಮಹಿಳೆಯರಿಗೆ**

| | | |
|---|---|---|
| ಪುರಸ್ಕರಿಸುವವರು | : | **ಡಾ|| ಅಹಲ್ಯಾ ಶರ್ಮಾ** |
| | | ಉಪಕುಲಪತಿ-ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ |
| | | **ಶ್ರೀಮತಿ ರೇವತಿ ಕಾಮತ್**, ಖ್ಯಾತ ಪರಿಸರ ತಜ್ಞೆ-ವೀಣಾವಾದಕಿ |
| ಅಧ್ಯಕ್ಷತೆ | : | **ಶ್ರೀ ಅಶೋಕ ಹಾರನಹಳ್ಳಿ**, ಮಹಾಸಭಾ ಅಧ್ಯಕ್ಷರು |
| ಮುಖ್ಯ ಅತಿಥಿಗಳು | : | **ಶ್ರೀಮತಿ ಉಮಾ ಶಂಕರ್**, ನಿರ್ದೇಶಕರು-ಕರ್ನಾಟಕ ಬ್ಯಾಂಕ್ |
| | | ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರು, ಆರ್.ಬಿ.ಐ. |
| ಉಪಸ್ಥಿತಿ | : | ಶ್ರೀಮತಿ ಸಾವಿತ್ರಿ ರಮೇಶ್ |
| | | ಶ್ರೀಮತಿ ಪುಷ್ಪಾ ಅಯ್ಯಂಗಾರ್ |
| | | ಶ್ರೀಮತಿ ರೂಪಾ ಶಾಸ್ತ್ರೀ |
| ನಿರೂಪಣೆ | : | ಶ್ರೀಮತಿ ಶ್ವೇತಾ ಶಾಸ್ತ್ರೀ, ಶ್ರೀಮತಿ ಡಾ|| ಎಂ.ವಿ. ನಾಗಲಕ್ಷ್ಮೀ |
| | | ಶ್ರೀಮತಿ ಸುಮಾ ಕಲ್ಯಾಣಿ, ಶ್ರೀಮತಿ ಸುಮಾ ಪ್ರಸನ್ನ, |

### ವಿಚಾರ ಗೋಷ್ಠಿ-3

**ದಿನಾಂಕ 07-01-2024 ಭಾನುವಾರ - ಮಧ್ಯಾಹ್ನ 12.30 ರಿಂದ 2.00 ರವರೆಗೆ**

| | | |
|---|---|---|
| ವಿಷಯ | : | **ಮಹಿಳೆ ಮತ್ತು ಸ್ವಾಸ್ಥ್ಯ** |
| ಸ್ವಾಗತ | : | ಶ್ರೀಮತಿ ನಿರ್ಮಲಾ ಹೆಗ್ಡೆ-ಕರ್ಕಿ |
| ಅಧ್ಯಕ್ಷತೆ | : | **ಡಾ|| ರೂಪಶ್ರೀ ಶಶಿಕಾಂತ್** |
| ವಿಚಾರ ಮಂಡನೆ | : | ಡಾ|| ರಮ್ಯಾ ಕಾರ್ತಿಕ್ |
| | | ಡಾ|| ಜಯಂತಿ ಎಸ್. ತುಮ್ಸಿ |
| | | ಡಾ|| ಕೆ. ಚಂದ್ರಿಕಾ ಮುರಳೀಧರ್ |
| ನಿರೂಪಣೆ | : | ಶ್ರೀಮತಿ ದೀಪಾ ನಾಗರಾಜ್, ಹಾವೇರಿ |

### ಸಾಂಸ್ಕೃತಿಕ ಕಾರ್ಯಕ್ರಮ

**ಮಧ್ಯಾಹ್ನ 2.00 ರಿಂದ 3.30ರವರೆಗೆ**

**ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ**

ನಿರೂಪಣೆ : ಶ್ರೀಮತಿ ಶಾಂತ ಗಣೇಶ್, ಉಡುಪಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

## "ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ

### ಗಾರ್ಗಿವೇದಿಕೆ

**ದಿನಾಂಕ 07-01-2024 ಭಾನುವಾರ - ಬೆಳಿಗ್ಗೆ 10.30 ರಿಂದ 11.30**

**ಸಾಂಸ್ಕೃತಿಕ ಕಾರ್ಯಕ್ರಮ**

**ರಾಜ್ಯದ ವಿವಿಧ ಜಿಲ್ಲಾ ವಿಪ್ರ ಮಹಿಳಾ ತಂಡಗಳಿಂದ**

ಸಂಯೋಜಕರು : ಶ್ರೀಮತಿ ಮಾಯಾ ಬಾಲಚಂದ್ರ, ಕೋಲಾರ

ನಿರೂಪಣೆ : ಶ್ರೀಮತಿ ಭಾರತಿ ಸುರೇಶ್, ಬೆಂಗಳೂರು

### ವಿಚಾರ ಗೋಷ್ಠಿ-4

**ಬೆಳಿಗ್ಗೆ 11.30 ರಿಂದ 12.30ರ ವರೆಗೆ**

| | | |
|---|---|---|
| ವಿಷಯ | : | **ಮಹಿಳಾ ಸಬಲೀಕರಣ ಹಾಗೂ ಕೌಶಲ್ಯಾಭಿವೃದ್ಧಿ** |
| ಸ್ವಾಗತ | : | ಶ್ರೀಮತಿ ಉಮಾ ದೊರೆಸ್ವಾಮಿ, ಮಂಡ್ಯ |
| ಅಧ್ಯಕ್ಷತೆ | : | **ಶ್ರೀಮತಿ ಪ್ರಿಯಾ ಪುರಾಣಿಕ್** |
| ವಿಚಾರ ಮಂಡನೆ | : | **ಶ್ರೀಮತಿ ಸಾಧನಾ ಪೋಟೆ**<br>ಜಂಟಿ ನಿರ್ದೇಶಕರು, ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಸರ್ಕಾರ |
| ನಿರೂಪಣೆ | : | ಶ್ರೀಮತಿ ಪನ್ನಗ |

### ವಿಚಾರ ಗೋಷ್ಠಿ-5

**ಮಧ್ಯಾಹ್ನ 12.30 ರಿಂದ ಸಂಜೆ 2.30 ರವರೆಗೆ**

| | | |
|---|---|---|
| ವಿಷಯ | : | **ಕನ್ನಡ ಸಾಹಿತ್ಯ ಮತ್ತು ಮಹಿಳೆ** |
| ಸ್ವಾಗತ | : | ಶ್ರೀಮತಿ ಕಲಾವತಿ, ಗದಗ್ |
| ಅಧ್ಯಕ್ಷತೆ | : | **ಶ್ರೀಮತಿ ಸಂಧ್ಯಾ ಶರ್ಮ** |
| ವಿಚಾರ ಮಂಡನೆ | : | ಶ್ರೀಮತಿ ವಿಜಯಾ ಭಟ್<br>ಡಾ॥ ಅನಸೂಯಾ ದೇವಿ<br>ಡಾ॥ ಮಂಗಳಾ ಪ್ರಿಯದರ್ಶಿನಿ<br>ಡಾ॥ ಎಲ್.ಜಿ. ಮೀರಾ |
| ನಿರೂಪಣೆ | : | ಶ್ರೀಮತಿ ರಾಧಿಕಾ |

### ಸಮ್ಮೇಳನ ಸಾರ್ವಜನಿಕ ಸಂಪರ್ಕ ಮಾಹಿತಿ

ಶ್ರೀಮತಿ ಶ್ವೇತಾ ಶಾಸ್ತ್ರೀ – ಬೆಂಗಳೂರು
ಶ್ರೀಮತಿ ನಾಗರತ್ನ – ಬೆಂಗಳೂರು
ಶ್ರೀಮತಿ ದೀಪಾ ಹರ್ಷ – ಬೆಂಗಳೂರು
ಶ್ರೀಮತಿ ಶ್ವೇತಾ ಪಿ. ರಾವ್ – ಬೆಂಗಳೂರು
ಶ್ರೀಮತಿ ಶಶಿಕಲಾ – ಬೆಂಗಳೂರು
ಶ್ರೀಮತಿ ಸಂಗೀತಾ ಸತೀಶ್ – ಬೆಂಗಳೂರು
ಶ್ರೀಮತಿ ಭಾರತೀ ಸುರೇಶ್ – ಬೆಂಗಳೂರು

ವಿಶೇಷ ಸೂಚನೆ : ಸಮ್ಮೇಳನದ ಎಲ್ಲಾ ವೇದಿಕೆಗಳಲ್ಲಿ ಗುರು **ದ್ರೋಣಾಚಾರ್ಯ ಸಮ್ಮಾನ ಪ್ರಶಸ್ತಿ ಪುರಸ್ಕೃತ ಡಾ॥ ಜಿ.ಜಿ. ಮೆಹಂದಳೇ** ಇವರು ರಚಿಸಿರುವ ಸ್ವತಂತ್ರ ಹೋರಾಟಗಾರರ ಭಾವಚಿತ್ರ ಪ್ರದರ್ಶನಗೊಳ್ಳಲಿದೆ. ಕೋವಿಡ್ ಮುಂಜಾಗ್ರತ ಕ್ರಮವಾಗಿ ದಯಮಾಡಿ ಸರ್ವರೂ ಮಾಸ್ಕ್ ಕಡ್ಡಾಯವಾಗಿ ಧರಿಸಬೇಕಾಗಿ ಕೋರಿಕೆ.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

# "ಅಭಿಜಾತೆ-2024" ತೃತೀಯ ವಿಪ್ರ ಮಹಿಳಾ ಸಮ್ಮೇಳನ

### ಸಮ್ಮೇಳನ ಕೇಂದ್ರ ಸಮಿತಿ :

**ಶ್ರೀ ಅಶೋಕ ಹಾರನಹಳ್ಳಿ** – ಮಹಾಸಭಾ ಅಧ್ಯಕ್ಷರು
**ಶ್ರೀಮತಿ ಅಲ್ಕಾ ಸುಧೀರ ಇನಾಮದಾರ** – ಸಮ್ಮೇಳನ ಗೌರವಾಧ್ಯಕ್ಷರು
**ಶ್ರೀಮತಿ ಮೇದಿನಿ ಉದಯ ಗರುಡಾಚಾರ್** – ಸಮ್ಮೇಳನ ಕಾರ್ಯಾಧ್ಯಕ್ಷರು
**ಶ್ರೀಮತಿ ಡಾ॥ ಶುಭಮಂಗಳ ಸುನಿಲ್** – ಸಮ್ಮೇಳನ ಸಂಚಾಲಕರು

### ಮಹಾಸಭಾ ಮಹಿಳಾ ಉಪಾಧ್ಯಕ್ಷರು

**ಶ್ರೀಮತಿ ಪುಷ್ಪಾ ಐಯ್ಯಂಗಾರ್** ಮೈಸೂರು
**ಶ್ರೀಮತಿ ಸಾವಿತ್ರಿ ರಮೇಶ್** ಬೆಂಗಳೂರು
**ಶ್ರೀಮತಿ ರೂಪಾ ಶಾಸ್ತ್ರಿ** ಬೆಂಗಳೂರು

### ಸಮ್ಮೇಳನ ಉಪಾಧ್ಯಕ್ಷರು

ಶ್ರೀಮತಿ ನಾಗರತ್ನ ಸಿ.ಕೆ. ರಾಮಮೂರ್ತಿ – ಬೆಂಗಳೂರು
ಶ್ರೀಮತಿ ಶಕುಂತಲಾ ಅಯ್ಯರ್ – ಬೆಂಗಳೂರು
ಶ್ರೀಮತಿ ಪ್ರಿಯಾ ಪುರಾಣಿಕ್ – ಬೆಳಗಾವಿ
ಶ್ರೀಮತಿ ಭಾರ್ಗವಿ ಕುಲಕರ್ಣಿ – ಕಲ್ಬುರ್ಗಿ
ಶ್ರೀಮತಿ ಉಮಾ ಸೋಮಯಾಜಿ – ಮಂಗಳೂರು
ಶ್ರೀಮತಿ ಛಾಯಾ ರಾಮಶೇಷ – ತುಮಕೂರು
ಶ್ರೀಮತಿ ಮಾಯಾ ಬಾಲಚಂದ್ರ – ಕೋಲಾರ
ಶ್ರೀಮತಿ ಸುಜಯಾ ಶ್ರೀನಾಥ – ಚಿಂತಾಮಣಿ
ಶ್ರೀಮತಿ ಮಂಜುಳಾ ರವಿಸುಬ್ರಹ್ಮಣ್ಯ – ಬೆಂಗಳೂರು
ಶ್ರೀಮತಿ ಶಾರದಾ ಸುಬ್ರಹ್ಮಣ್ಯ – ಬೆಂಗಳೂರು
ಶ್ರೀಮತಿ ಶಾಂತಕುಮಾರಿ ಎನ್. – ಚಿಕ್ಕಮಗಳೂರು
ಶ್ರೀಮತಿ ಡಾ॥ ಬಿ. ಲಕ್ಷ್ಮೀದೇವಿ ಕೆ.ವಿ. – ಮೈಸೂರು
ಶ್ರೀಮತಿ ರೇಖಾ ಡಿ.ಕೆ. – ರಾಯಚೂರು
ಶ್ರೀಮತಿ ಸುರೇಖಾ ಮುರಳೀಧರ್ – ಶಿವಮೊಗ್ಗ
ಶ್ರೀಮತಿ ಅಂಬಿಕಾ ರಾಮಚಂದ್ರ – ಬೆಂಗಳೂರು
ಶ್ರೀಮತಿ ನಿರ್ಮಲಾ ಹೆಗ್ಡೆ – ಉತ್ತರ ಕನ್ನಡ

### ಸಮ್ಮೇಳನ ಸಂಯೋಜಕರು

ಶ್ರೀಮತಿ ಡಾ॥ ರೂಪಶ್ರೀ ಶಶಿಕಾಂತ್ – ದಾವಣಗೆರೆ
ಶ್ರೀಮತಿ ವಿಜಯಲಕ್ಷ್ಮೀ – ಮೈಸೂರು
ಶ್ರೀಮತಿ ಶ್ರೀದೇವಿ – ತುಮಕೂರು
ಶ್ರೀಮತಿ ಮಮತಾ ರಮೇಶ್ – ಮಂಡ್ಯ
ಶ್ರೀಮತಿ ಗೀತಾ ಚಿಪ್ಳೂಣಕರ್ – ಬೆಂಗಳೂರು
ಶ್ರೀಮತಿ ಕಲಾವತಿ – ಗದಗ್
ಶ್ರೀಮತಿ ವತ್ಸಲಾ ರಾಜಗೋಪಾಲ್ – ಚಾಮರಾಜನಗರ
ಶ್ರೀಮತಿ ದೀಪಾ ನಾಗರಾಜ – ಹಾವೇರಿ
ಶ್ರೀಮತಿ ಅನುಶ್ರೀ ದೇಶಪಾಂಡೆ – ಬೆಳಗಾವಿ
ಶ್ರೀಮತಿ ಶಾಂತಾ ಗಣೇಶ್ – ಉಡುಪಿ
ಶ್ರೀಮತಿ ಹೇಮಾ ಶ್ರೀಪಾದ ದೇಸಾಯಿ – ಧಾರವಾಡ
ಶ್ರೀಮತಿ ಗೀತಾ ದೇಸಾಯಿ – ಹುಬ್ಬಳ್ಳಿ
ಶ್ರೀಮತಿ ಭಾಗ್ಯಶ್ರೀ – ಯಾದಗಿರಿ
ಶ್ರೀಮತಿ ನಿರ್ಮಲ ಹೆಗಡೆ,ಗೋಳಿಕೊಪ್ಪ – ಉತ್ತರ ಕನ್ನಡ
ಶ್ರೀಮತಿ ಸಂಧ್ಯಾ ನಾಗಭೂಷಣ್ – ಹಾಸನ
ಶ್ರೀಮತಿ ಜಯಶ್ರೀ ಕಣ್ಣೂರು – ವಿಜಯಪುರ
ಶ್ರೀಮತಿ ಸುನಿತ ಶ್ರೀಧರ್ – ಶಿವಮೊಗ್ಗ
ಶ್ರೀಮತಿ ಕಲ್ಪನಾ ಸುಂದರೇಶ್ – ರಾಮನಗರ
ಶ್ರೀಮತಿ ವೈಷ್ಣವಿ ಹುಲಗಿ – ಕೊಪ್ಪಳ
ಶ್ರೀಮತಿ ಹೇಮಾ ದೇಸಾಯಿ – ಬಾಗಲಕೋಟೆ
ಶ್ರೀಮತಿ ನಂದಿನಿ ವಿಜಯ ವಿಠಲ – ಬೆಂಗಳೂರು
ಶ್ರೀಮತಿ ವಿಜಯಲಕ್ಷ್ಮೀ – ಬಳ್ಳಾರಿ
ಶ್ರೀಮತಿ ಗೀತಾ ಸಂಪತ್ ಸರಳಾಯ – ಕೊಡಗು
ಶ್ರೀಮತಿ ರೇಣುಕಾ ಜೋಶಿ – ಬೀದರ್
ಶ್ರೀಮತಿ ಪದ್ಮಾ ಪ್ರಕಾಶ್ – ಬೆಂಗಳೂರು
ಶ್ರೀಮತಿ ಸ್ವಾತಿ ವೆಂಕಟೇಶ – ಕೋಲಾರ

### ಸಮ್ಮೇಳನ ಸಹ ಸಂಯೋಜಕರು

ಶ್ರೀಮತಿ ಸುಮಾ ಕಲ್ಯಾಣಿ – ಬೆಂಗಳೂರು
ಶ್ರೀಮತಿ ಶ್ರೀಲಕ್ಷ್ಮೀ ರವಿಶಂಕರ್ – ಬೆಂಗಳೂರು
ಶ್ರೀಮತಿ ನಾಗಮಣಿ – ಶೃಂಗೇರಿ
ಶ್ರೀಮತಿ ಮಂಜುಳಾ ಸತೀಶ್ – ವಿಜಯಪುರ, ಬೆಂ. ಗ್ರಾ.
ಶ್ರೀಮತಿ ಉಷಾ ಮಂಜುನಾಥ – ತುಮಕೂರು
ಶ್ರೀಮತಿ ಶ್ವೇತಾ ಶಾಸ್ತ್ರೀ – ಬೆಂಗಳೂರು
ಶ್ರೀಮತಿ ವಂದನಾ ಫಡಕೆ – ಬೆಂಗಳೂರು
ಶ್ರೀಮತಿ ಸೌಭಾಗ್ಯ ಶ್ರೀನಿವಾಸ – ಬಳ್ಳಾರಿ
ಶ್ರೀಮತಿ ವೀಣಾ ಹೆಗಡೆ – ಹುಬ್ಬಳ್ಳಿ
ಶ್ರೀಮತಿ ಸರಸ್ವತಿ ಪ್ರಕಾಶ್ – ಹೊಸಪೇಟೆ

# ಬ್ರಾಹ್ಮಣ ಸೇವಾಶ್ರಮ ಸಂಘ

**ನಂ:68,4ನೇ ಕ್ರಾಸ್, ಮಾದಾವರ ನ್ಯೂಟೌನ್, ಮಾದಾವರ ಪೋಸ್ಟ್, ಬೆಂಗಳೂರು – 562162**
**ಮೊ :– 9342330134 – 9379354584 – 9019329575**

## ವೃದ್ಧಾಶ್ರಮಕ್ಕೆ ತ್ರಿಮತಸ್ಥ ಬ್ರಾಹ್ಮಣ ವೃದ್ಧರಿಗೆ ಆಹ್ವಾನ

ನಮ್ಮ ವೃದ್ಧಾಶ್ರಮದಲ್ಲಿ ಸುಮಾರು ಹದಿನೈದು ವರ್ಷಗಳಿಂದ ಕೇವಲ ಬ್ರಾಹ್ಮಣರಿಗಾಗಿ ಉತ್ತಮ ಸೇವೆ ನೀಡುತ್ತಿರುವ ವಿಷಯ ನಿಮಗೆಲ್ಲತಿಳಿದಿದೆ ಎಂದು ಬಾವಿಸುತ್ತೇನೆ. ಇದೀಗ ನಮ್ಮ ವೃದ್ಧಾಶ್ರಮಕ್ಕೆ 60 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವೃದ್ಧರನ್ನು ಆಹ್ವಾನಿಸಲಾಗಿದೆ. ಈ ಸೇವೆಯ ಅವಶ್ಯ ಉಳ್ಳವರು ಸಂಪರ್ಕಿಸಿ.

**ಹಾಸಿಗೆ ಹಿಡಿದಿರುವ ವೃದ್ಧರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ**

ಇಲ್ಲಿ ಸ್ನಾನಕ್ಕೆ ಬಿಸಿನೀರು, ಪ್ರಾಥನೆಗಾಗಿ ಭವಾನಿಶಂಕರ ದೇವಸ್ಥಾನ ಇದೆ, ಉತ್ತಮ ಊಟೋಪಹಾರ, ವಾಕಿಂಗ್ ಸ್ಥಳಾವಕಾಶ, ಮನರಂಜನೆಗೆ ಟಿ.ವಿ ಹಾಗೂ ಇತರೇ ಹೆಚ್ಚಿನ ಸೌಲಭ್ಯವಿದೆ.ದಯಮಾಡಿ ಇದನ್ನು ನಿಮಗೆ ತಿಳಿದಿರುವ ಬ್ರಾಹ್ಮಣರಿಗೆ ಹಾಗೂ ನಿಮ್ಮಲ್ಲಿರುವ ಬ್ರಾಹ್ಮಣ ಗುಂಪುಗಳಿಗೆ ಕಳುಹಿಸಿಕೊಡಿ. ಈ ಸೇವೆಯ ಅವಶ್ಯ ವಿರುವವರಿಗೆ ಇದನ್ನು ತಲುಪಿಸಿ ಎಂದು ಕೋರುತ್ತೇನೆ.

**– ವ್ಯವಸ್ಥಾಪಕರು**

**ಹೆಚ್ಚಿನ ವಿವರಗಳಿಗೆ ದಯಮಾಡಿ ಸಂಪರ್ಕಿಸಿ**
9342330134

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

## ಸಾರ್ಥಕ ವೆಚ್ಚ

ನಾವು ದುಡಿದು ಹಣಗಳಿಸಿದ ದಿನದಿಂದ ಹಲವಾರು ಕಾರ್ಯಗಳಿಗಾಗಿ ಖರ್ಚು ಮಾಡುತ್ತೇವೆ. ಈ ಖರ್ಚು–ವೆಚ್ಚ ಕೆಲವು ಮೂಲಭೂತ ಅವಶ್ಯಕತೆಗಳನ್ನು ತೀರಿಸಿಕೊಳ್ಳಲು ಇರಬಹುದು. ಕೆಲವು ಬಾರಿ ಒಣಪ್ರತಿಷ್ಠೆಗೋಸ್ಕರ, ಸಮಾಜದ ಒಳಿತಿಗೊಸ್ಕರ ವೆಚ್ಚ ಮಾಡಿರಬಹುದು. ಹಣದ ಮೌಲ್ಯ ಬಹಳ ದುಬಾರಿಯಾದದ್ದು. ಈ ವೆಚ್ಚಗಳಲ್ಲಿ ಯಾವುದು ಸಾರ್ಥಕವಾದದ್ದು, ಯಾವುದು ನಿಷ್ಪ್ರಯೋಜಕವಾದದ್ದು ಎಂದು ವಿಚಾರ ಮಾಡಬೇಕು. ಈ ದಿಶೆಯಲ್ಲಿ ಸೂಕ್ತಿಮಾಲಾದ ಒಂದು ಶ್ಲೋಕವು ನನ್ನ ಗಮನ ಸೆಳೆಯುತ್ತದೆ.

**ಯಜ್ಞೇ ವಿವಾಹೇ ವ್ಯಸನೇ ರಿಪುಕ್ಷಯೇ ಯಶಸ್ಕರೇ ಕರ್ಮಣಿ ಮಾತ್ರ ಸಂಗ್ರಹೇ ।**
**ಪ್ರಿಯಾಸು ನಾರೀಷು ಅಧನೇಷು ಬಾಂಧವೇಷು ಅಪವ್ಯಯೋ ನಾಸ್ತಿ ನರಾಧಿಪಾಷುಸು ॥**

ಭಗವಂತನಿಗೆ ಮಾಡುವ ಪೂಜೆ, ಹೋಮ, ಹವನ, ದಾನ ಮುಂತಾದವು ಯಜ್ಞ. ಯಜ್ಞವೆಂದರೆ ಕೇವಲ ತುಪ್ಪ–ಕಟ್ಟಿಗೆ–ಸಮಿತ್ತುಗಳಿಂದ ಮಾಡುವ ವಿಧಿಯಲ್ಲ. ಗೀತೆಯಲ್ಲಿ ಹೇಳಿರುವಂತೆ "ನಮ್ಮ ಹತ್ತಿರವಿರುವ ಹೆಚ್ಚಿನ ಹಣವನ್ನು ಒಳ್ಳೆಯ ಕೆಲಸಕ್ಕೆ ವಿನಿಯೋಗಿಸುವುದು ದಾನವೆಂಬ ಯಜ್ಞ". ಎರಡನೆಯ ಸಾರ್ಥಕ ವೆಚ್ಚ ವಿವಾಹಕ್ಕೋಸ್ಕರ. "ವಿವಾಹವೆಂಬುದು ಮನುಷ್ಯನ ಅಂತರಂಗ ಉದ್ದೇಶದ ಬಹಿರಂಗ ಘೋಷಣೆ ಎಂದು ಚಿಂತಕ ಬರ್ನಾಡ್ ಷಾ ಹೇಳುತ್ತಾನೆ. ಈ ವಿವಾಹ ಭಾರತೀಯ ಸಂಸ್ಕೃತಿಯಲ್ಲಿ ಬಹಳ ಮಹತ್ವದ ಸ್ಥಾನ ಪಡೆದಿದೆ. ಅವರು ತಮ್ಮತಮ್ಮ ಅಂತಸ್ತು, ಅನುಕೂಲಗಳಿಗೆ ತಕ್ಕಂತೆ ವಿವಾಹ ಮಾಡುತ್ತಾರೆ, ಮಾಡಿಕೊಳ್ಳುತ್ತಾರೆ. ಬಂಧು–ಬಾಂಧವರ, ಹಿತೈಷಿಗಳ ಸಮ್ಮುಖದಲ್ಲಿ ಜರಗುವ ಸಮಾರಂಭಕ್ಕೆ ಮಾಡಿದ ವೆಚ್ಚ ಸಾರ್ಥಕವಾದುದು.

ನಾವೆಲ್ಲರೂ ವೈಯಕ್ತಿಕವಾಗಿ ವಿಭಿನ್ನವಾದ ಅಭಿರುಚಿಯನ್ನು ಹೊಂದಿರುತ್ತೇವೆ. ಒಳ್ಳೆಯ ಅಭಿರುಚಿಗೋಸ್ಕರ ಹಣವನ್ನು ಖರ್ಚು ಮಾಡುತ್ತೇವೆ. ಉದಾಹರಣೆಗೆ ಈ ಒಳ್ಳೆಯ ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ, ಅಪರೂಪದ ಕಲಾಕೃತಿಗಳ, ನಾಣ್ಯಗಳ, ಸಂಗ್ರಹಣೆ, ಸಾಹಸ ಚಟುವಟಿಕೆಗಳು, ಸಂಗೀತ ದೃಶ್ಯ–ಶ್ರಾವ್ಯ ಮುದ್ರಿಕೆಗಳು, ಅಂಚೆ ಚೀಟಿಗಳು ಮುಂತಾದವು. ಈ ನಾನಾವಿಧವಾದ ಅಭಿರುಚಿಗಳಿಗಾಗಿ, ಮನಸ್ಸಿನ ಸಂತೋಷಕ್ಕಾಗಿ ಮಾಡುವುದು ಸಾರ್ಥಕ ವೆಚ್ಚ. ಯಾವುದೇ ದೇಶವು ನಮಗೆ ಶತ್ರುವಾಗಿ ವಿಪರೀತ ಕಿರುಕುಳ ಕೊಡಲು ಪ್ರಾರಂಭಿಸಿದರೆ, ನಮ್ಮ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಲು ಪ್ರಾರಂಭಿಸಿದರೆ, ಅಂತಹವರನ್ನು ಬಗ್ಗುಬಡಿಯಲು ನಮ್ಮ ದೇಶದ ನಾಯಕರು ವಿಶೇಷ ರೀತಿಯಲ್ಲಿ ರಕ್ಷಣಾ ತಂತ್ರಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಬೇಕಾಗುತ್ತದೆ. ಅದೂ ಸಾರ್ಥಕ ವೆಚ್ಚವೇ.

ಸಾಧಾರಣವಾಗಿ ನಾವು ಮಾಡುವ ಸಾರ್ವಜನಿಕ ಸೇವೆಯನ್ನು ನಮ್ಮವರು ಗುರುತಿಸಬೇಕು ಎಂಬ ಸುಪ್ತ ಬಯಕೆ ಇರುತ್ತದೆ. ಕೆಲವು ಬಾರಿ ನಾವು ಬರೆದ ಕಾವ್ಯ, ಕತೆ–ಕಾದಂಬರಿಗಳು ಹಲವರಿಗೆ ತಲುಪಬೇಕು ಎಂಬ ಕಾರಣಕ್ಕಾಗಿ ಪ್ರಕಟನೆ ಮಾಡುತ್ತೇವೆ. ಸಾರ್ವಜನಿಕ ಸೇವಾ ಸಂಸ್ಥೆಗಳಿಗೆ ಮಂದಿರ–ಚರ್ಚ್–ಮಸೀದಿಗಳಿಗೆ ದಾನ ಮಾಡುತ್ತೇವೆ. ಇವುಗಳಿಗೆ ಮಾಡುವ ಖರ್ಚು–ಸಾರ್ಥಕ ವೆಚ್ಚವೇ. ನಮ್ಮ ಹಿತೈಷಿಗಳಿಗೆ, ಆತ್ಮೀಯರಿಗೆ ಮಾಡುವ ಸಹಾಯ, ಏರ್ಪಡಿಸುವ ಸಂತೋಷ, ಔತಣ ಕೂಟ ಇವೂ ಸಾರ್ಥಕ ವೆಚ್ಚದಲ್ಲಿ ಸೇರುತ್ತದೆ. ಪ್ರೀತಿಯ ಹೆಂಡತಿಯ, ನಲ್ಲೆಯ ಸಂತೋಷಕ್ಕಾಗಿ ನೀಡುವ ಉಪಾಹಾರ, ಆಭರಣ, ಕೊಡಿಸುವ ವೇಷ–ಭೂಷಣಗಳು ಸಾರ್ಥಕ ವೆಚ್ಚವೇ. All is fair and foul in love and war ಎಂಬ ಷೇಕ್ಸ್‌ಪಿಯರ್‌ನ ನುಡಿ ತಮಗೆಲ್ಲರಿಗೂ ತಿಳಿದಿದೆಯಲ್ಲವೇ? ಒಂದು ಪಕ್ಷ ನಮಗೆ ಬಡವರಾದ ಬಂಧುಗಳಿದ್ದರೆ ಅವರಿಗೆ ಧನ ಸಹಾಯ ಮಾಡಿದರೆ, ಒಂದಷ್ಟು ಸಹಾಯ ಸಲ್ಲಿಸಿದರೆ ಅದೂ ಸಾರ್ಥಕ ವೆಚ್ಚ. ಗಳಿಸಿದ ಹಣವು ಸದ್ವಿನಿಯೋಗವಾಗಬೇಕಾದರೆ, ಈ ಎಂಟು ಕಾರ್ಯಗಳಿಗಾಗಿ ಮಾಡಿದ ಖರ್ಚು–ಸಾರ್ಥಕ ವೆಚ್ಚವಾಗುತ್ತದೆ. ನಮಗೆ ಕೀಳರಿಮೆ ಬಾಧಿಸುವುದಿಲ್ಲ. ಹಣದ ಅಪಮೌಲ್ಯವೂ ಆಗುವುದಿಲ್ಲ.

– **ಪ್ರೊ. ಎಂ.ಕೆ. ಶ್ರೀಧರ್,** ಪ್ರಧಾನ ಸಂಪಾದಕರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**– ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ಬ್ರಹ್ಮಜ್ಞಾನಾವಲೀಮಾಲಾ

**– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ**

**ಮಾಯಾತತ್ಕಾರ್ಯದೇಹಾದಿ ಮಮ ನಾಸ್ತ್ಯೇವ ಸರ್ವದಾ ।**
**ಸ್ವಪ್ರಕಾಶೈಕರೂಪೋಽಹಮಹಮೇವಾಹಮವ್ಯಯಃ ॥ 9 ॥**

**ಅನುವಾದ :** ನನಗೆ ಯಾವಾಗಲೂ ಮಾಯೆ ಹಾಗೂ ಅದರ ಕಾರ್ಯಗಳಾದದೇಹಾದಿಗಳು ಇಲ್ಲವೇ ಇಲ್ಲ. ಸ್ವಪ್ರಕಾಶವೊಂದೇ ನನ್ನ ಸ್ವರೂಪ.

**ವಿವರಣೆ :** ಅಖಂಡವಾದ ಬ್ರಹ್ಮವೊಂದೇ ಸತ್ಯವಾಗಿದ್ದಲ್ಲಿ ಈ ಜಗತ್ತು ಹೇಗೆ ಕಾಣಿಸಿಕೊಳ್ಳುತ್ತದೆ ಎನ್ನುವ ಪ್ರಶ್ನೆಗೆವೇದಾಂತದಲ್ಲಿರುವಉತ್ತರವೇ ಮಾಯೆ ಎನ್ನುವ ತತ್ತ್ವ. ಮಾಯೆಯು ಸ್ವತಃ ಮಿಥ್ಯೆಯಾಗಿದ್ದು ಮಿಥ್ಯೆಯಾದ ಈ ಜಗತ್ತಿನ ರೂಪದಲ್ಲಿ ಪರಿಣಾಮವನ್ನು ಹೊಂದಿರುತ್ತದೆ. ಪಂಚ ಭೂತಗಳು ಹಾಗೂ ಅವುಗಳಿಂದ ನಿರ್ಮಿತವಾದ ಈ ದೇಹ, ಇಂದ್ರಿಯ ಇತ್ಯಾದಿಗಳು ಮಾಯೆಯಕಾರ್ಯವೇ ಆಗಿವೆ. ಸತ್ಯ ವಸ್ತುವಾದ ಆತ್ಮನಿಗೆ ಮಿಥ್ಯೆಯಾದ ದೇಹಾದಿಗಳೊಂದಿಗೆ ವಾಸ್ತವವಾದ ಸಂಬಂಧವು ಇರಲು ಸಾಧ್ಯವಿಲ್ಲ. ಆತ್ಮ ಹಾಗೂ ಅನಾತ್ಮ ಇವುಗಳ ನಡುವಿನ ಸಂಬಂಧವೂ ಮಿಥ್ಯೆಯಾದದ್ದೇ ಎನ್ನುವುದು ವೇದಾಂತದ ಸಿದ್ಧಾಂತ. ಮರೀಚಿಕೆಯ ನೀರಿನೊಂದಿಗೆ ಮರುಭೂಮಿಯ ಸಂಬಂಧವು ಕೇವಲ ಕಲ್ಪಿತವೇ ಹೊರತು ವಾಸ್ತವವಲ್ಲ. ಅದೇ ರೀತಿ ಅನಾತ್ಮವಾದ ಮಾಯೆ ಹಾಗೂ ಅದರ ಕಾರ್ಯಗಳೊಂದಿಗೆ ಆತ್ಮನ ಸಂಬಂಧವೂ ಅಜ್ಞಾನದಿಂದ ಕಲ್ಪಿಸಲ್ಪಟ್ಟಿದೆ. ಹಾಗಾಗಿ ಜ್ಞಾನದ ದೃಷ್ಟಿಯಿಂದ ನೋಡಿದರೆ ಯಾವ ಕಾಲದಲ್ಲೂ ಆತ್ಮನು ದೇಹಾದಿಗಳೊಂದಿಗೆ ಅಥವಾ ಅವುಗಳ ಗುಣಗಳೊಂದಿಗೆ ಸಂಬಂಧವನ್ನು ಹೊಂದುವುದಿಲ್ಲ.

ಚೈತನ್ಯವು ಸ್ವಪ್ರಕಾಶ ಎನ್ನಲ್ಪಡುತ್ತದೆ. ಯಾವುದು ಬೇರೆಯ ಪ್ರಕಾಶದ ಅಪೇಕ್ಷೆಯಿಲ್ಲದೆ ಬೆಳಗುವುದೋ ಅದು ಸ್ವಪ್ರಕಾಶ. ಆತ್ಮನ ಚೈತನ್ಯ ಸ್ವರೂಪವು ಈ ಸೂರ್ಯಾದಿ ಜಗತ್ತನ್ನು ಬೆಳಗುತ್ತದೆ. ಆದರೆ ಆತ್ಮನನ್ನು ಬೆಳಗಲು ಬೇರೆ ಚೈತನ್ಯದ ಅಗತ್ಯವಿಲ್ಲ. ಹಾಗಾಗಿ ಆತ್ಮನು ಸ್ವಪ್ರಕಾಶ. ಸ್ವಪ್ರಕಾಶನಾದ ಆತ್ಮನಲ್ಲಿ ಜಡದ ಲವಲೇಶವೂ ಇಲ್ಲ. ಆತ್ಮನು ಚೈತನ್ಯ ಮಾತ್ರ ಸ್ವರೂಪನು. ಕೆಲವರು ದಾರ್ಶನಿಕರು ಆತ್ಮನು ಚೈತನ್ಯ ಹಾಗೂ ಜಡ ಎರಡೂ ಸ್ವಭಾವಗಳನ್ನೂ ಹೊಂದಿದ್ದಾನೆ ಎಂದು ತಿಳಿಯುತ್ತಾರೆ. ಆದರೆ ಅವರ ಈ ವಾದ ವೇದಾಂತದ ಸಿದ್ಧಾಂತಕ್ಕೆ ವಿರುದ್ಧವಾದದ್ದು.

**ಗುಣತ್ರಯವ್ಯತೀತೋಽಹಂಬ್ರಹ್ಮಾದೀನಾಂ ಚ ಸಾಕ್ಷ್ಯಹಮ್ ।**
**ಅನಂತಾನಂದರೂಪೋಽಹಮಹಮೇವಾಹಮವ್ಯಯಃ ॥ 10 ॥**

**ಅನುವಾದ :** ನಾನು ಮೂರು ಗುಣಗಳನ್ನು ಮೀರಿದವನು. ನಾನು ಬ್ರಹ್ಮಾದಿಗಳಿಗೂ ಸಾಕ್ಷಿಯಾದವನು. ನಾನು ಅನಂತಾನಂದ ಸ್ವರೂಪನು.

**ವಿವರಣೆ :** ಮಾಯೆಯು ಸತ್ತ್ವ ರಜಸ್ಸು ಹಾಗೂ ತಮಸ್ಸು ಎನ್ನುವ ಮೂರು ಗುಣಗಳನ್ನೊಳಗೊಂಡಿದೆ. ಈ ಜಗತ್ತು ಮಾಯೆಯ ಕಾರ್ಯವಾದ್ದರಿಂದ ಈ ಜಗತ್ತಿನಲ್ಲೂ ಈ ಮೂರು ಗುಣಗಳು ಇವೆ. ಕೆಲವು ಪದಾರ್ಥಗಳಲ್ಲಿ ಸತ್ತ್ವಗುಣ ಹೆಚ್ಚಿದ್ದರೆ ಬೇರೆ ಕೆಲವು ಪದಾರ್ಥಗಳಲ್ಲಿ ರಜಸ್ಸು ಅಥವಾ ತಮಸ್ಸು ಹೆಚ್ಚಿರಬಹುದು. ಸತ್ತ್ವಪ್ರಧಾನವಾದ ಪದಾರ್ಥವನ್ನು ಸಾತ್ತ್ವಿಕ ಎಂದೂ, ರಜಃ ಪ್ರಧಾನವಾದದ್ದನ್ನು ರಾಜಸಿಕ ಎಂದೂ ತಮಃ ಪ್ರಧಾನವಾದದ್ದನ್ನು ತಾಮಸಿಕ ಎಂದೂ ಕರೆಯುತ್ತಾರೆ. ನಮ್ಮ ದೇಹೇಂದ್ರಿಯಗಳೂ ಈ ಸತ್ತ್ವಾದಿ ಗುಣಗಳಿಂದ ಕೂಡಿರುವುದರಿಂದ ತ್ರಿಗುಣಾತ್ಮಕವೇ ಆಗಿದೆ. ಈ ಮೂರು ಗುಣಗಳುಜೀವದ ಬಂಧನಕ್ಕೆ ಕಾರಣವಾಗಿರುತ್ತವೆ ಎಂದು ಭಗವದ್ಗೀತೆಯ 14ನೆಯ ಅಧ್ಯಾಯದ 6, 7 ಹಾಗೂ 8ನೆಯ ಶ್ಲೋಕಗಳು ತಿಳಿಸುತ್ತವೆ. ಅಜ್ಞಾನದಿಂದಾಗಿ ತ್ರಿಗುಣಾತ್ಮಕವಾದ ದೇಹೇಂದ್ರಿಯಗಳಲ್ಲಿ ಅಭಿಮಾನವನ್ನು ಹೊಂದಿದವನು ಈ ಗುಣಗಳಿಂದ ಬಂಧಿಸಲ್ಪಡುತ್ತಾನೆ. ಆದರೆ ಆತ್ಮನ ಸ್ವರೂಪವು ಈ ಮೂರೂಗುಣಗಳನ್ನು ಮೀರಿದೆ. ಅದು ಗುಣಾತೀತವಾದದ್ದು. ಈ ರೀತಿ ತನ್ನ ಸ್ವರೂಪವನ್ನು ತಿಳಿದುಕೊಂಡ ಜ್ಞಾನಿಯುಗುಣಗಳ ಬಂಧನಕ್ಕೆ ಒಳಗಾಗುವುದಿಲ್ಲ. ಹಾಗಾಗಿ ಜ್ಞಾನಿಯಾದವನು ಗುಣಾತೀತ ಎಂದು ಕರೆಯಲ್ಪಡುವನು.

ಹಿರಣ್ಯಗರ್ಭನನ್ನು ಶಾಸ್ತ್ರದಲ್ಲಿ ಬ್ರಹ್ಮಾ ಎನ್ನುವ ಶಬ್ದದಿಂದ ಕರೆಯಲಾಗುತ್ತದೆ. ಸೃಷ್ಟಿಯ ಆದಿಯಲ್ಲಿ ಹಿರಣ್ಯಗರ್ಭನ ಆವಿರ್ಭಾವವಾಗುತ್ತದೆ ಹಾಗೂ ಅವನೇ ಸೃಷ್ಟಿಯ ಮುಂದಿನ ಹಂತಗಳಿಗೆ ಕಾರಣನಾಗುತ್ತಾನೆ. ಹಾಗಾಗಿ ಜಗತ್ತಿನಲ್ಲಿರುವ ಉಳಿದ ಜೀವಗಳಿಗಿಂತ ಹಿರಣ್ಯ ಗರ್ಭನೇ ಶ್ರೇಷ್ಠನೆನಿಸಿಕೊಳ್ಳುವನು. ಆದರೆ ಈ ಹಿರಣ್ಯಗರ್ಭನಂತಹ ಶ್ರೇಷ್ಠ ಉಪಾಧಿಗಳಿಗೂ ಆದಿ ಹಾಗೂ ಅಂತ್ಯ ಇದ್ದೇ ಇದೆ. ನಿತ್ಯನಾದ ಆತ್ಮನು ಹಿರಣ್ಯಗರ್ಭಾದಿ ಉಪಾಧಿಗಳಿಗೂ ಸಾಕ್ಷಿಯಗಿದ್ದು ಅವುಗಳ ಉತ್ಪತ್ತಿ ಹಾಗೂ ಲಯದಕಾಲದಲ್ಲೂ ಯಾವುದೇ ಪರಿವರ್ತನೆಯನ್ನು ಹೊಂದದೆಯೇ ಸದಾ ಪ್ರಕಾಶಸ್ವರೂಪನಾಗಿ ಬೆಳಗುತ್ತಿರುವನು.

(ಮುಂದುವರೆಯುವುದು)

# ಅಧ್ಯಕ್ಷರ ನುಡಿ



**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ಸಂವಿಧಾನದ 370ನೇ ವಿಧಿಯನ್ನು 2019ರಲ್ಲಿ ರದ್ದು ಪಡಿಸಿರುವ ಕೇಂದ್ರ ಸರ್ಕಾರದ ಕ್ರಮ ಸರಿಯಾಗಿದೆ ಎಂದು ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠ ತೀರ್ಪು ನೀಡಿರುವುದು ಅತ್ಯಂತ ಸ್ವಾಗತಾರ್ಹವಾದದ್ದು. ನಮ್ಮ ಪ್ರಜಾತಂತ್ರದ ಇತಿಹಾಸದಲ್ಲಿ ಇದೊಂದು 'ಐತಿಹಾಸಿಕ ಮಹತ್ವದ' ತೀರ್ಪು, ಸ್ವಾತಂತ್ರ್ಯ ನಂತರದ ಭಾರತದ ಇತಿಹಾಸದಲ್ಲಿ ಎರಡು ಪ್ರಮುಖ ಘಟನೆಗಳು ಗಮನಸೆಳೆಯುತ್ತವೆ. ಮೊದಲನೆಯದು, ಬಾಬರ್ ದಂಡನಾಯಕ ಮೀರ್ ಬಾಕಿ ರಾಮಜನ್ಮಭೂಮಿಯ ಶ್ರೀರಾಮಮಂದಿರ ಕೆಡವಿ ಮಸೀದಿ ಕಟ್ಟಿದ್ದರೆ ವಿರುದ್ಧವಾಗಿ ಅನೇಕ ಶತಮಾನಗಳ ಹೋರಾಟದ ನಂತರ ನ್ಯಾಯಾಲಯದಲ್ಲಿ "ಇದು ಹಿಂದೂಗಳ ಶ್ರದ್ಧಾ ಕೇಂದ್ರ" ಎಂಬುದು ಸಾಬೀತಾಗಿ ಈಗ ಭವ್ಯ ರಾಮಮಂದಿರಿ ನಿರ್ಮಾಣವಾಗುತ್ತಿರುವ ಮಹತ್ವದ ಬೆಳವಣಿಗೆ. ಮತ್ತೊಂದು ವಿಷಯ ಎಂದರೆ. ಅನೇಕ ಸಂಸ್ಥಾನಗಳನ್ನು ಒಗ್ಗೂಡಿಸಿ ಸರ್ದಾರ್ ವಲ್ಲಭಭಾಯಿ ಪಟೇಲರು ದೇಶದ ಐಕ್ಯತೆ ಅಖಂಡತೆಯನ್ನು ಸ್ಥಾಪಿಸಲು ಶ್ರಮಿಸಿದ್ದುಗೊತ್ತೇ ಇದೆ. ಅದರಲ್ಲೂ ಹೈದರಾಬಾದ್ ಹಾಗೂ ಕಾಶ್ಮೀರ. ಈ ಎರಡನ್ನೂ ಭಾರತಕ್ಕೆ ಸೇರಿಸಲು ಅವರು ಮಾಡಿದ ಹೋರಾಟ ಸಾಮಾನ್ಯವಲ್ಲ. ಆದರೆ, ಕಾರಣಾಂತರದಿಂದ ಕಾಶ್ಮೀರದ ವಿಷಯದಲ್ಲಿ ಸಮಸ್ಯೆ ಸೃಷ್ಟಿಯಾಯಿತು. ಕಾಶ್ಮೀರದ ಒಂದು ದೊಡ್ಡ ಭಾಗವನ್ನು ಪಾಕಿಸ್ತಾನ ಆಕ್ರಮಿಸಿಕೊಂಡಿತು. ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೇ ಸೇರಬೇಕು ಎಂಬುದು ನ್ಯಾಯಯುತವಾಗಿದ್ದರೂ ಅದಕ್ಕೆ ತಡೆಯೊಡ್ಡುವ ರೀತಿಯಲ್ಲಿ ಸಂವಿಧಾನದ 370ನೇ ವಿಧಿಯಿತ್ತು. ಸಂವಿಧಾನ ರಚನಾ ಸಭೆಯ ಕಾಲದಲಿ ಇಡೀ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಒಪ್ಪಿದ್ದರೂ ಅದನ್ನು ಭಾರತದೊಳಗೆ ವಿಲೀನಗೊಳಿಸುವ ಪ್ರಕ್ರಿಯೆಯಲ್ಲಿ ಒಂದು ತಾತ್ಕಾಲಿಕ ಉಪಬಂಧದ ರೂಪದಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಅಡಿಯಲ್ಲಿ ಇತರ ಭಾರತೀಯರನ್ನು ಜಮ್ಮು ಮತ್ತು ಕಾಶ್ಮೀರದೊಳಗೆ ನೆಲೆಸದಂತೆ ಪ್ರತಿಬಂಧಿಸಲಾಗಿತ್ತು. ಕ್ರಮೇಣ ಕಾಶ್ಮೀರದ ಮೂಲ ನಿವಾಸಿಗಳಾದ ಕಾಶ್ಮೀರಿ ಪಂಡಿತರನ್ನೇ ತಮ್ಮ ರಾಜ್ಯದಿಂದ ಹೊರದಬ್ಬುವ ಬೆಳವಣಿಗೆಗಳೂ ಆದವು.

ಭಾರತದ ಸಂವಿಧಾನ ಇಡೀ ಭಾರತಕ್ಕೆ ಸಮಾನವಾಗಿ ಅನ್ವಯ ವಾಗಬೇಕು. ಭಾರತದ ಪ್ರಜೆಗಳ ನಡುವೆ ತಾರತಮ್ಯ ಇರಬಾರದು ಎಂಬ ಸಕಲ ಭಾರತೀಯರ ಕನಸು 2019ರಲ್ಲಿ 370ನೇ ವಿಧಿಯ ರದ್ದುಪಡಿಸುವಕೆಯಿಂದ ನನಸಾಯಿತು. ಆ ರದ್ಧತಿಯನ್ನು ಕೆಲವರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿ 370ನೇ ವಿಧಿ ತಾತ್ಕಾಲಿಕ. ಅದನು ನಿಷ್ಕ್ರಿಯಗೊಳಿಸುವ, ರದ್ದುಪಡಿಸುವ ಅಧಿಕಾರ ರಾಷ್ಟ್ರಪತಿಗಳಿಗೆ, ಸಂಸತ್ತಿಗೆ ಇದೆ ಎಂಬುದನ್ನು ಎತ್ತಿ ಹಿಡಿಯುವ ಮೂಲಕ ಸಕಲ ಭಾರತೀಯರ ಹಾಗೂ ಸರ್ದಾರ್ ಪಟೇಲರ ಕನಸನ್ನು ಇಂದು ನ್ಯಾಯಾಲಯ ನನಸು ಮಾಡಿದೆ.

ಇಡೀ ಭಾರತ ಈಗ ಒಂದಾಗಿದೆ, ಪಾಕ್ ಆಕ್ರಮಿತ ಕಾಶ್ಮೀರವನ್ನು ಮತ್ತೆ ನಮ್ಮವ ವಶಕ್ಕೆ ಪಡೆಯುವುದೊಂದು. ಬಾಕಿಯಿದ್ದರೂ ಈಗ ನಮ್ಮ ಆಡಳಿತವಿರುವ ನಮ್ಮ ಎಲ್ಲಾ ಭೂಭಾಗಗಳಿಗೂ ನಮ್ಮ ಸಂವಿಧಾನವೇ ಅನ್ವಯವಾಗುತ್ತಿರುವುದು. ಭಾರತೀಯರಿಗೆ ಸಂತೋಷ ನೀಡಿರುವ ಸಂಗತಿ. 370ನೇ ವಿಧಿ ತೆಗೆದುಹಾಕುವಲ್ಲಿ ಪ್ರಚಂಡ ರಾಜಕೀಯ ಇಚ್ಛಾಶಕ್ತಿಯನ್ನು ಮೆರೆದ ಕೇಂದ್ರದ ದಿಟ್ಟಕ್ರಮ ಪ್ರಶಂಸನೀಯವಾದದ್ದು.

ದಿನಾಂಕ : ಜನವರಿ 6-7ರಂದು ನಡೆಯಲಿರುವ ಸನಾತನ ಧರ್ಮದ ಅಂತಃ ಶಕ್ತಿಯಾದ ಮಹಿಳೆಯರ ಸಂಘಟನೆ ಮತ್ತು ಮಹಿಳೆಯರ ಅಭಿವೃದ್ಧಿಗೆ ಹಾಗೂ ಇಂದು ಅವರು ಎದುರಿಸುತ್ತಿರುವ ಸವಾಲುಗಳ ಕುರಿತು **'ಅಭಿಜಾತೆ 2024'** ಮಹಾ ಮಹಿಳಾ ಸಮ್ಮೇಳನದ ಆಹ್ವಾನ ಪತ್ರಿಕೆ ಈ ಸಂಚಿಕೆಯಲ್ಲಿ ಇದೆ. ಮಾಧ್ಯಮ, ಕಲಾ-ಸಾಹಿತ್ಯ, ಧಾರ್ಮಿಕ-ಸಂಸ್ಕೃತಿ, ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ವಿಪ್ರ ಮಹಿಳೆಯರ ಪಾತ್ರದ ಬಗ್ಗೆ ಆಯಾ ಕ್ಷೇತ್ರದ ಪರಿಣಿತ ಮಹಿಳಾ ವಿದ್ವಾಂಸರುಗಳು ಸಮ್ಮೇಳನದಲ್ಲಿ ಆಯೋಜಿಸಿದ ವಿವಿಧ ಗೋಷ್ಠಿಗಳಲ್ಲಿ ಚರ್ಚೆ ನಡೆಸಲಿದ್ದಾರೆ. ಆಧುನಿಕ ಭಾರತದ ಆರ್ಥಿಕ ಅಭಿವೃದ್ಧಿಯ ರುವಾರಿಗಳಲ್ಲಿ ಪ್ರಮುಖರಾದ ದೇಶದ ಅರ್ಥ ಸಚಿವೆ ಡಾ. ನಿರ್ಮಲಾಸೀತಾರಾಮ್‌ರವರಿಂದ ಉದ್ಘಾಟನೆಯಾಗಲಿರುವ ಈ ಸಮ್ಮೇಳನದಲ್ಲಿ ನಾಡಿನ ಎಲ್ಲಾ ಗ್ರಾಮ-ಪಟ್ಟಣಗಳಿಂದ ಮಹಿಳೆಯು ಹಾಗೂ ಮಹನೀಯರು ಪಾಲ್ಗೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮರ್ಯಾದಾ ಪುರುಷೋತ್ತಮನ ದೇವಾಲಯದ ಅನಾವರಣದ ಹಾಗೂ ಶ್ರೀರಾಮಚಂದ್ರ ಮೂರ್ತಿಯ ಪುನಃಪ್ರತಿಷ್ಠಾಪನಾ ನಿಮಿತ್ತ ಲೋಕಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷಿತೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞದ ಸಂಕಲ್ಪವು ಯಶಸ್ವಯಾಗಿ ಪೂರ್ಣಗೊಂಡಿದ್ದು ಶತಕೋಟಿಗಿಂತ ಹೆಚ್ಚು ನಾಮ ಜಪವು ನಾಡಿನಾದ್ಯಂತ ನಡೆದಿದೆಯೆಂದು ತಿಳಿಸಲು ಹರ್ಷಿಸುತ್ತೇನೆ. ಭಾರತೀಯರ ಶತ ಶತಮಾನಗಳ ಕನಸು ನನಸಾಗಲಿರುವ ದಿನವಾದ ಜನವರಿ 22ರಂದು ಅಯೋಧ್ಯಯಲ್ಲಿ ಶ್ರೀರಾಮರ ಪುನಃ ಪ್ರತಿಷ್ಠಾಪನ ಮಹೋತ್ಸವವನ್ನು ಎಲ್ಲಾ ಸನಾತನಿಗಳು ಹಬ್ಬವಾಗಿ ಸಂಭ್ರಮಿಸುವ ಸಲುವಾಗಿ ರಾಮತಾರಕ ಮಹಾ ಯಾಗವನ್ನು ಮಹಾಸಭೇಯು ರಾಜ್ಯಾದ್ಯಾಂತ ಹಮ್ಮಿಕೊಂಡಿದೆ. ಈ ಸಂದರ್ಭದಲ್ಲಿ ಮಹಾಸಭೇಯು ಬೆಂಗಳೂರಿನಲ್ಲಿ ಜನವರಿ 21 ಹಾಗೂ 22ರಂದು ಹಮ್ಮಿಕೊಂಡಿರುವ ಶ್ರೀರಾಮತಾರಕ ಮಹಾಯಾಗ, ಶ್ರೀ ಸೀತಾಕಲ್ಯಾಣೋತ್ಸವ ಮತ್ತು ಶ್ರೀ ರಾಮಚಂದ್ರ ಸ್ವಾಮಿಗೆ ಸಹಸ್ರ ಕಲಾಶಾಭೀಷೆಕ ಮಹೋತ್ಸವದ ಆಹ್ವಾನ ಪತ್ರಿಕೆಯು ಈ ಸಂಚಿಕೆಯಲ್ಲಿದೆ. ತಾವೆಲ್ಲರು ತಮ್ಮ ತಮ್ಮ ಊರುಗಳಲ್ಲಿ ಈ ದಿನವನ್ನು ರಾಷ್ಟ್ರೀಯ ಹಬ್ಬದಂತೆ ವಿಜ್ರಂಬಣೆಯಿಂದ ಆಚರಿಸಿಬೇಕೆಂದು ವಿನಂತಿಸುತ್ತಾ ನಾಡಿನ ಎಲ್ಲಾ ವಿಪ್ರರು ಹಾಗೂ ವಿಶೇಷವಾಗಿ ಬೆಂಗಳೂರು ನಗರದ ವಿಪ್ರ ಭಾಂದವರು ಮಹಾಲಕ್ಷ್ಮಿ ಬಡಾವಣೆಯಲ್ಲಿ ನಡೆಯುವ ಈ ಎರಡೂ ದಿನಗಳ ಕಾರ್ಯಕ್ರಮಕ್ಕೆ ಆಗಮಿಸಿ ಶ್ರೀರಾಮನ ಕೃಪೆಗೆ ಪಾತ್ರರಾಗಬೇಕೆಂದು ಕೇಳಿಕೊಳ್ಳುತ್ತೇನೆ.

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ನಮ್ಮ ಮಹಾಸಭೆಯ ಸನ್ಮಾನ್ಯ ಅಧ್ಯಕ್ಷರ ಸಮರ್ಥ ಮಾರ್ಗದರ್ಶನದಲ್ಲಿ ಜನವರಿ 6–7, 2024ರಂದು ರಾಜ್ಯಮಟ್ಟದ ಮಹಿಳಾ ಸಮ್ಮೇಳನವನ್ನು ಅದ್ದೂರಿಯಾಗಿ ಆಚರಿಸಲು ಸಂಭ್ರಮದಿಂದ ಎಲ್ಲ ರೀತಿಯ ಸಿದ್ಧತೆಗಳು ನಡೆಯುತ್ತಿವೆ. ಈ ಸಮ್ಮೇಳನದಲ್ಲಿ ಹೆಸರಾಂತ ಮಹಿಳಾ ಉದ್ಯಮಿಗಳು, ವೃತ್ತಿಗಾರರು, ನಟಿಯರು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರು ಪಾಲ್ಗೊಳ್ಳಲಿದ್ದಾರೆ. ಈ ಸಮ್ಮೇಳನದ ಮೂಲಕ ವಿಪ್ರ ಮಹಿಳಾ ಧ್ವನಿ ರಾಜ್ಯಾದ್ಯಂತ ಮೊಳಗಲಿದೆ. ಕೇಂದ್ರ ಸರ್ಕಾರವು ರಾಜ್ಯ–ಕೇಂದ್ರ ಸರ್ಕಾರಗಳ ಹುದ್ದೆಗಳು, ಶಾಸನಸಭೆ, ಸಂಸತ್ತಿನಲ್ಲಿ ಶೇಕಡ 33% ಮಹಿಳೆಯರಿಗೆ ಮೀಸಲಾತಿ ನೀಡಿರುವುದರಿಂದ ಮುಂಬರುವ ವರ್ಷಗಳಲ್ಲಿ ಎಲ್ಲ ಕಾರ್ಯಕ್ಷೇತ್ರಗಳಲ್ಲಿ, ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗಲಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ವೃತ್ತಿ–ಗೃಹಕೃತ್ಯ ನಿಭಾವಣೆ, ಸಂಘಟನೆ, ಮಕ್ಕಳನ್ನು ಸಂಸ್ಕಾರವಂತರಾಗಿ ಮಾಡುವುದು ಇತ್ಯಾದಿ ಸಮ್ಮೇಳನದಲ್ಲಿ ಚರ್ಚೆಯಾಗಲಿವೆ. ವಿಪ್ರ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಸಮ್ಮೇಳನದ ಅಭೂತಪೂರ್ವ ಯಶಸ್ಸಿಗೆ ಕಾರಣರಾಗಬೇಕೆಂದು ಸಂಯೋಜಕರು ಎಲ್ಲರಲ್ಲೂ ಮನವಿ ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ವಿಪ್ರಸ್ತ್ರೀ ಶಕ್ತಿ ಜಾಗೃತವಾಗಿ ಕೌಟುಂಬಿಕ, ಸಾಮಾಜಿಕ, ರಾಷ್ಟ್ರ ಕಲ್ಯಾಣವಾಗಲಿ ಎಂದು ನಮ್ಮೆಲ್ಲರ ಹಾರೈಕೆ.

ಡಿಸೆಂಬರ್ ಮಾಸದಲ್ಲಿ ದೇಶಾದ್ಯಂತ ಗೀತಾ ಜಯಂತಿಯನ್ನು ಆಚರಿಸಲಾಗುತ್ತಿದೆ. ಮಹಾಭಾರತ ಯುದ್ಧ ಪ್ರಾರಂಭವಾದದ್ದು ಮಾರ್ಗಶಿರ ಮಾಸದ ಕೃಷ್ಣಪಕ್ಷದ ಅಮಾವಾಸ್ಯೆ ದಿನವೆಂದು ಸಂಶೋಧನ ತಜ್ಞರು ತಿಳಿಸಿದ್ದಾರೆ. ಪ್ರತಿಸ್ಪರ್ಧಿ ಸ್ವಂತ ಬಂಧುಗಳನ್ನು ಯುದ್ಧದಲ್ಲಿ ಎದುರಿಸಲು ಅಸಮರ್ಥರಾಗಿ, ಶಸ್ತ್ರತ್ಯಾಗ ಮಾಡಿ ಖಿನ್ನತೆ ಹೊಂದಿ ಸ್ವಂತ ವೀರಾಗ್ರಣಿ ಬಿಲ್ಲಾರ ಅರ್ಜುನನಿಗೆ ಅವನ ಗೆಳೆಯ, ಮಾರ್ಗದರ್ಶಕ ಗುರು ಕೃಷ್ಣನು ಕರ್ಮ ರಹಸ್ಯವನ್ನು ಬೋಧಿಸಿ ಯುದ್ಧ ಮಾಡಲು ಪ್ರೇರೇಪಿಸುತ್ತಾನೆ. (ತಸ್ಮಾತ್ ಯುದ್ಧಸ್ವ ಭಾರತ ।) ಪರಸ್ಪರ ಸಂವಾದದ ಮೂಲಕ ಜ್ಞಾನ, ಕರ್ಮ, ಭಕ್ತಿ, ರಾಜಯೋಗಗಳ ವಿಶಿಷ್ಟತೆಗಳನ್ನು ತಿಳಿಸುತ್ತಾನೆ. ನಾಲ್ಕು ವೇದಗಳು, ಹತ್ತು ಉಪನಿಷತ್ತುಗಳ ಸಾರಾಂಶವನ್ನು ಸರಳವಾದ ಶ್ಲೋಕಗಳ ಮೂಲಕ ವಿವರಿಸುತ್ತಾನೆ. ಗೀತಾಚಾರ್ಯನೇ ಘೋಷಿಸಿದಂತೆ ಇದು ರಾಜವಿದ್ಯೆ, ರಹಸ್ಯವಿದ್ಯೆ, ಉತ್ತಮ ಮತ್ತು ಮಹತ್ವವಾದದ್ದು (ರಾಜವಿದ್ಯಾರಾಜಗುಹ್ಯಂ ಪವಿತ್ರಂ ಇದಂ ಉತ್ತಮಮ್ ।). ಜನರು ತಮ್ಮ ವೃತ್ತಿ – ಪ್ರವೃತ್ತಿಗಳಿಗೆ ತಕ್ಕಂತೆ ಯಾವ ಯೋಗವನ್ನು ಬೇಕಾದರೂ ಆಯ್ಕೆ ಮಾಡಿಕೊಂಡು ಸುಲಭವಾದ ಜೀವನ ನಡೆಸಬಹುದು. ಭಗವದ್ಗೀತೆಯು ಯೋಗಶಾಸ್ತ್ರ, ಮನಃಶಾಸ್ತ್ರ, ಮತ್ತು ಬ್ರಹ್ಮ ವಿದ್ಯೆ, ಇದು ನಿರ್ವಹಣಾ ಗ್ರಂಥವೂ ಹೌದು. ಭಾರತೀಯರಿಗೆ, ಹಿಂದೂಗಳಿಗೆ ಪವಿತ್ರವಾದ ಗ್ರಂಥವಿದು.

ಮೊಟ್ಟಮೊದಲ ಬಾರಿಗೆ ಭಗವದ್ಗೀತೆಯನ್ನು ಸರ ಚಾರ್ಲ್ಸ್ ವಿಲ್ಕಿನ್ಸ್ ಎಂಬ ಬ್ರಿಟಿಷ್ ವಿದ್ವಾಂಸ 1785ರಲ್ಲಿ ಆಂಗ್ಲಭಾಷೆಗೆ ಅನುವಾದಿಸಿದ. ಅಂದಿನಿಂದ ಗೀತೆಯ ವಿಶ್ವಪರ್ಯಟನೆ ಆರಂಭವಾಯಿತು. ಜೆ.ಡಬ್ಲ್ಯು. ಹೌವರ್ ಎಂಬ ಜರ್ಮನ್ ಸಂಸ್ಕೃತ ವಿದ್ವಾಂಸ ಭಗವದ್ಗೀತೆಗೆ ಜರ್ಮನ್ ನಂಬಿಕೆಯಲ್ಲಿ ಕೇಂದ್ರಸ್ಥಾನವನ್ನು ನೀಡಿದ. ಆಲ್ಡಸ್ ಹಕ್ಸಲೇ ಎಂಬ ಬ್ರಿಟಿಷ್ ವಿದ್ವಾಂಸನು "ಭಗವದ್ಗೀತೆಯು ನಿರಂತರ ದರ್ಶನದ ಅತ್ಯಂತ ವ್ಯವಸ್ಥಿತ ಆಧ್ಯಾತ್ಮಿಕ ಗ್ರಂಥವೆಂದು ವಿವರಿಸುತ್ತಾನೆ. ಆಗಸ್ಟ್ ವಿಲ್‌ಹೆಲ್ಮೆ ಫಾನ್ ಹಂಬೋಲ್ಟ್ ಎಂಬ ಇನ್ನೊಬ್ಬ ಜರ್ಮನ್ ವಿದ್ವಾಂಸ ಭಗವದ್ಗೀತೆಯನ್ನು ಆ ಭಾಷೆಗೆ ಅನುವಾದಿಸಿ ಅದರ ಮಹತ್ವವನ್ನು ಕೊಂಡಾಡಿದ್ದಾನೆ. ಯೂರೋಪ್ ದೇಶದ ತತ್ವಶಾಸ್ತ್ರಜ್ಞರು ಈ ಗೀತೆಯ ಅನುವಾದಗಳನ್ನು ಓದುತ್ತಿರುವಾಗ ದರ್ಶನ ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ ಪಾಲ್‌ಡಾಯ್ಸನ್, ಷೋಪನ್ಹೋರ್ ಮುಂತಾದವರಿದ್ದಾರೆ. ಬೈಬಲ್ ನಂತರ ಪ್ರಪಂಚದ 500ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದ ಗ್ರಂಥ ಭಗವದ್ಗೀತೆಯೇ. ಇಂದು ಆಧುನಿಕ ನಿರ್ವಹಣಾತಜ್ಞರಾದ ಸುಭಾಷ್ ಶರ್ಮ ಮುಂತಾದವರು ಗೀತೆಯನ್ನು ಉತ್ತಮ ನಿರ್ವಹಣಾ ಕೌಶಲ ಗ್ರಂಥವಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಭಾರತದ ಐಐಮ್‌ಗಳು, ಲಂಡನ್, ಅಮೇರಿಕಾದ ಅರ್ಥಶಾಸ್ತ್ರ, ನಿರ್ವಹಣಾ ಸಂಸ್ಥೆಗಳು ತಮ್ಮ ಅಧ್ಯಯನ ಪಾಠಗಳಲ್ಲಿ ಗೀತೆಯ ಅಂಶಗಳನ್ನು ಅಳವಡಿಸಿಕೊಂಡಿವೆ. ಇಂತಹ ಭಾರತೀಯ ಜಗತ್ಪ್ರಸಿದ್ಧ ಗ್ರಂಥವಾದ ಗೀತೆಗೋಸ್ಕರ ಒಂದು ದಿನವನ್ನು ನಮ್ಮಲ್ಲಿ ಮುಡಿಪಾಗಿಡಲಾಗಿದೆ. ಬ್ರಾಹ್ಮಣ ತಂದೆ–ತಾಯಿಯರು ತಮ್ಮ ಮಕ್ಕಳಿಗೆ, ನೆರೆಹೊರೆಯವರಿಗೆ ಸಣ್ಣ ವಯಸ್ಸಿನಿಂದಲೇ ಗೀತಾಭ್ಯಾಸ ಮಾಡಿಸಬೇಕು. ಆಗ ಅವರು ಸಂಸ್ಕಾರವಂತರಾಗಿ ರೂಪುಗೊಳ್ಳಲು ಇದು ಕಾರಣವಾಗುತ್ತದೆ. ಎಲ್ಲರಿಗೂ ಜನವರಿ ಮಾಸದಲ್ಲಿ ಬರುವ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**

– ಪ್ರಧಾನ ಸಂಪಾದಕರು

# 'ಅಭಿಜಾತೆ-2024' - ಶ್ರೀ ಶ್ರೀ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಆಶೀರ್ವಾದ



ದಿನಾಂಕ 07.12.2023 ರಂದು ಬೆಂಗಳೂರಿನ ಬಸವನಗುಡಿಯಲ್ಲಿರುವ ಸೋದೆ/ಸೋಂದೆ ವಾದಿರಾಜ ಮಠಕ್ಕೆ ತೆರಳಿ, ಶ್ರೀಮಠದ ಶ್ರೀ ಶ್ರೀ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ರವರಿಂದ ಆಶೀರ್ವಾದ ಪಡೆಯಲಾಯಿತು ಹಾಗೂ ಶ್ರೀ ಶ್ರೀ ಶ್ರೀ ಗಳಿಗೆ ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ವತಿಯಿಂದ ಜನವರಿ 6-7, 2024ರಂದು ನಡೆಸಲಿರುವ 3ನೇ ರಾಜ್ಯಮಟ್ಟದ ವಿಪ್ರ ಮಹಿಳಾ ಸಮ್ಮೇಳನ "ಅಭಿಜಾತೆ-2024"ರ ಬಗ್ಗೆ ವಿವರಿಸಿ, ಸಲಹೆ-ಸೂಚನೆಗಳನ್ನು ಪಡೆಯಲಾಯಿತು. ನಮ್ಮ ಮಹಿಳಾ ಸಮ್ಮೇಳನದ ಆಮಂತ್ರಣ ಪತ್ರವನ್ನು ಗುರುಗಳ ಪಾದಗಳಿಗೆ ಅರ್ಪಿಸಿದೆವು.

**ಶ್ರೀ ಶ್ರೀ ಶ್ರೀ ಗಳು ವಿಪ್ರ ಮಹಿಳಾ ಸಮ್ಮೇಳನವು ಸುಲಲಿತವಾಗಿ ನಡೆಯಲಿ ಎಂದು ನಮ್ಮನ್ನು ಆಶೀರ್ವದಿಸಿದುದು ನಮ್ಮ ಭಾಗ್ಯವೇ ಸರಿ.**

# ವಿಜಯಪುರ ಜಿಲ್ಲಾ ಘಟಕದಿಂದ ಮಹಿಳಾ ಸಮಾವೇಶದ ಸಿದ್ಧತಾ ಸಭೆ



ದಿನಾಂಕ 9-12-23 ರಂದು ಸಂಜೆ 5:00ಗೆ ವಿಜಯಪುರ ಶ್ರೀ ಕೃಷ್ಣ ಮಠದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಿಜಯಪುರ ಜಿಲ್ಲಾ ಘಟಕದ ಮಹಿಳಾ ಸಮಾವೇಶದ ಪೂರ್ವಭಾವಿ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಮಾನ್ಯ ಶ್ರೀ ಶ್ರೀ ಹರಿ ಗೋಳಸಂಗಿ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ವಿಜಯೇಂದ್ರನಾಡ ಜೋಶಿ, ರಾಜ್ಯ ಮಹಿಳಾ ಸಹ ಸಂಚಾಲಕಿಯಾದ ಶ್ರೀಮತಿ ಲಕ್ಷ್ಮಿ ಕುಲಕರ್ಣಿ, ಮಹಿಳಾ ಮಂಡಲಗಳ ಒಕ್ಕೂಟದ ಅಧ್ಯಕ್ಷರಾದ ಮತ್ತು ಸಂಘಟನಾ ಚತುರರಾದ ಶ್ರೀಮತಿ ಭಾಗ್ಯಶ್ರೀ ಕಟ್ಟಿ, ವಿಜಯಪುರ ಜಿಲ್ಲಾ ಮಹಿಳಾ ಸಂಚಾಲಕಿ ಶ್ರೀಮತಿ ಜಯಶ್ರೀ ಕಣ್ಣೂರ್, ವಿಪ್ರ ಮುಖಂಡರಾದ ಮಾನ್ಯ ಶ್ರೀ ಮಹೇಶ್ ದೇಶಪಾಂಡೆ,. ಹಿರಿಯ ಮುಖಂಡರಾದ ಶ್ರೀ ಜೋಶಿ ಅವರು ವೇದಿಕೆಯಲ್ಲಿದ್ದರು. ಸಂಘಟನೆ ಬಗ್ಗೆ ಮತ್ತು ಮಹಿಳಾ ಸಮಾವೇಶದ ಬಗ್ಗೆ ಸುದೀರ್ಘ ಚರ್ಚೆ ಆಯಿತು. ವಿಜಯಪುರ ಜಿಲ್ಲೆಯಿಂದ ಸುಮಾರು 150 ಕಿಂತ ಹೆಚ್ಚು ಮಹಿಳೆಯರು ಸಮಾವೇಶಕ್ಕೆ ಬರುವುದಾಗಿ ಹೇಳಿದರು. ಜಿಲ್ಲೆಯ ಎಲ್ಲ ತಾಲೂಕಿನಿಂದ ಮಹಿಳಾ ಪ್ರತಿನಿಧಿಗಳು ಆಗಮಿಸಿದ್ದರು ಕಾರ್ಯಕ್ರಮದ ರೂಪುರೇಷೆ ಮತ್ತು ವ್ಯವಸ್ಥೆ ಬಗ್ಗೆ ಪ್ರಯಾಣದ ಬಗ್ಗೆ ಮತ್ತೆ ಸುರಕ್ಷಿತವಾಗಿ ಪುನಃ ಮರಳಿ ಬರುವ ಬಗ್ಗೆ ನಾಡಜೋಶಿ ಅವರು ಸವಿಸ್ತಾರವಾಗಿ ಮಾತನಾಡಿದರು. ಶ್ರೀ ಗೋಳಸಂಗಿ ಶ್ರೀಯುತ ಜೋಶಿ ಶ್ರೀಯುತ ಮಹೇಶ್ ದೇಶಪಾಂಡೆ ಸಮಾವೇಶದ ಬಗ್ಗೆ ಮಾತನಾಡಿದರು. ಶ್ರೀಮತಿ ಲಕ್ಷ್ಮಿ ಕುಲಕರ್ಣಿ ಸ್ವಾಗತಿಸಿದರು. ಶ್ರೀಮತಿ ಭಾಗ್ಯಶ್ರೀ ಕಟ್ಟಿ ಸಮಾವೇಶದ ಬಗ್ಗೆ ಮಾತನಾಡಿದರು. ಶ್ರೀಮತಿ ಜಯಶ್ರೀ ಕನ್ನೂರ್ ಸದಸ್ಯತ್ವ ಮತ್ತು ಸಮಾವೇಶದಲ್ಲಿ ಹೆಚ್ಚು ಮಹಿಳೆಯರನ್ನು ಕರೆದುಕೊಂಡು ಬರುವ ಭರವಸೆಯನ್ನು ನೀಡಿದರು. ಸಮಾಜದ ಅನೇಕ ಗಣ್ಯಾತಿಗಣ್ಯರು ಮಾತೆಯರು ಯುವಕರು ಪಾಲ್ಗೊಂಡಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷರಾದ ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಡಾ. ಶ್ರೀಮತಿ ಶುಭಮಂಗಳ ಇವರ ನೇತೃತ್ವದಲ್ಲಿ ನಡೆಯುವ ಸಮಾವೇಶ ಯಶಸ್ವಿಯಾಗಲು ನಾವು ಎಲ್ಲರೂ ಕಂಕಣ ಬದ್ಧರಾಗಿದ್ದೇವ. ಎಂದು ಜೈ ಘೋಷಣೆಯೊಂದಿಗೆ ಕಾರ್ಯಕ್ರಮ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

# 'ಅಭಿಜಾತೆ-2024' - ಶ್ರೀ ಸುಬ್ರಹ್ಮಣ್ಯ ಸ್ವಾಮಿ ಮಠದ ಆಶೀರ್ವಾದ, ಎಳೇನಹಳ್ಳಿ



ನಮಗೆ ಬೆಂಗಳೂರಿನ ಎಳೇನಹಳ್ಳಿಯರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಮಠದಲ್ಲಿ ಲಕ್ಷ್ಮೀನೃಸಿಂಹ, ಸುಬ್ರಹ್ಮಣ್ಯ, ರಾಘವೇಂದ್ರ ದೇವರುಗಳ ದರುಶನ ಭಾಗ್ಯ ದೊರೆಯಿತು. ತದನಂತರ ಇದೇ ಶ್ರೀಮಠದ ಡಾ. ಶ್ರೀ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳವರ ದರ್ಶನವನ್ನೂ ಪಡೆದೆವು. ಹಾಗೂ ಶ್ರೀ ಶ್ರೀ ಶ್ರೀಗಳಿಗೆ ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ವತಿಯಿಂದ ಜನವರಿ 6-7, 2024ರಂದು ನಡೆಸಲಿರುವ 3ನೇ ರಾಜ್ಯಮಟ್ಟದ ವಿಪ್ರ ಮಹಿಳಾ ಸಮ್ಮೇಳನ "ಅಭಿಜಾತೆ-2024" ರ ಬಗ್ಗೆ ವಿವರಿಸಿ, ಸಲಹೆ-ಸೂಚನೆಗಳನ್ನು ಪಡೆಯಲಾಯಿತು. ನಮ್ಮ ಮಹಿಳಾ ಸಮ್ಮೇಳನದ ಆಮಂತ್ರಣ ಪತ್ರವನ್ನು ಭಗವಂತನ ಮತ್ತು ಗುರುಗಳ ಪಾದಗಳಿಗೆ ಅರ್ಪಿಸಿದೆವು.

**ಶ್ರೀ ಶ್ರೀ ಶ್ರೀಗಳು ವಿಪ್ರ ಮಹಿಳಾ ಸಮ್ಮೇಳನವು ಸುಲಲಿತವಾಗಿ ನಡೆಯಲಿ ಎಂದು ನಮ್ಮನ್ನು ಆಶೀರ್ವದಿಸಿದ್ದು ನಮ್ಮ ಭಾಗ್ಯವೇ ಸರಿ.**

## ಮಹಿಳಾ ಸಮೆಮೇಳನಕ್ಕೆ ಬೆಂಬಲ - ಶ್ರೀಮತಿ ಮಾಳವಿಕ ಮತ್ತು ಶ್ರೀ ಅವಿನಾಶ್



ನಮ್ಮ ಕನ್ನಡದ ಶ್ರೇಷ್ಠ ನಟಿ ಶ್ರೀಮತಿ ಮಾಳವಿಕಾ ಅವಿನಾಶ್ ಅವರನ್ನು ಭೇಟಿ ಮಾಡಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ವತಿಯಿಂದ ಜನವರಿ 6-7, 2024ರಂದು ನಡೆಯಲಿರುವ 3ನೇ ರಾಜ್ಯಮಟ್ಟದ ವಿಪ್ರ ಮಹಿಳಾ ಸಮ್ಮೇಳನ *"ಅಭಿಜಾತೆ-2024"*ರ ಬಗ್ಗೆ ವಿಶದವಾಗಿ ಚರ್ಚಿಸಿ, ಅವರಿಂದ ಸಲಹೆಗಳನ್ನು ಪಡೆಯಲಾಯಿತು. ಆಮಂತ್ರಣ ಪತ್ರವನ್ನು ನೀಡಿ, ಅವರನ್ನು ನಮ್ಮ ಅ.ಕ.ಬ್ರಾ.ಮ.ಸ. ಮಹಿಳಾ ವಿಭಾಗದ ಪರವಾಗಿ ಅಂದಿನ ಸಮ್ಮೇಳನಕ್ಕೆ ಆಹ್ವಾನಿಸಲಾಯಿತು. ಶ್ರೀ ಅರುಣ್ ಮತ್ತು ಶ್ರೀ ಸುಬ್ರಹ್ಮಣ್ಯ ರವರೂ ಭೇಟಿಯ ಸಮಯದಲ್ಲಿ ಜೊತೆಗೂಡಿದ್ದರು. ಇದೇ ಸಮಯದಲ್ಲಿ ಶ್ರೀಮತಿ ಮಾಳವಿಕಾರವರ ಪತಿ ಶ್ರೀ ಅವಿನಾಶ್ ರವರನ್ನೂ ಆಹ್ವಾನಿಸಿ, ಸಮ್ಮೇಳನಕ್ಕೆ ಸಹಕಾರ ನೀಡಬೇಕೆಂದು ಕೇಳಿಕೊಳ್ಳಲಾಯಿತು.

ನಮ್ಮ ಸಮ್ಮೇಳನದ ಸವಿವರಣೆಗಳನ್ನು ಪಡೆದ ಶ್ರೀಮತಿ ಮಾಳವಿಕಾರವರು ಹಾಗೂ ಶ್ರೀ ಅವಿನಾಶ್ ರವರು ಹೃತ್ಪೂರ್ವಕ ಸಂತೋಷ ವ್ಯಕ್ತಪಡಿಸಿ, ಆಮಂತ್ರಣವನ್ನು ಸ್ವೀಕರಿಸಿದರು ಎಂದು ತಿಳಿಸಲು ಹರ್ಷಿಸುತ್ತೇನೆ ಎಂದು ರಾಜ್ಯ ಸಂಚಾಲಕಿ ಶುಭಮಂಗಳ ಸುನೀಲ್‌ರವರು ತಿಳಿಸಿದರು.

## 'ಅಭಿಜಾತೆ-2024' - ಶ್ರೀ ಚಂದ್ರಶೇಖರ ಹೆಬ್ಬಾರ್



ದಿನಾಂಕ 07-12-23 ರಂದು ಕರ್ನಾಟಕ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಹೆಬ್ಬಾರ್ ರವರನ್ನು ಭೇಟಿ ಮಾಡಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ವತಿಯಿಂದ ಜನವರಿ 6-7, 2024ರಂದು ನಡೆಯಲಿರುವ 3ನೇ ರಾಜ್ಯಮಟ್ಟದ ವಿಪ್ರ ಮಹಿಳಾ ಸಮ್ಮೇಳನ "ಅಭಿಜಾತೆ-2024" ರ ಬಗ್ಗೆ ವಿಶದವಾಗಿ ಚರ್ಚಿಸಿ, ಅವರಿಂದ ಸಲಹೆಗಳನ್ನು ಪಡೆಯಲಾಯಿತು. ಅವರಿಗೆ ಆಮಂತ್ರಣ ಪತ್ರವನ್ನು ನೀಡಿ, ನಮ್ಮ ಅ.ಕ.ಬ್ರಾ.ಮ.ಸ. ಮಹಿಳಾ ವಿಭಾಗದ ಪರವಾಗಿ ಅಂದಿನ ಸಮ್ಮೇಳನಕ್ಕೆ ಆಹ್ವಾನಿಸಲಾಯಿತು.

ಶ್ರೀಯುತರು, ಅಂದಿನ ಕಾರ್ಯಕ್ರಗಳ ಬಗ್ಗೆ ತಿಳಿದು, ಸಂತೋಷ ವ್ಯಕ್ತಪಡಿಸಿದರು. ಆಮಂತ್ರಣವನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದರು ಹಾಗೂ ಸಮ್ಮೇಳನಕ್ಕೆ ತಮ್ಮ ಬೆಂಬಲ, ಸಹಕಾರಗಳನ್ನು ನೀಡುವುದಾಗಿ ಹೇಳಿ, ನಮ್ಮನ್ನು ಪ್ರೋತ್ಸಾಹಿಸಿದರು ಎಂದು ಈ ಮೂಲಕ ನಿಮ್ಮೆಲ್ಲರಿಗೂ ತಿಳಿಸಲು ಹರ್ಷಿಸುತ್ತೇನೆ.

# ಮಹಿಳಾ ಸಮಾವೇಶ – ಚಿಕ್ಕಮಗಳೂರು ಜಿಲ್ಲಾ ಬ್ರಾಹ್ಮಣ ಸಭಾದ ಬೆಂಬಲ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿ ಸದಸ್ಯರಾದ ಶ್ರೀ ಸುನಿಲ್‌ರವರು ಇಂದು ಚಿಕ್ಕಮಗಳೂರು ಜಿಲ್ಲಾ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಜೋಶಿ ಮತ್ತು ಅವರ ಶ್ರೀಮತಿಯವರನ್ನು ಭೇಟಿ ಮಾಡಿದರು. ಅದೇ ಸಮಯದಲ್ಲಿ, ಬೆಂಗಳೂರಿನಲ್ಲಿ 2024ರ ಜನವರಿ 6, 7ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ವತಿಯಿಂದ ನಡೆಯಲಿರುವ 3ನೇ ರಾಜ್ಯಮಟ್ಟದ ಮಹಿಳಾ ಸಮ್ಮೇಳನದ ಬಗ್ಗೆ ಚರ್ಚಿಸಿ, ಜಿಲ್ಲೆಯ ಎಲ್ಲಾ ವಿಪ್ರ ಬಾಂಧವರು ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೇಳಿಕೊಳ್ಳಲಾಯಿತು. ಶ್ರೀ ಮಂಜುನಾಥ್‌ರವರು ಅಂದಿನ ಸಮ್ಮೇಳನಕ್ಕೆ ತಮ್ಮ ಜಿಲ್ಲೆಯ ಬೆಂಬಲ ಮತ್ತು ಹೆಚ್ಚಿನ ಸಹಕಾರ ನೀಡುವುದಾಗಿ ತುಂಬು ಹೃದಯದಿಂದ ತಿಳಿಸಿದರು. ಶ್ರೀ ಸುನಿಲ್ ರವರು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.




ಜಾಹಿರಾತು

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
**ದೂರವಾಣಿ : 2672 2267, 98866 55755**

# ತುಮಕೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ. ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾ ಕೇಂದ್ರ ಕಛೇರಿ ವಿಪ್ರ ಭವನದಲ್ಲಿ ದಿನಾಂಕ 16.12.2023ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವು ನೆರವೇರಿತು. ಈ ಶಿಬಿರದಲ್ಲಿ ತುಮಕೂರು ನಗರದ 163 ಬ್ರಾಹ್ಮಣ ಸಮುದಾಯದವರು ಆರೋಗ್ಯ ತಪಾಸಣೆಗೆ ಒಳಪಟ್ಟು ಹಲವರು ಬೇರೆ ಬೇರೆ ನುರಿತ ವೈದ್ಯರುಗಳನ್ನು ಉಚಿತವಾಗಿ ಸಂದರ್ಶಿಸಿದರು.

ಅಂದು ಬೆಳಿಗ್ಗೆ 10.00 ಗಂಟೆಗೆ ಶಿಬಿರವು ಉದ್ಘಾಟನೆಗೊಂಡಿತು. ಸದರಿ ಉದ್ಘಾಟನೆಯನ್ನು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಸಂಸ್ಥಾಪಕರಾದ ಶ್ರೀ ಹುಲಿನಾಯ್ಕರ್‌ರವರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಉಪಾಧ್ಯಕ್ಷರು ಮತ್ತು ತುಮಕೂರು ಜಿಲ್ಲಾ ಉಸ್ತುವಾರಿಯಾದಂತಹ ಶ್ರೀ ಎಂ.ಆರ್. ಶಿವಶಂಕರ್‌ರವರು, ಸದರಿ ಶಿಬಿರದ ಮುಖ್ಯ ಆಯೋಜಕ ಹಾಗೂ ಸಂಯೋಜಕರಾದಂತಹ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ಸಂಘಟನಾ ಕಾರ್ಯದರ್ಶಿ ಶ್ರೀ ವೆಂಕಟೇಶ್ ದ್ವಾರಕಾನಾಥ್‌ರವರು, ತುಮಕೂರು ಜಿಲ್ಲಾ ಬ್ರಾಹ್ಮಣ ಸಭೆಯ ಅಧ್ಯಕ್ಷರಾದ ಶ್ರೀ ಹೆಚ್.ಎನ್. ಚಂದ್ರಶೇಖರ್‌ರವರು ನೆರವೇರಿಸಿರುತ್ತಾರೆ.



ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಹೃದ್ರೋಗ ತಜ್ಞರು, ಮೂಳೆ ತಜ್ಞರು, ಕಣ್ಣಿನ ತಜ್ಞರು, ಹೊಟ್ಟೆ ಬಾಯಿಲೆಯ ತಜ್ಞರುಗಳು ಉಚಿತವಾಗಿ ಶಿಬಿರಕ್ಕೆ ಬಂದು ಸಂದರ್ಶಿಸಿ ಸಹಾಯವನ್ನು ಮಾಡಿರುತ್ತಾರೆ ಮತ್ತು ಅತಿಮುಖ್ಯವಾಗಿ ವಿವಿಧ ತರವಾದ ಔಷಧಿಗಳನ್ನೂ ಸಹ ಉಚಿತವಾಗಿ ಅಗತ್ಯವಿರುವವರಿಗೆ ನೀಡಿರುತ್ತಾರೆ.







# ಚಿಕ್ಕಬಳ್ಳಾಪುರದಲ್ಲಿ ನೂತನ ವಿಪ್ರ ಸಭಾಭವನದ ಉದ್ಘಾಟನೆ

ದಿನಾಂಕ 10.12.23 ರಂದು ಜಂಗಮಕೋಟೆ ಗ್ರಾಮ, ಶಿಡ್ಲಘಟ್ಟ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಶ್ರೀ ಚಂದ್ರಮೌಳೇಶ್ವರ ವಿಪ್ರ ಸೇವಾ ಟ್ರಸ್ಟ್ (ಖ) ವತಿಯಿಂದ ನೂತನ ವಿಪ್ರ ಸಭಾಭವನವನ್ನು ಉದ್ಘಾಟಿಸಲಾಯಿತು,

ಈ ಸಭಾ ಪ್ರಾರಂಭವಾಗಿ ಕೇವಲ ಎಂಟು ತಿಂಗಳಾಯಿತು, ಈ ವಿಪ್ರರ ಸಾಧನೆ ಅಭೂತ, ಇವರಿಗೆ ಇನ್ನೂ ಹೆಚ್ಚಿನ ಶಕ್ತಿ ಆ ದೇವರು ಕರುಣಿಸಲೆಂದು ಪ್ರಾರ್ಥಿಸೋಣ ಹಾಗು ಈ ಕಾರ್ಯಕ್ಕೆ ಶ್ರಮಿಸಿದ ಸೇವಾ ಟ್ರಸ್ಟಿನ ಎಲ್ಲಾ ಸಮಿತಿಯ ಸದಸ್ಯರಿಗೆ ಅಭಿನಂದನೆಗಳು.

ಟ್ರಸ್ಟಿನ ಶ್ರೀ ನಾಗೇಂದ್ರ, ಶೇಷಣ್ಣ ನಾಗೇಂದ್ರ, ನರಸಿಂಹ, ಅಖಿಲ ಕನಾಟಕ ಬ್ರಾಹ್ಮಣ ಮಹಾಸಭಾದ ಸಹ ಕಾರ್ಯದರ್ಶಿ ಪ್ರಕಾಶ್ ಪಿ.ಆರ್., ಇತರ ಎಲ್ಲ ಸಮಾಜದ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಅಭಿಜಾತೆ-2024 ವಿಪ್ರ ಮಹಿಳಾ ಸಮ್ಮೇಳನ ಚಿಕ್ಕಮಗಳೂರಿನಲ್ಲಿ ಸಮಾಲೊಚನಾ ಸಭೆ



ದಿನಾಂಕ 10-12-23ರಂದು ಕಾಫಿನಾಡು ಚಿಕ್ಕಮಗಳೂರಿಗೆ ಭೇಟಿ ನೀಡಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚಿಕ್ಕಮಗಳೂರು ಜಿಲ್ಲಾ ಮಹಿಳಾ ವಿಭಾಗದ ಸಂಚಾಲಕಿ ಶ್ರೀಮತಿ ಶಾಂತಕುಮಾರಿ ಹಾಗೂ ಮಹಿಳಾ ಸದಸ್ಯೆಯರೊಂದಿಗೆ ಅಭಿಜಾತೆ - 2024 3ನೇ ರಾಜ್ಯಮಟ್ಟದ ವಿಪ್ರ ಮಹಿಳಾ ಸಮ್ಮೇಳನದ ಬಗ್ಗೆ ವಿಶದವಾಗಿ ಚರ್ಚಿಸಿ, ಸಮ್ಮೇಳನದಲ್ಲಿ ಭಾಗವಹಿಸಲು ಜಿಲ್ಲೆಯಲ್ಲಿ ನಡೆಸಿರುವ ಸಿದ್ಧತೆಗಳನ್ನು ತಿಳಿದುಕೊಳ್ಳಲಾಯಿತು. ಸಮ್ಮೇಳನದ ಕಾರ್ಯಕ್ರಮಗಳ ವಿವರ, ಭಾಗವಹಿಸುವ ಸದಸ್ಯರಿಗೆ ಒದಗಿಸಲಾಗುವ ಅವಶ್ಯ ವ್ಯವಸ್ಥೆಗಳು ಈ ಬಗ್ಗೆ ಮಾಹಿತಿಗಳನ್ನು ನೀಡಲಾಯಿತು. ಸದಸ್ಯರು ಅತ್ಯಂತ ಉತ್ಸುಕತೆಯಿಂದ ತಮ್ಮ ಭಾಗವಹಿಸುವಿಕೆ ಹಾಗೂ ಸಂಪೂರ್ಣ ಸಹಕಾರವನ್ನು ತುಂಬು ಮನದಿಂದ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಶ್ರೀ ಸುಧಾಕರ್ ಬಾಬು, ಸಂಘಟನಾ ಕಾರ್ಯದರ್ಶಿ ಕಾರ್ತಿಕ್ ಬಾಪಟ್ ಹಾಗೂ ಸುನಿಲ್ ಲಕ್ಕರವರು ಸಭೆಯಲ್ಲಿ ಉಪಸ್ಥಿತರಿದ್ದರು.

# ಬಡಗನಾಡು ಬ್ರಾಹ್ಮಣ ಮಹಾಸಭಾದ ಸರ್ವಸದಸ್ಯರ ಸಭೆ



ಬಡಗನಾಡು ಬ್ರಾಹ್ಮಣ ಮಹಾಸಭಾದ ಸರ್ವಸದಸ್ಯರ ಸಭೆಯಲ್ಲಿ ಜನವರಿ 6–7, 2024 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದಿಂದ ಏರ್ಪಡಿಸಲಾಗಿರುವ ಅಭಿಜಾತೆ – 2024 ಬಗ್ಗೆ ಪ್ರಚಾರ ಕಾರ್ಯ ನಡೆಸಿ, ನೆರೆದಿದ್ದ ವಿಪ್ರ ಬಾಂಧವರೆಲ್ಲರನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಯಿತು. ಬಡಗನಾಡು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ ಹಾಗೂ ಎಲ್ಲ ಸದಸ್ಯ–ಸದಸ್ಯೆಯರು ತಮ್ಮ ಬೆಂಬಲ, ಸಹಕಾರ ಸೂಚಿಸಿದರು. ಬಡಗನಾಡು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎನ್.ಎಲ್. ಚಿದಾನಂದ ಹಾಗೂ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಕಲಬುರಗಿಯಲ್ಲಿ ಹುತಾತ್ಮ ಯೋಧರ ಶೌರ್ಯ ಮತ್ತು ತ್ಯಾಗದ ಶ್ಲಾಘನೆ




ಭಾನುವಾರ, ಡಿಸೆಂಬರ್ 3, 2023 ರಂದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಲಬುರಗಿ ವಲಯವು ಮರಾಠಿ ಸಾಹಿತ್ಯ ಮಂಡಲದಲ್ಲಿ ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಹುತಾತ್ಮರಾದ ಸೇನಾ ಯೋಧರನ್ನು ಗೌರವಿಸಲು ಸಂತಾಪ ಸೂಚಕ ಸಭೆಯನ್ನು ಆಯೋಜಿಸಿತು. ಪ್ರಗತಿಪರ ಚಿಂತಕರಾದ ಸಂಜೀವ್ ಸೀರ್ನೂರಕರ್ ಅವರ ಭಾಷಣದೊಂದಿಗೆ ಆರಂಭವಾದ ಸಂತಾಪ ಸಭೆಯು ಹುತಾತ್ಮ ಯೋಧರ ಶೌರ್ಯ ಮತ್ತು ತ್ಯಾಗವನ್ನು ಶ್ಲಾಘಿಸಿದರು. ಮತ್ತು ಅವರು ರಾಜೌರಿ ಜಿಲ್ಲೆಯ ಘಟನೆಯನ್ನು ವಿವರಿಸಿದರು ಮತ್ತು ಅಗಲಿದ ಆತ್ಮಗಳಿಗಾಗಿ ಪ್ರಾರ್ಥಿಸಿದ ಕುಟುಂಬಗಳಿಗೆ ಸಂತಾಪ ಸೂಚಿಸಿದರು, ನಂತರ ಎಕೆಬಿಎಂಎಸ್ ಪದಾಧಿಕಾರಿಗಳು ಮತ್ತು ಇತರ ಸಮುದಾಯದ ಮುಖಂಡರು ಭಾಷಣ ಮಾಡಿದರು. ಸಭೆಯಲ್ಲಿ ಹುತಾತ್ಮ ಯೋಧರ ಗೌರವಾರ್ಥ 2 ನಿಮಿಷಗಳ ಮೌನವನ್ನು ಮಾಡಲಾಯಿತು. ಸಭೆಯು ಸಶಸ್ತ್ರ ಪಡೆಗಳ ಬಗ್ಗೆ ಸಮುದಾಯ ಹೊಂದಿರುವ ಆಳವಾದ ಗೌರವವನ್ನು ಮತ್ತು ಶಾಂತಿ ಮತ್ತು ನ್ಯಾಯಕ್ಕಾಗಿ ಅವರ ಬದ್ಧತೆಯನ್ನು ತೋರಿಸಿದೆ. ಸಭೆಯಲ್ಲಿ ಎಕೆಬಿಎಂಎಸ್ ಪದಾಧಿಕಾರಿಗಳು ಹಾಗೂ ಬ್ರಾಹ್ಮಣ ಸಮಾಜದ ಇತರೆ ಸದಸ್ಯರು ಉಪಸ್ಥಿತರಿದ್ದರು.



# ಮಹಿಳಾ ವಿಭಾಗದಿಂದ ಈಶ್ವರ ದೇವಾಲಯದ ದೀಪೋತ್ಸವ ಕಾರ್ಯಕ್ರಮ

ಕಾರ್ತಿಕ ಸೋಮವಾರ ದಿನಾಂಕ 04–12–23 ರಂದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಮಹಿಳಾ ವಿಭಾಗದ ಪರವಾಗಿ ಈಶ್ವರ ದೇವಾಲಯದ ಪೂಜೆ ಮತ್ತು ದೀಪೋತ್ಸವದಲ್ಲಿ ಭಾಗವಹಿಸಿ, ಅಲ್ಲಿ ನೆರೆದಿದ್ದ ಭಕ್ತರ ಸಮೂಹಕ್ಕೆ ನಮ್ಮ ಸಭಾದ ಮಹಿಳಾ ವಿಭಾಗದ ವತಿಯಿಂದ ಜನವರಿ 6 ಮತ್ತು 7ರಂದು ನಡೆಯಲಿರುವ ಸಮ್ಮೇಳನದ ಬಗ್ಗೆ ಹಾಗೂ ಶೋಭಾಯಾತ್ರೆ, ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದವುಗಳ ಬಗ್ಗೆ ವಿವರವಾಗಿ



ಮಾತನಾಡಿ, ಪ್ರಚಾರ ಕಾರ್ಯಕ್ರಮ ನಡೆಸಲಾಯಿತು. ನೆರೆದಿದ್ದ ಭಕ್ತರನ್ನು, "ಅಭಿಜಾತೆ 2024" ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಯಿತು.

# ಚಿತ್ಪಾವನ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವ



ಧೀಶಕ್ತಿಯನ್ನು ಪ್ರಚೋದಿಸುವ ಗಾಯತ್ರಿ ಮಂತ್ರದ ಅನುಷ್ಠಾನದಿಂದ ವಿಮುಖರಾಗುತ್ತಿದ್ದೇವೆ. ಇನ್ನು ಮುಂದಾದರೂ ಎಚ್ಚೆತ್ತುಕೊಂಡು ನಮ್ಮ ಶಕ್ತಿ ಏನೆಂಬುದನ್ನು ಮತ್ತೆ ಸಮಾಜಕ್ಕೆ ತೋರಿಸಿಕೊಡಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಮಹೇಶ್ ಕಜೆ ಅವರು ಹೇಳಿದರು.

ರಾಮಕೃಷ್ಣ ಸಭಾಭವನದಲ್ಲಿ ನಡೆದ ಬೆಳ್ತಂಗಡಿ ತಾಲ್ಲೂಕು ಚಿತ್ಪಾವನ ಸಮಾಜದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು. ಲೇಖಕಿ ಸುಚೇತಾ ಜೋಶಿ ಮಾತನಾಡಿ, "ಚಿತ್ಪಾವನ ಭಾಷೆಯ ಉಳಿಸುವಲ್ಲಿ ಮತ್ತು ಬೆಳೆಸುವಲ್ಲಿ ಯುವಕ ಯುವತಿಯರು ಮುಂದೆ ಬರಬೇಕು, ಸಂಶೋಧಕರಾಗಬೇಕು ಎಂದರು.ವೇ.ಮೂ. ಪಾಡುರಂಗ ಅಭಯಂಕರ್ ಅವರಿಗೆ ಚಿತ್ಪಾವನ ವೈದಿಕ ರತ್ನ, ಬೆಂಗಳೂರಿನ ಎಟ್ವೆಮಡ್ ಫಾರ್ಮಾದ ಎಂ.ಡಿ. ಡಾ. ಹೃಷಿಕೇಶ ಧಾಮಲೆ ಅವರಿಗೆ ಚಿತ್ಪಾವನ ಸಾಧಕ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಪಾದಕ ದಿವಾಕರ ಡೋಂಗ್ರೆಯವರು ಅಖೀಲ ಕರ್ನಾಟಕ ಚಿತ್ಪಾವನ ವೃತ್ತಾಂತದ ಬಗ್ಗೆ ಮಾಹಿತಿ ನೀಡಿದರು. ಸಂಘದ ಅಧ್ಯಕ್ಷ ತ್ರಿವಿಕ್ರಮ್ ಕೇಳ್ಕರ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ವರದಶಂಕರ ಧಾಮಲೆ, ಡಾ. ಶಶಿಧರ ಡೋಗ್ರೆ, ಜೊತೆ ಕಾರ್ಯದರ್ಶಿ ರಶ್ಮಿ ಪಟವರ್ಧನ್, ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಪ್ರಹ್ಲಾದ ಫಡಕೆ ಸ್ವಾಗತಿಸಿದರು. ಖಜಾಂಚಿ ವಾಸುದೇವ ಗೋಖಲೆ ವರದಿ ಮಂಡಿಸಿದರು. ಕಾರ್ಯದರ್ಶಿ ನಾರಾಯಣ ಫಡಕೆ ವಂದಿಸಿದರು. ಶೈಲೇಶ್ ಜೋಸರ್ ಮತ್ತು ಚಿತ್ರಾ ಭಡೆ ಕಾರ್ಯಕ್ರಮ ನಿರೂಪಿಸಿದರು.

# ಮಹಾಸಭಾಧ್ಯಕ್ಷರು ಕ್ಯಾಪ್ಟನ್ ಪ್ರಾಂಜ್ವಲ್‌ರ ಕುಟುಂಬಕ್ಕೆ ಸಾಂತ್ವನ



ದಿನಾಂಕ 30.11.2023 ರಂದು ಇತ್ತೀಚೆಗೆ ಜಮ್ಮು–ಕಾಶ್ಮೀರದಲ್ಲಿ ಹುತಾತ್ಮರಾದ ವೀರ ಕ್ಯಾಪ್ಟನ್ ಎಂ.ವಿ. ಪ್ರಾಂಜ್ವಲ್ ರವರ ಬೆಂಗಳೂರಿನ ಬನ್ನೇರುಘಟ್ಟ – ಜಿಗಣಿ ರಸ್ತೆಯಲ್ಲಿರುವ ನಂದನವನದ ನಿವಾಸಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ರವರು ಹಾಗೂ ಪದಾಧಿಕಾರಿಗಳಾದ ವೈ.ಎ. ಸುಧಾಕರ್ ಬಾಬು , ಕೆ.ಎನ್. ಛಾಯಾಪತಿ , ಕಾರ್ತಿಕ್ ಬಾಪಟ್, ಅರುಣ್ ಹಿರಣಯ್ಯ , ಸುಬ್ರಹ್ಮಣ್ಯ , ಅನಂತ್ ಹಾಗೂ ಬಿ.ಕೆ. ಪ್ರಕಾಶ್ ಭಾರದ್ವಾಜ್ ರವರು ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ವಂದೇಮಾತರಂ ಗೀತೆ ಹೇಳಿ ಶಾಂತಿಮಂತ್ರ ಪಠಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

# ಶ್ರೀರಾಮ ತಾರಕ ಜಪ ಯಜ್ಞ - ಕೋಲಾರ

ಕೋಲಾರ ಜಿಲ್ಲೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ನಡೆಯುತ್ತಿರುವ ರಾಜ್ಯಮಟ್ಟದ ಮಹಿಳಾ ಸಮಾವೇಶದ ಪ್ರಚಾರ ಹಾಗೂ ಶತಕೋಟಿ ರಾಮ ತಾರಕ ಮಂತ್ರ ಜಪ ಯಜ್ಞಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಹ ಕಾರ್ಯದರ್ಶಿ ವೇದ ಬ್ರಹ್ಮ ಶ್ರೀ ಡಾ.ಪಿ.ಎಸ್ . ಅಂಜನ್ ಕುಮಾರ್ ಶರ್ಮಾ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ವೆಂಕಟೇಶ್,ಎಂ.ಕೆ. ಸತ್ಯನಾರಾಯಣ, ಸುಂದರಿಯಮ್ಮ, ಆನಂದ್, ಮಂಡಿಕಲ್ಲು ಗೋಪಾಲ್ ಸೇರಿದಂತೆ ಕೋಲಾರ ಜಿಲ್ಲೆಯ ವಿಪ್ರ ಮುಖಂಡರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು

# ಕೊಳಗೀಬಿಸ ಮಾರುತಿ ದೇವಾಲಯದಲ್ಲಿ ರಾಮತಾರಕ ಜಪ - ಶಿರಸಿ

ಶಿರಸಿ ತಾಲೂಕಿನ ಕೊಳಗೀಬಿಸ ಮಾರುತಿ ದೇವಾಲಯದಲ್ಲಿ ರಾಮತಾರಕ ಜಪವನ್ನು ಪ್ರಾರಂಭಿಸಿದರು. ಎ.ಕೆ ಬಿ.ಎಮ್.ಎಸ್. ರಾಜ್ಯ ಉಪಾಧ್ಯಕ್ಷರಾದ ಶ್ರೀ. ಶಶಿಭೂಷಣ ಹೆಗಡೆ. ಕಾರ್ಯ. ಕಾರಿಣಿ ಸದಸ್ಯರಾದ ಎಮ್.ಎಲ್. ಹೆಗಡೆ., ತಾಲೂಕಾ ಪ್ರಧಾನ ಸಂಚಾಲಕ ಎನ್.ಎಸ.ಭಟ್ಟ .,ವಿದ್ವಾನ. ಗಣಪತಿ ಭಟ್ ಹಾಗು ದೇವಸ್ಥಾನ ಸಮಿತಿಯ ಅಧ್ಯಕ್ಷರು ವೇದಿಕೆಯಲ್ಲಿದ್ದರು. ಶಶಿಭೂಷಣ ಹೆಗಡಯವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಬಗ್ಗೆ ಹಾಗೂ ರಾಮತಾರಕ ಜಪದ 'ಮಹತ್ವದ ಬಗ್ಗೆ ತಿಳಿಸಿದರು



# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಳ್ತಂಗಡಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಮಹೇಶ್ ಖಾಜೆ ಅವರು ತಾ. 26-11-23 ರಂದು ಉಜಿರೆಯಲ್ಲಿ ಬೆಳ್ತಂಗಡಿ ತಾಲೂಕಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅನ್ನು ಬಲಪಡಿಸುವ ಬಗ್ಗೆ ಬ್ರಾಹ್ಮಣ ಸಮಾಜದ ಪ್ರಮುಖ ರೊಂದಿಗೆ ಮಾತುಕತೆ ನಡೆಸಿದರು

# ಬಾಂಗ್ಲಾ ಬ್ರಾಹ್ಮಣರ ಮನವಿ

ಢಾಕಾ : ಬಾಂಗ್ಲಾದೇಶದಲ್ಲಿ ನೆಲೆಸಿರುವ ಬ್ರಾಹ್ಮಣರ ವಿದ್ಯಾಭ್ಯಾಸ ಹಾಗೂ ಆರೋಗ್ಯ ಸೌಲಭ್ಯ ನೆರವು ನೀಡಬೇಕೆಂದು ಕರ್ನಾಟಕ ಬ್ರಾಹ್ಮಣ ಮಹಾಸಭಾಗೆ ಬಾಂಗ್ಲಾ ಬ್ರಾಹ್ಮಣ ಸಭಾ ಮನವಿ ಮಾಡಿದೆ.

ಬಾಂಗ್ಲಾ ದೇಶದಲ್ಲಿ 18 ಲಕ್ಷ ಬ್ರಾಹ್ಮಣರ ಪೈಕಿ 12 ಲಕ್ಷ ಬ್ರಾಹ್ಮಣರು ಸದಸ್ಯರಾಗಿದ್ದು ಈ ಸಂಬಂಧ ಬರುವ ವರ್ಷ ಫೆಬ್ರವರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರನ್ನು ಭೇಟಿ ಮಾಡಿ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಚರ್ಚಿಸಲು ತೀಮಾನಿಸಲಾಗಿದೆ ಎಂದು ಬಾಂಗ್ಲಾ ದೇಶದ ಬ್ರಾಹ್ಮಣ ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಈ ಸಂಬಂಧ ಬೆಂಗಳೂರಿನಲ್ಲಿ ನೆಲೆಸಿರುವ ಬ್ರಾಹ್ಮಣ ಉದ್ಯಮಿಗಳಿಗೆ ಬಾಂಗ್ಲಾ ದೇಶದ ಮಾರುಕಟ್ಟೆಯಲ್ಲಿ ಮುಕ್ತ ಅವಕಾಶ ಕಲ್ಪಿಸಿಕೊಡಬೇಕೆಂದು ನಾವು ಸಹ ಮನವಿ ಮಾಡಿದ್ದೇವೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಂಟಿ ಕಾರ್ಯದರ್ಶಿ ರವಿಕುಮಾರ್ ತಿಳಿಸಿದ್ದಾರೆ..



## ಮಹಾಸಭಾ ಕೇಂದ್ರ ನಿಧಿಗೆ ದೇಣಿಗೆ

ಬೆಂಗಳೂರಿನ ಪದ್ಮನಾಭನಗರದ
ಶ್ರೀಮತಿ ಸಿ.ಎ. ಕಾಂತಮ್ಮ ಮತ್ತು ಶ್ರೀ ರಮೇಶ್
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ನಿಧಿಗೆ
ರೂ.1,00,000=00 ಗಳ ದೇಣಿಗೆಯನ್ನು ನೀಡಿರುತ್ತಾರೆ.
ಶ್ರೀಯುತ ದಂಪತಿಗಳಿಗೆ ಮಹಾಸಭಾ ಪರವಾಗಿ
ಧನ್ಯವಾದಗಳನ್ನು ಅರ್ಪಿಸುತ್ತೇವೆ.

## ಹಾರನಹಳ್ಳಿಯವರಿಗೆ ಶಿಕ್ಷಣೋದ್ಯಮಿ ಪ್ರಶಸ್ತಿ



ಹಾಸನದ ಪ್ರತಿಷ್ಠಿತ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರಿಗೆ, ವಸಿಟಿ ಆಕಾಡೆಮಿಯಿಂದ ಕರ್ನಾಟಕ ಶಾಖೆಯಿಂದ ನೀಡುವ ಪ್ರತಿಷ್ಠಿತ ಅತ್ಯುತ್ತಮ ಶಿಕ್ಷಣೋದ್ಯಮಿ–2023 ಪ್ರಶಸ್ತಿ ಲಭಿಸಿದೆ.

ಸಮಾರಂಭದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಅಪಾರ ಕೊಡುಗೆ ಪರಿಗಣಿಸಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಐಟಿಸಿ ಗಾರ್ಡೇನಿಯಾ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ತಮಿಳುನಾಡಿನ ಮಾಹಿತಿ ತಂತ್ರಜ್ಞಾನ ಸಚಿವ ಡಾ. ಪಳನಿವೇಲ್ ತ್ಯಾಗರಾಜನ್ ಅವರು ಅಶೋಕ ಹಾರನಹಳ್ಳಿ ಅವರಿಗೆ ಈ ಪ್ರಶಸ್ತಿ ಪ್ರಧಾನ ಮಾಡಿದರು.



ಡಾ. ಎಂ.ಸಿ. ಶಶಿಕಾಂತ್‌ರವರಿಗೆ
ದಾವಣಗೆರೆಯ ಬಾಪೂಜಿ ಕಾಲೇಜಿನ ಓಲ್ ಮೆಡಿಸನ್ ಇಲಾಖೆಯು
ಆಲ್ಯುಮಿನಿ ಅಸೋಸಿಯೇಷನ್‌ರವರು ಸನ್ಮಾನಿಸಿ, ಗೌರವಿಸಿದರು.

## ಡಾ॥ ಕೆ.ಜಿ. ಸುಬ್ರಾಯ ಶರ್ಮರ ಪುಸ್ತಕ ಲೋಕಾರ್ಪಣೆ



ಸಾಕಮ್ಮ ಗಾರ್ಡನ್ಸ್‌ನ ವೇದಾಂತ ನಿಲಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾನ್ ಡಾ. ಕೆ.ಜಿ. ಸುಬ್ರಾಯಶರ್ಮ ಅವರ 158ನೇ ಕನ್ನಡ ಗ್ರಂಥ **"ವಿವೇಕ ಚೂಡಾಮಣಿಯಲ್ಲಿ ದೃಷ್ಟಾಂತಗಳು"** ಗ್ರಂಥವನ್ನು ಸತ್ಯಪ್ರಕಾಶ್ ಶರ್ಮ ಲೋಕಾರ್ಪಣೆ ಗೊಳಿಸಿದರು. ಶಂಭುಪ್ರಸಾದ್ ಶರ್ಮ ಹಾಗೂ ಇತರರು ಉಪಸ್ಥಿತರಿದ್ದರು.

## 17ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ

ಸಂಧ್ಯಾ ಸುರಕ್ಷ ಟ್ರಸ್ಟ್ ಜಿಲ್ಲಾ ಬ್ರಾಹ್ಮಣ ಮಹಾ ಸಭಾ ಹಾಗು ಜಿಲ್ಲಾ ಬ್ರಾಹ್ಮಣ ಮಹಿಳಾ ಸಭಾದಿಂದ ನಡೆದ ಸರ್ವಶ್ರೇಷ್ಠ ಭಾರತ ರತ್ನ ಭಾರತ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನ ಟ್ರಸ್ಟ್‌ನ 17ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಮತ್ತು ರಾಜ್ಯ ಬ್ರಾಹ್ಮಣ ಮಹಿಳಾ ಸಮಾವೇಶಕ್ಕೆ ನಡೆದ ಜಿಲ್ಲಾ ಮಹಿಳಾ ಭಜನ ಕಾಂಪಿಟೇಷನ್ ಕಾರ್ಯಕ್ರಮವು ಮಹಾಸಭಾ ಎಸ್.ನ ರಾಜ್ಯ ಉಪಾಧ್ಯಕ್ಷರು ಜಿಲ್ಲಾ ಬ್ರಾಹ್ಮಣ ಮಹಾಸಭದ ಜಿಲ್ಲಾಧ್ಯಕ್ಷರಾದ ಡಾ.ಬಿ.ಆರ್. ನಟರಾಜ್ ಜೋಯಿಸ್‌ರವರ ಘನ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ರವರು ಸಹಕಾರಿ ಧುರಿಣರಾದ ಶ್ರಿ ರಾಜೀವ್, ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಪುಷ್ಪ ಐಯ್ಯಂಗಾರ್, ಸಮಾಜ ಸೇವಕರಾದ ಸಂಸ್ಥೆಯ ಗೌರವಾಧ್ಯಕ್ಷರಾದ ಡಾ. ರಘುರಾಂ ವಾಜಪೆಯಿ, ಸಮಾಜ ಸೇವಕರಾದ ಶ್ರಿ ರವೀಂದ್ರ, ವಿದ್ಯಾರಣ್ಯ, ಅನಂತಪ್ರಸಾದ್ ಮತ್ತು ಮಹಾಸಭಾ ಜಿಲ್ಲಾ ಮಹಿಳಾ ಸಭಾದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಮುಂತಾದ ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.


**ಬದರಿನಾಥ ಯಾತ್ರಾ ಸಂಘ, ಬೆಳಗಾವಿ/ ಬೆಂಗಳೂರು ಇವರು ಆಯೋಜಿಸಿದ**

**ಭಾರತದಲ್ಲಿ ಹರಿಯುವ ಪವಿತ್ರ, ಶ್ರೀ ವೈತರಣಿ ಮತ್ತು ಗಂಡಕಿ ನದಿ ಸ್ನಾನದೊಂದಿಗೆ ಉತ್ತರ ಭಾರತ ಯಾತ್ರೆ**

**ಯಾತ್ರಾ ಸ್ಥಳಗಳು :** ವಿಜಯವಾಡಾ, ಜಗನ್ನಾಥಪುರಿ, ಗಯಾ, ಕಾಶಿ, ಪ್ರಯಾಗ (ಅಲಹಾಬಾದ), ಅಯೋಧ್ಯಾ, ನೈಮಿಷಾರಣ್ಯ, ಮಥುರಾ, ಹರಿದ್ವಾರ, ವೃಂದಾವನ, ಶ್ರೀ ಬದರಿನಾಥ, ಶ್ರೀ ಕೇದಾರನಾಥ (ಇಚ್ಛುಕರಿಗೆ ಮಾತ್ರ), ಪುಷ್ಕರ, ಮಾತೃಗಯಾ, ದ್ವಾರಕಾ, ಸೋಮನಾಥ, ಯುನಿಟಿ ಆಫ್ ಸ್ಟ್ಯಾಚ್ಯು ಫೂಯಿಚಾ

★ **ಶ್ರೀ ವೈತರಣಿ ನದಿ ತೀರದಲ್ಲಿ ಗೋದಾನ, ಪಿಂಡಪ್ರದಾನ ಹಾಗು ಗಂಡಕಿ ನದಿ ತೀರದಲ್ಲಿ ತರ್ಪಣದ ವ್ಯವಸ್ಥೆ ಕಲ್ಪಿಸಲಾಗಿದೆ.**

**ಯಾತ್ರಾ ದಿನಾಂಕ : ಎಪ್ರಿಲ್ 2024 ರಿಂದ ಮೇ 2024**
**ಸ್ಲೀಪರ್ ಕ್ಲಾಸ್ ರೂ. 45000/- ಥರ್ಡ ಎ.ಸಿ. 58,000/-**
**ಬುಕಿಂಗ್ ಕೊನೆ ದಿನಾಂಕ : ಡಿಸೆಂಬರ್ 2023**

ಸೂಚನೆ : **ಬೆಂಗಳೂರು-ಬೆಳಗಾವಿಯಿಂದ ಪಿಕಪ್ ಡ್ರಾಪ್ ವ್ಯವಸ್ಥೆಯೊಂದಿಗೆ** ಎರಡು ಬಾರಿ ಚಹಾ-ಕಾಫಿ, ತೀರ್ಥಪ್ರಸಾದ, ರಾತ್ರಿ ಉಪಹಾರ, ಆಟೋ-ಬೋಟಿಂಗಸಹಿತ.

**ಮಾಹಿತಿಗಾಗಿ ಸಂಪರ್ಕಿಸಿ : ಬೆಳಗಾವಿ - 9448347054, ಬೆಂಗಳೂರು - 7259423165**



ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ-ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞನಗರ, ಬೆಂಗಳೂರು-560 061.
ದೂ. ಸಂ. 080-26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ಎ.ಕೆ. | ನಿರ್ದೇಶಕರು | | |

## ಶ್ರದ್ಧಾಂಜಲಿ

# ಕು.ಸೌ.ಡಾ. ಸುಲಭಾ ದತ್ತ ನೀಲರಗಿ (ಡಂಬಳ)



ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್‌ರವರ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಧೀಮಂತ ಶಿರಾಣಾ ಘರಾಣಾ ಶೈಲಿಯ ಪರಂಪರೆಯ ಏಕಮೇವ ಕೊಂಡಿಯಾಗಿದ್ದ ಹಿರಿಯ ಶಿಷ್ಯೆ ಕು.ಸೌ.ಡಾ. ಸುಲಭಾ ದತ್ತ ನೀಲರಗಿ (ಡಂಬಳ) ತಮ್ಮ 69ನೆ ವಯಸ್ಸಿನಲ್ಲಿ ವೈಕುಂತವಾಸಿಗಳಾದರು. ದೇಶದಾದ್ಯಂತ ಆಕಾಶವಾಣಿ ಹಾಗೂ ಹಲವಾರು ಸಭೆ ಸಮಾರಂಭಗಳಲ್ಲಿ ಸಂಗೀತ ಸಭಾ ಸಂಸ್ಥಾಪಕರಾಗಿ, ಸಂಗೀತಾಭ್ಯಾಸಿಗಳಿಗೆ ಅವಕಾಶ ಹಾಗೂ ವೇದಿಕೆ ಕಲ್ಪಿಸಿದ ಜೆ.ಎಸ್.ವಿ.ವಿ. ಪದವಿ ಕಾಲೇಜು, ಕಿತ್ತೂರು ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕರ್ನಾಟಕ ಕಲಾಶ್ರೀ, ಕರ್ನಾಟಕದ ಸಂಗೀತ ನೃತ್ಯ ಅಕಾಡೆಮಿ ಸಹ್ಯಾದ್ರಿ ಸಂಗೀತ ಅಕಾಡೆಮಿ, ಸಂಗೀತ ಶೀರೋಮಣಿ, ಸಂಗೀತ ಸುಧಾಮಣಿ, ಸಂಗೀತ ಪುರ, ಧೀಮಂತ ನಾಗರಿಕ ಇತ್ಯಾದಿ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದ ಇವರ ದಿವ್ಯಾತ್ಮಕ್ಕೆ ವೇದಮಾತೆ ಗಾಯತ್ರಿ ದೇವಿಯು ಸದ್ಗತಿಯನ್ನು ನೀಡಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪರವಾಗಿ ಪ್ರಾರ್ಥಿಸುತ್ತೇವೆ.

# ಶ್ರೀ ಭೀಮಸೇನ್ ರಾವ್ ಮಾಡ್ಯಾಳ್ಕರ್

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಿರಿಯ ಮಾಜಿ ಉಪಾಧ್ಯಕ್ಷರು ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು ಹಾಗೂ ನೂತನ ವಿದ್ಯಾಲಯದ ಸಂಸ್ಥೆಯ ಟ್ರಸ್ಟಿನ ಮಾಜಿ ಅಧ್ಯಕ್ಷರಾದ ಭೀಮಸೇನ್‌ರಾವ್ ವಿ ಮಾಡಿಯಾಳ್ಕರ್, ನಿವೃತ್ತ ಮುಖ್ಯ ಅಭಿಯಂತರರು ಕಲ್ಬುರ್ಗಿ ಇವರು ಇಂದು (22.12.2023) ನಿಧನ ಹೊಂದಿದ ಪ್ರಯುಕ್ತ ಕಲ್ಯಾಣ ಕರ್ನಾಟಕ ಭಾಗದ ಹಿರಿಯ ಅನುಭವಿ ಸಮಾಜದ ಹಿರಿಯ ಮಾರ್ಗದರ್ಶಕರನ್ನು ಕಳೆದುಕೊಂಡಂತಾಗಿದೆ. ಸಮಾಜದ ಬಂಧುಗಳಿಗೆ ಹಾಗೂ ಕುಟುಂಬದ ವರ್ಗದವರಿಗೆ ಈ ಅತ್ಯಂತ ನೋವುಂಟು ಮಾಡಿದೆ

ಶ್ರೀ ಭೀಮಸೇನ್ ರಾವ್ ಮಾಡ್ಯಾಳ್ಕರ್ ಅವರ ಆತ್ಮಕ್ಕೆ ಸದ್ಗತಿ ಸಿಗಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಪ್ರಾರ್ಥಿಸುತ್ತೇವೆ.





# ಚಿ. ಆರ್ಯ

ಅಕಾಲ ಮರಣ ಹೊಂದಿದ ಚಿ. ಆರ್ಯ, ಮಧು ಶಾಮಿಯಾನ ಮಾಲಿಕರಾದ ಶ್ರೀ ರಮೇಶ್ ಹಾಗೂ ಜಿಲ್ಲಾ ಬ್ರಾಹ್ಮಣ ಸಭಾ ಸಮಿತಿ ಸದಸ್ಯರಾದ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಮಮತ ರಮೇಶ್‌ರವರ ಪುತ್ರ. ಚಿ॥ ಆರ್ಯನ ಅಕಾಲಿಕ ನಿಧನದಿಂದ ಅವರ ಕುಟುಂಬಕ್ಕೆ ಆಗಿರುವ ನೋವು ಭರಿಸುವ ಶಕ್ತಿಯನ್ನು ಪರಮಾತ್ಮ ಕೊಡಲಿ ಹಾಗೂ ಮಗುವಿನ ಆತ್ಮಕ್ಕೆ ಸದ್ಗತಿ ನೀಡಲೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪ್ರಾರ್ಥನೆ.

# ದಿ|| ಕ್ಯಾಪ್ಟನ್ ಶ್ರೀ ಎಂ.ವಿ. ಪ್ರಾಂಜಲ್
## ನುಡಿನಮನ




– ಛಾಯಾಪತಿ ಕೆ.ಎನ್.
(ಮಹಾಸಭಾ ಉಪಾಧ್ಯಕ್ಷರು)

ಸಾಮಾನ್ಯ ಜನರು ಕಾಲವಾದರೆ ಕೇವಲ ಸಂಬಂಧಿಕರು ಸ್ನೇಹಿತರು ಸೇರಿ ಅವರ ಅಂತ್ಯಕ್ರಿಯೆ ಮುಗಿಸುತ್ತಾರೆ.ಹೆಚ್ಚು ಪ್ರಚಾರಕ್ಕೂ ಬರುವುದಿಲ್ಲ. ಆದರೆ ಸಮಾಜದಲ್ಲಿ ಗುರುತಿಸಿಕೊಂಡ ಅನೇಕ ಗಣ್ಯ ವ್ಯಕ್ತಿಗಳು ಮರಣ ಹೊಂದಿದರೆ ಅಂತಿಮ ದರ್ಶನ ಅಂತಿಮ ಸಂಸ್ಕಾರ ಬಹಳ ಪ್ರಾಮುಖ್ಯತೆ ಪಡೆಯುತ್ತದೆ.ಸಮಾಜವೇ ಮಮ್ಮಲ ಮರುಗುತ್ತದೆ. ಕಂಬನಿ ಸುರಿಸುತ್ತದೆ.ಮುಕ್ತಿ ಪ್ರಾಪ್ತಿಯಾಗಲೆಂದು ಹರಸುತ್ತಾರೆ.ಅನೇಕರು ಹುಟ್ಟಿ ಬದುಕಿ ಸಾಯುತ್ತಾರೆ.ಆದರೆ ಕೆಲವರು ಬದುಕಿ ಬಾಳುತ್ತಾರೆ.ಅಂತಹವರ ಸಾಲಿನಲ್ಲಿ ಸೇರುತ್ತಾರೆ ನಮ್ಮ ಹೆಮ್ಮೆಯ ಕ್ಯಾಪ್ಟನ್ ಶ್ರೀ ಎಂ. ವಿ.ಪ್ರಾಂಜಲ್. ವಿಶೇಷವಾಗಿ ಬ್ರಾಹ್ಮಣ ಪಂಗಡದಲ್ಲಿ ಹುಟ್ಟಿ ದೇಶ ಸೇವೆಗೋಸ್ಕರ ಬ್ರಹ್ಮಣರು ಎಲ್ಲಾ ರಂಗದಲ್ಲಿಯೂ ಪಾತ್ರಧಾರಿ ಗಳಾಗಿರುತ್ತಾರೆ. ಬ್ರಾಹ್ಮಣ *ಶಾಪಾದಪಿ ಶರಾದಪಿ*ಶಾಪವನ್ನು ಕೊಡಬಲ್ಲ ಕೈಯಲ್ಲಿ ಶರವನ್ನು ಹಿಡಿದು ಶತ್ರು ಸಂಹಾರ ಮಾಡಬಲ್ಲ ಎಂಬುದಕ್ಕೆ ನಮ್ಮ ವೀರ ಯೋಧ ಕ್ಯಾಪ್ಟನ್ ಪ್ರಾಂಜಲ್ರವರು ಸಾಕ್ಷಿಭೂತರು.ಇಂತಹವೀರ ಯೋಧನ ಕಿರುಪರಿಚಯ ಮಾಡಿಕೊಳ್ಳುತ್ತಾ ಅವರಿಗೆ ಭಾವಪೂರ್ಣ ನುಡಿನಮನ ಶ್ರದ್ಧಾಂಜಲಿ ಅರ್ಪಿಸುವುದು ನಮ್ಮ ಕರ್ತವ್ಯ. ಶ್ರೀಮತಿ ಅನುರಾಧ ವೆಂಕಟೇಶ್ ಮತ್ತು ಶ್ರೀ ವೆಂಕಟೇಶ್ ರವರ ಪ್ರೀತಿಯ ಪುತ್ರನಾಗಿ ಜನಿಸಿದ ದಿವಂಗತ ಶ್ರೀ ಪ್ರಾಂಜಲ್ ರಕ್ತ ಪಿಪಾಸುಗಳಾದ ದ್ರೋಹಿಗಳಾದ ರಾಕ್ಷಸರನ್ನು ಮೀರಿಸುವ ಹೀನ ಮನೋಭಾವ ದುಷ್ಟಶಕ್ತಿ ಹೊಂದಿರುವ ಪಾಕಿಸ್ತಾನಿ ಭಯೋತ್ಪಾದಕರಿಂದ ಹತನಾಗಿ ವೀರ ಸ್ವರ್ಗ ಸೇರಿದ ಶ್ರೀ ಪ್ರಾಂಜಲ್ ಪರಿಚಯ ಹೀಗಿದೆ.

ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ : ಒಂದು ಕಿರುಪರಿಚಯ (ಅವನತಂದೆ)

18th July 1995 ಸುಮಾರು 10.20 ಬೆಳಿಗ್ಗೆ ಒಂದು ದಷ್ಟ–ಪುಷ್ಟ ಕೂಸು ನಮ್ಮ ಜೀವನದಲ್ಲಿ ದೈವೇಚ್ಛೆಯಂತೆ ಜನಿಸಿತು. ಅಂದಿನಿಂದ ನಾವು ತಾಯಿ ತಂದೆ ಎಂದು ಕರೆಯಲ್ಪಟ್ಟೆವು. ಅಜ್ಜಿ ಅಜ್ಜ (ಕೂಸಿನ ಅಮ್ಮನ ಅಮ್ಮ ಅಪ್ಪ) ಕೂಡ ಜನಿಸಿದರು. ಬೆಂಗಳೂರಿನ ವೆನ್ಲಾ ಆಸ್ಪತ್ರೆಯಲ್ಲಿ ವೈದ್ಯೆ ಡಾಕ್ಟರ್ ಲತಾ ವೆಂಕಟರಾಮ ಅವರ ಸುಪರ್ದಿನಲ್ಲಿ ಜನನ. ನಮ್ಮ (ಹೆತ್ತವರ) ಆಸೆಯಂತೆ ಒಂದು ಪುಟ್ಟ ಕೃಷ್ಣನ ಪ್ರತಿಮೆಯನ್ನ ವೈದ್ಯರಿಗೆ ನೀಡಲಾಯಿತು. ಮರುಕ್ಷಣದಲ್ಲಿ ಆಪ್ರತಿಮೆಯನ್ನು ವೈದ್ಯರು ನಮಗೆ ವಾಪಸ್ಸು ನೀಡಿ ಆ ಪುಟ್ಟ ಬಾಲಕನ ಜೊತೆಯಲ್ಲಿಯೇ ಯಾವಾಗಲೂ ಇರಲಿ ಎಂದು ಹೇಳಿ ಹರಸಿದರು. ಈಗಲೂ ಆ ಪ್ರತಿಮೆ ನಮ್ಮ ಬಳಿ ಇದೆ.

ಅವನ ನಾಮಕರಣವು ವಿದ್ಯುಕ್ತವಾಗಿ ಅಜ್ಜಿಯ (ಅಮ್ಮನ ಅಮ್ಮ) ಮನೆಯಲ್ಲಿ ನೆರವೇರಿಸಿದೆವು (ಕತ್ರಿಗುಪ್ಪೆ ಬೆಂಗಳೂರು). ಪ್ರಾಂಜಲನಗು ನಗುತ್ತಾ ಸ್ವೀಕರಿಸಿದ. ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ದೇವರ ನೈವೇದ್ಯದ ಪ್ರಸಾದ.

ನಾನು, ಮಂಗಳೂರು ರಿಫೈನರಿ ಅಂಡ್ಪೆಟ್ರೋಕೆಮಿಕಲ್ಲಿಮಿಟೆಡ್ನವೆಂಬ – 1994 ಇಂದ ಸೇವೆಸಲ್ಲಿಸುತಿದ್ದೆ. ನಾವು ಮಂಗಳೂರಿನ ದೇರೇ ಬೈಲ್ ಕೊಂಚಾಡಿಯಲ್ಲಿ ಶ್ರೀ. ಜಿ.ಕೆ. ಭಟ್ (ನಿವೃತ KIOCL ಅಧಿಕಾರಿ) ಅವರಿಗೆ ಸೇರಿದ ಮನೆಯಲ್ಲಿ ಬಿಡಾರಕ್ಕಿದ್ದೆವು. ನಾಲ್ಕು ತಿಂಗಳ ಪ್ರಾಂಜಲ್‌ಗೆ ಅದು ಮಂಗಳೂರಿನ ಬೆಳೆದ ಮೊದಲ ಮನೆ. ಉದ್ಯೋಗ ನಿಮಿತ್ತ ನಾವು, ಜೂನ್ 1996, ಎಂ.ಆರ್.ಪಿ.ಎಲ್ ಟೌನ್ ಶಿಪ್‌ನಲ್ಲಿ ವಾಸಿಸತೊಡಗಿದೆವು. ಅಂದಿನಿಂದ ಅವನ ಬೆಳವಣಿಗೆ ಅವನ ಅಪಾರ ಸ್ನೇಹಿತರ ಗುಂಪಿನಲ್ಲಿ ಮಳೆ, ಗಾಳಿ, ಚಳಿ ಲೆಕ್ಕಿಸದೆ ಸಾಗತೊಡಗಿತು. ಅವರ ದಿನಚರಿ ಆಟದಲ್ಲಿಯೇ ಕಳೆದು ಕತ್ತಲಾದ ನಂತರ ಮಕ್ಕಳನ್ನು ಎಳೆದು ತರುವುದು ಹೆತ್ತವರಿಗೆ ಕಷ್ಟಸಾಧ್ಯ ಕೆಲಸವಾಗಿತ್ತು. ಮಕ್ಕಳು ತಮ್ಮ ಜಗಳಗಳನ್ನು ಹೆತ್ತವರ ಗಮನಕ್ಕೆ ಬರಗೊಡದೆ ತಮ್ಮತಮ್ಮಲ್ಲಿಯೇ ನಿವಾರಿಸಿಕೊಳ್ಳುತ್ತಿದ್ದರು.

ಪ್ರಾಂಜಲ್‌ನ ವ್ಯಕ್ತಿತ್ವ ವಿಕಾಸಗೊಳ್ಳುತ್ತ ಸಾಗಿತು. ನಿರ್ಭಯತೆ ಹಾಗೂ ಮುಂದಾಳತ್ವದ ಗುಣಗಳು ಅವನಲ್ಲಿ ಸಣ್ಣ ಪ್ರಾಯದಿಂದಲೇ ಕಾಣತೊಡಗಿದವು. ಸುಮಾರು ಮೂರು ವರ್ಷದವನಿದ್ದಾಗಲೇ ಅವನ ಬೈಸೈಕಲ್ ನ ಬ್ಯಾಲೆನ್ಸಿಂಗ್ ವ್ಹೀಲ್ ಮುರಿದುಬಿದ್ದು ಅದನ್ನು ತಕ್ಷಣ ರಿಪೇರಿ ಮಾಡಿಸಲಾಗದೇ ಇದ್ದುದರಿಂದ ಉಳಿದಿದ್ದ ಇನ್ನೊಂದು ಬ್ಯಾಲೆನ್ಸಿಂಗ್ ವ್ಹೀಲ್ ಅನ್ನೂ ತೆಗೆಸಿಕೊಂಡು ಬೀಳುತ್ತಾ ಏಳುತ್ತಾ ಬೈಸಿಕಲ್ ಓಡಿಸುವುದನ್ನು ಕಲಿತ.

ಸುಮಾರು ಮೂರು–ಮೂರೂವರೆ ವರ್ಷದವನಿದ್ದಾಗ ಈಜು ಕಲಿಯುವ ಸಂದರ್ಭ. ಹಂತ ಹಂತವಾಗಿ ಕಲಿಯಬೇಕಿದ್ದ ಸಮಯ ಅದು. ಆದರೆ ಯಾಕೋ ಅವನಿಗದು ರುಚಿಸಲಿಲ್ಲ. ಸುಮಾರು ಆರು ಅಡಿ ಆಳವಿದ್ದ ಜಾಗದಲ್ಲಿ ಏಕಾಏಕಿ ನೀರಿಗೆ ಧುಮುಕಿಬಿಟ್ಟ. ನಿಸ್ಸಂಶಯವಾಗಿ ಮುಳುಗಿದ. ಸಾವರಿಸಿಕೊಂಡು ಮೇಲೆ ಬಂದ. ಕೈಕಾಲು ಬಡಿಯುತ್ತಿದ್ದರೆ ನೀರಿನ ಮೇಲೆ ತೇಲಬಹುದೆಂಬ ಅರಿವು ಬಂತು. ಮೂರ್ನಾಲ್ಕು ದಿನದಲ್ಲಿ ಈಜಿನಲ್ಲಿ ಪಳಗಿಹೋದ. ಬೇರಾವ ತರಬೇತಿಯನ್ನೂ ತೆಗೆದುಕೊಳ್ಳಲು ನಿರಾಕರಿಸಿದನೆಂದೇ ಹೇಳಬೇಕು.

ಮನೆಯಲ್ಲಿ ಸಂಪೂರ್ಣ ಕನ್ನಡದ ವಾತಾವರಣ. ಮೂರೂವರೆ ವರ್ಷದವನಿದ್ದಾಗ, ನರ್ಸರಿಗೆ ಸೇರಿಸುವ ಸಂದರ್ಭದಲ್ಲಿ ಅವನಿಗೆ ಇಂಗ್ಲಿಷ್ ಗೊತ್ತೇ ಇರಲಿಲ್ಲ... ಕಾರ್ಗಿಲ್ ಯುದ್ಧದ ವೇಳೆ. ಮನೆಯ ಅಡುಗೆ... ರಾಗಿ ಮಣ್ಣಿ, ಗಂಜಿ–ತಂಬ್ಳಿ ತಿಂದು ಬೆಳೆದ ಹುಡುಗ ಅವನು.

ಅವನು ಕಾರ್ಗಿಲ್ ಯುದ್ಧದ ದೃಶ್ಯಗಳನ್ನು ಟಿ.ವಿ.ಯಲ್ಲಿ ನೋಡುತ್ತಲೇ ಇದ್ದ. ಸಾಧಾರಣ ಎಂಟು ವರ್ಷದವನಿದ್ದಾಗ ಫ್ಲೈಟ್ ಸಿಮ್ಯುಲೇಟರ್ ಆಟದ ಸಿ.ಡಿ.ಯನ್ನು ಅವನಿಗೆ ತಂದುಕೊಟ್ಟೆವು. ಅದು ಅವನ ಜೀವನದ ಟರ್ನಿಂಗ್ ಪಾಯಿಂಟ್ ಆಯಿತು ಅಂತಲೇ ಹೇಳಬೇಕು. ವಿಡಿಯೋ ಆಟವೇ ಆದರೂ, ಫ್ಲೈಟ್ ಸಿಮ್ಯುಲೇಟರ್‌ನಲ್ಲಿ ವಿಮಾನ ಹಾರಿಸುವುದರಲ್ಲಿ ಪಳಗಿದ್ದ. ಮೂರನೇ ಕ್ಲಾಸ್ ನಲ್ಲಿರುವಾಗಲೇ ಕಬ್ ಮೂವ್ಮೆಂಟ್‌ನಲ್ಲಿ ಸೇರಿದ್ದ. ಯೂನಿಫಾರ್ಮ್‌ನ ಸೆಳೆತ ಆಗಿಂದಲೇ ಜೋರಾಗಿತ್ತು. ಇನ್ನೂ ಸ್ವಲ್ಪ ಕಾಲದ ನಂತರ ಲಕ್ಷ್ಯ ಜೂನ್ 1996 ಸಿನೆಮಾದಿಂದ ವಿಪರೀತ ಪ್ರಭಾವಿತನಾದ. ಈ ಎಲ್ಲ ಅಂಶಗಳೂ ಅವನನ್ನು ಆರ್ಮಿ / ಏರ್ ಫೋರ್ಸ್ ಗಳ ಕಡೆಗೆ ಆಕರ್ಷಿಸಲು ಕಾರಣವಾಗಿದ್ದವು.

ನರ್ಸರಿ ಇಂದ10 ತರಗತಿ ವರೆಗೂ ಎಂಆರ್ಪಿಎಲ್ ಶಾಲೆಯಲ್ಲಿಯೇ ಅವನ ವಿದ್ಯಾಭ್ಯಾಸ (ಮಧ್ಯಒಂದು ವರ್ಷ ಆರನೇತರಗತಿ ಬಿಟ್ಟು, ನಾವು ಆಗ ಡೆಲ್ಲಿಯಲ್ಲಿ ಇದ್ದೆವು). ಆರನೇ ತರಗತಿಯಲ್ಲಿ SCOUT ಆದ. ಮುಂದುವರೆದು ರಾಷ್ಟ್ರಪತಿ SCOUT ಸರ್ಟಿಫಿಕೇಟ್ಗಳಿಸಿದ. NCC ಸ್ಕೂನಲ್ಲಿ ಇರಲಿಲ್ಲ. ಯುನಿಫಾರ್ಮ್ಬಗ್ಗೆಬಹಳ ಗೌರವ, ಹೆಮ್ಮೆ. 1 ಮತ್ತು 2 ಪಿಯುಸಿ ಮಹೇಶ್ ಪಿ.ಯು. ನಲ್ಲಿ. ಪ್ರಾಂಜಲ್‌ನ ಸೇನೆ ಸೇರುವ ದಿಟ್ಟ ನಿರ್ಧಾರಮುಂದುವರೆದಿತ್ತ. ಸಿ.ಇ.ಟಿ. ಪರೀಕ್ಷೆಯನ್ನು ನಮ್ಮ ಮತ್ತು ಅವನ ತಾತ ಕೆ.ಎ.ನ್ನಾಗರಾಜ್ (ತಾಯಿಯತಂದೆಯತಮ್ಮ) ಒತ್ತಡಕ್ಕೆ ಬರೆದ. ಅವನ ಎಲ್ಲಾ ಚಟುವಟಿಕೆಗಳು ಸೇನೆಯ ದೃಷ್ಟಿ ಇಂದ. ಜೂಲೈ 2013 ನಲ್ಲಿ ಬೆಂಗಳೂರಿನ RV Collegeನಲ್ಲಿ ಕೆಮಿಕಲ್ ಇಂಜಿನಿಯರಿಂಗ್ ಸೀಟ್ ಪಡೆದ. ಸೇರಿಸಿಯೂ ಆಯಿತು. RV ಕಾಲೇಜ್ನಲ್ಲಿ NCC ಯಯುನಿಫಾರ್ಮ್ಧರಿಸಿದ.

ನವೆಂಬರ್ಮಾಸದಲ್ಲಿಸೇನೆಯ Technical Entry Scheme (TES) ನಎಂಟ್ರಿಯ Service Selection Board(SSB) ಇಂದ ಸೆಲೆಕ್ಷನ್ಪ್ರಕ್ರಿಯೆಗೆ ಕರೆ ಬಂತು. ಮೊದಲ ಪ್ರಯತ್ನದಲ್ಲೇ ತೇರ್ಗಡೆಯಾಗಿ January 2014ನಲ್ಲಿ ಅವನನ್ನು Officers Training Academy (OTA) Gaya ಗೆ ಸೇರಿಸಿ ಬಂದೆವು. ಪ್ರಾಂಜಲನ ಸೇನೆಯ ಕನಸು ನನಸಾಯಿತು. 18 ವರ್ಷ ವಯಸ್ಸು.

2017 ಡಿಸೆಂಬರ್ 9 CADET MV Pranjal, ನಮ್ಮ ಹೆಮ್ಮೆಯ ಮಗ, Lieutenant MV Pranjal ಆಗಿ ಕಾರ್ಯ ಪ್ರವೃತ್ತನಾದ. ಅವನ passing out parade ಗೆನಾನು, ಅವನ ಅಮ್ಮ, ಅವನ ಅಜ್ಜ–ಅಜ್ಜಿ, ಅವನ ಬಾಲ್ಯ ಸ್ನೇಹಿತ ಮತ್ತು ಅವನ chemistry teacher ಹೋಗಿದ್ದೆವು. ಸೇನೆಯ Corps of Signals ನಲ್ಲಿ permanent commission. ಸೇನೆಯ ವೃತಿಯನ್ನು ಪ್ರಾರಂಭಿಸಿದ. 2021 ನವೆಂಬರ್ನಲ್ಲಿ ಅವನಿಗೆ Rashtriya Rifles (RR) 63 nalliKalakote ( J&K)ನಲ್ಲಿ posting ಬಂತು. RRನ ಕಾರ್ಯಾಚರಣೆ J&K ಯಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಣಗೊಳಿಸಿ ಭಯೋತ್ಪಾದನೆಯನ್ನು ದಮನ ಗೊಳಿಸುವ ದೃಷ್ಟಿಯಿಂದ ಹುಟ್ಟು ಹಾಕಿದ ಒಂದು conter insurgency force.

ಎರಡು ವರ್ಷಗಳ ಹಿಂದೆಯಷ್ಟೇ ಸಾಂಸಾರಿಕ ಜೀವನದ ಹಾದಿಯನ್ನು ತುಳಿದಿದ್ದ. Captain MV pranjal ಮತ್ತು Aditi Muddebihalkar 27 ಆಗಸ್ಟ್ 2021 ರಂದು ತಮ್ಮ ದಾಂಪತ್ಯ ಜೀವನವನ್ನು ಪ್ರಾರಂಭಿಸಿದರು. ಅದಿತಿ biotechnology ಯಲ್ಲಿ PhDಯನ್ನು IIT chennaiನಲ್ಲಿ ಮಾಡುತಿದ್ದಾಳೆ.

**ಅಲ್ಲಿಯ ಮಿಲಿಟರಿ ಅಧಿಕಾರಿ ಕೊಟ್ಟ ವಿವರಣೆ.**

ಸೆಪ್ಟಂಬರ್ 19 ರಿಂದ 23ರ ತನಕ ಜಮ್ಮು ಕಾಶ್ಮೀರದ ಗಡಿ ಪ್ರದೇಶ ರಜೌರಿ ಎಂಬ ಸ್ಥಳದಲ್ಲಿ ಪಾಕಿಸ್ತಾನಿ ಭಯೋತ್ಪಾದಕರ ಜೊತೆಯಲ್ಲಿ ಸಮರ ನಡೆಯುತ್ತಿತ್ತು.ಬಹಳ ಹೊತ್ತು ಗುಂಡುಗಳನ್ನು ಹಾರಿಸುವುದು ನಡೆಯುತ್ತಿತ್ತು. ನಮ್ಮ ಸೈನಿಕರು ನಿಧಾನವಾಗಿ ಈ ಭಯೋತ್ಪಾದಕರ ಹತ್ತಿರ ಬಂದರು. ಈ ಕದನದಲ್ಲಿ ಮೊದಲೇ ನಮ್ಮ ಮೂವರು ಸೈನಿಕರು ಗಾಯಗೊಂಡಿದ್ದರು. ನಂತರ ಈ

ಗಾಯಗಳಿಂದಾಗಿಯೇ ಅವರು ಮೃತಪಟ್ಟ ರೆಂದು ತಿಳಿಯಿತು.ಆ ಭಯೋತ್ಪಾದಕರು ಅಲ್ಲಿಂದ ಕದಲಲು ಅವಕಾಶ ನೀಡದಂತೆ ಹೋರಾಟ ನಡೆದಿತ್ತು.ಆಗಲೇ ಸಾಯಂಕಾಲವಾಗುತ್ತಿತ್ತು. ಕತ್ತಲಾಗುವ ಸಮಯ ಸಮೀಪಿಸುತ್ತಿತ್ತು.ನಮ್ಮ ಹೆಚ್ಚುವರಿ ಪಡೆಗಳು ಆ ಸ್ಥಳವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದವು. ರಾತ್ರಿಯಲ್ಲ ಮಾಡ್ರನ್ ಎಕ್ಯೂಪ್ಮೆಂಟ್ಗಳ ಮೂಲಕ ಈ ಸ್ಥಳವನ್ನು ನಿಗ ವಹಿಸಿ ವಶಪಡಿಸಿ ಕೊಳ್ಳಲು ಪ್ರಯತ್ನ ಸಾಗುತ್ತಿತ್ತು.ಭಯೋತ್ಪಾದ ಕರು ಅಲ್ಲಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗ ದಂತೆ ಕಾಯಲಾಗುತ್ತಿತ್ತು. ಮರುದಿನ ಬೆಳಿಗ್ಗೆ ಕಾರ್ಯ ಮುಂದುವರಿಸಲಾಯಿತು. ಬೆಳಗ್ಗೆ ಸುಮಾರು ಏಳು ಗಂಟೆಗೆ ಅಲ್ಲಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದ ಭಯೋತ್ಪಾದಕನಿಗೆ ಸಚಿನ್ ಗುಂಡು ಹಾರಿಸಿದ.ಆ ಭಯೋತ್ಪಾದಕ ಹಾರಿಸಿದ ಗುಂಡುಸಚಿನ್ನಿಗೆ ತಾಗಿ ಸಚಿನ್ ಗಾಯಗೊಂಡ. ಹೋರಾಟವನ್ನು ಮಧ್ಯಾಹ್ನ ದವರೆಗೆ ಮುಂದುವರಿಸಿ ಮತ್ತೆ ಮತ್ತೊಬ್ಬ ಭಯೋತ್ಪಾದಕನ ಬಲಿ ಪಡೆಯಲಾಯಿತು. ಈ ಆಪರೇಷನ್ನಲ್ಲಿ ಐದು ಜನ ಶೂರರು ಕ್ಯಾಪ್ಟನ್ ಪ್ರಾಂಜಲ್,ಕ್ಯಾಪ್ಟನ್ ಶುಭಂಹವಾಲ್ದಾರ್, ಮೋಜಿತ್ ಲಾಸ್, ನಾಯಕ ಸಂಜಯ್,ಬೇಸ್ ಮತ್ತು ಪ್ಯಾರಾ ಗ್ರೂಪ್ನ ಸಚಿನ್ ಅವರು ಶೌರ್ಯದಿಂದ ಹೋರಾಡಿದರು.ದೇಶಕ್ಕಾಗಿ ಹೋರಾಡಿದರು,ದೇಶದ ಗೌರವಕ್ಕಾಗಿ ಹೋರಾಡಿದರು,ದಿನಾಂಕ 22.11 ರಂದು ಇವರು ಭಯೋತ್ಪಾದಕರ ಗುಂಡಿಗೆ ಬಲಿಯಾದರು ಭಯೋತ್ಪಾದಕರ ವಿರುದ್ಧ ಹೋರಾಡಲು ನಮಗೆ ಅವರಿಂದ ಪ್ರೇರಣೆ ಸಿಗುತ್ತದೆ. ಇಲ್ಲಿ ಇಬ್ಬರೂ ಭಯೋತ್ಪಾದಕರಿದ್ದರು ಕಾರಿ ಎಂಬ ವ್ಯಕ್ತಿ ಮೋಸ್ಟ್ ವಾಂಟೆಡ್ ಟೆರರಿಸ್ಟ್ ಒಬ್ಬ ಪಾಕಿಸ್ತಾನ ಅಫ್ಘಾನಿಸ್ತಾನಗಳಲ್ಲಿ ಟ್ರೈನಿಂಗ್ ಪಡೆದಿದ್ದ. ಜನವರಿಯಲ್ಲಿ ದಾಂಗರಿಯಲ್ಲಿ ನಡೆದ ನಾಗರೀಕರ ಹತ್ಯೆಯ ಹಿಂದಿನ ಮಾಸ್ಟರ್ ಮೈಂಡ್ ಇವನೇಎಂದು ತಿಳಿದುಬಂದಿದೆ. ಕಾಂಡಿಯಲ್ಲಿ ಸೆಕ್ಯೂರಿಟಿ ಫೋರ್ಸಸ್ ಮೇಲೆ ನಡೆದ ದಾಳಿಯಲ್ಲಿ ಇವನ ಕೈವಾಡವಿದೆ. ಎಂದು ತಿಳಿದು ಬಂದಿದೆ.ಯುದ್ಧದ ತಳದಿಂದ ಭಾರಿ ಪ್ರಮಾಣದ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಪ್ರಮಾಣ ನೋಡಿದರೆ ಭಯೋತ್ಪಾದಕತೆಯನ್ನು ಇನ್ನು ಹೆಚ್ಚು ಮಾಡುವ ಅವರ ಇಂಟೆಂಶನ್ ಇತ್ತು ಎಂದು ತಿಳಿಯುತ್ತದೆ.ಈಗಲೂ ಮತ್ತಷ್ಟು ಭಯೋತ್ಪಾದಕರಿಗಾಗಿ ಹುಡುಕಾಟ ಮುಂದುವರಿದಿದೆ. ಈ ಭಯೋತ್ಪಾದಕರ ಹತ್ಯೆ ಸೆಕ್ಯೂರಿಟಿ ಫೋರ್ಸ್ನ ಜಂಟಿ ಕಾರ್ಯಾಚರಣೆಯ ಒಂದು ಸ್ಯಾಂಪಲ್.

ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಜೋತಿಷ್ಯ ಕೇಂದ್ರ
ಸರ್ವಸಿದ್ಧಿ ಸಾಧಕ ಜೋತಿಷ್ಯ ಶಿರೋಮಣಿ ಶಾಸ್ತ್ರೀಯ ತ್ರಿಕಾಲ ಜ್ಞಾನಿಗಳು
ಶ್ರೀ ಶ್ರೀ ವಿಜೇಂದ್ರ ಗುರೂಜಿ



ಜಾತಕ ಹಸ್ತರೇಖೆ ಫೋಟೋ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ. ಶ್ರೀ ಗಾಯತ್ರಿ ಆರಾಧಕರು ಮಕ್ಕಳ ಅಸಭ್ಯವರ್ತನೆ, ಮದುವೆ ವಿಳಂಬ, ದಾಂಪತ್ಯಸಂಗ, ಡ್ರೈವೋಸ್ ಸಮಸ್ಯೆ, ಹಣಕಾಸಿನ ತೊಂದರೆ, ಉದ್ಯೋಗ ವ್ಯಾಪಾರ ನಷ್ಟ, ಪ್ರೇಮ ವಿಚಾರ, ಮಾನಸಿಕ ಕಿರಿಕಿರಿ, ಶತ್ರುಕಾಟ, ಕೋರ್ಟ್ ಕೇಸ್, ದುಷ್ಟಶಕ್ತಿ ತೊಂದರೆ, ಆರೋಗ್ಯ ಸಮಸ್ಯೆ ಸಂತಾನ ಸಂತಾನ ಸಮಸ್ಯೆ. ನಿಮ್ಮ ಸಮಸ್ಯೆ ಏನೇ ಇರಲಿ 100ರಷ್ಟು ಪರಿಹಾರ ಶತಸಿದ್ಧ


ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ.

ನಮ್ಮ ವಿಳಾಸ : 157, ಶ್ರೀರಾಮ ಪ್ಲಾಜಾ, ಗ್ರೌಂಡ್ ಫ್ಲೋರ್, ಸತೀಶ್ ಸ್ಟೋರ್ಸ್ ಎದುರು
ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು-560004. ಫೋನ್ : 99452 22228

ಜಾಹೀರಾತು

# ‘ಸಿರಿಭೂವಲಯ’ದ ಕರ್ಲಮಂಗಲಂ ಶ್ರೀಕಂಠಯ್ಯ

**– ಸುರೇಶ್ ಮೂನ**



ಸ್ಮಾರ್ಥ ಬಡಗನಾಡು ಸಮುದಾಯಕ್ಕೆ ಸೇರಿದ ಕರ್ಲಮಂಗಲಂ ಶ್ರೀಕಂಠಯ್ಯನವರು ಮಾಗಡಿ ಬಳಿಯ ಕರ್ಲಮಂಗಲಂ ಎಂಬ ಗ್ರಾಮದಲ್ಲಿ ಸುಬ್ಬಯ್ಯ ಮತ್ತು ಬ್ರಮರಾಂಭ ಈ ದಂಪತಿಗಳ ನಾಲ್ಕನೆಯ ಪುತ್ರರಾಗಿ 1902ರ ಸೆಪ್ಟೆಂಬರ್ 14 ರಂದು ಜನಿಸಿದರು. ತಂದೆ ಸುಬ್ಬಯ್ಯ ಹರಿಕಥಾ ವಿದ್ವಾಂಸರು. ಮನೆಯಲ್ಲಿ ಸಾತ್ವಿಕ ವಾತಾವರಣ. ಅದರ ಪರಿಣಾಮ ಬಾಲಕ ಶ್ರೀಕಂಠಯ್ಯನ ಮೇಲು ಆಗಿತ್ತು. ಆ ಚಿಕ್ಕ ವಯಸ್ಸಿಗೆ ನಾಲ್ಕು ಗೋಡೆಗಳ ಒಳಗಿದ್ದ ಸೀಮಿತ ಶಿಕ್ಷಣ ಅವರಿಗೆ ಹಿಡಿಸಲಿಲ್ಲ. ಹೊರ ಪ್ರಪಂಚ ಹಾಗೂ ಪ್ರಕೃತಿ ಇವರ ಪಾಠ ಶಾಲೆಯಾಯಿತು. ಪಠ್ಯಪುಸ್ತಕಗಳನ್ನು ಓದದಿದ್ದರೂ ತಂತ್ರಶಾಸ್ತ್ರದ ಅಧ್ಯಯನದ ಕಡೆಗೆ ಮನಸ್ಸು ವಾಲಿತು. ತಂದೆಯ ಗ್ರಂಥ ಭಂಡಾರದ ಜ್ಞಾನವನ್ನು ಅರಗಿಸಿಕೊಂಡರು. ಅದು ಸಾಲದೆ ಮಾಗಡಿಯ ವಿದ್ವಾಂಸರಿಂದ ಇತರ ಗ್ರಂಥಗಳನ್ನು ಪಡೆದು ಅಧ್ಯಯನ ಮಾಡಿದರು. ಆದರೂ ಸಮಾಧಾನವಾಗದೆ ಜ್ಞಾನಾರ್ಜನೆಗಾಗಿ ಸಂಚಾರ ಮಾಡಿದರು . ವಿವಿಧ ಭಾಷೆಗಳನ್ನು ಕಲಿತರು. ವಿವಿಧ ಮತಗಳ ತತ್ವ ಸಿದ್ಧಾಂತಗಳನ್ನು ಅರಿತರು. ಒಬ್ಬ ಮಹಾನ್ ಪಂಡಿತರಾಗಿ ರೂಪುಗೊಂಡರು. ಹೀಗೆ ಜ್ಞಾನ ಯೋಗದಲ್ಲಿ ನಿರತರಾದ ಇವರಿಗೆ ಪ್ರಾಪಂಚಿಕ ವಿಷಯಗಳ ಬಗ್ಗೆ ಆಸಕ್ತಿ ಮೂಡಲಿಲ್ಲ. ಯಾವ ಬಂಧನ ಗಳಿಗೂ ಒಳಗಾಗದೆ ಮುಕ್ತರಾಗಿ ಅಧ್ಯಯನ, ಸಂಶೋಧನೆ ಮತ್ತು ನಾಡಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರು ವಹಿಸಿರುವ ಪಾತ್ರ ಅಗಾಧವಾದುದು. 1927 ರಲ್ಲಿ ಗಾಂಧೀಜಿ ಬೆಂಗಳೂರಿಗೆ ಬಂದಿದ್ದಾಗ ಅವರ ಅಂಗರಕ್ಷಕ ಆಗುವ ಅಪರೂಪದ ಅವಕಾಶ ಇವರಿಗೆ ದೊರಕಿತ್ತು. ಇದರಿಂದ ಅಪ್ಪಟ ಗಾಂಧಿವಾದಿಯಾಗಿ ಜೀವನಪರ್ಯಂತ ಖಾದಿ ದಾರಿ ಯಾದರು. ಗಾಂಧೀಜಿ ಅವರಿಂದಲೇ ಕಾಂಗ್ರೆಸ್ ಧ್ವಜವನ್ನು ಸ್ವೀಕರಿಸಿ ತಮ್ಮ ಸಹೋದರ ಕೃಷ್ಣಮೂರ್ತಿ ಅವರೊಂದಿಗೆ ಮಾಗಡಿಗೆ ಕಾಲ್ನಡಿಗೆಯಲ್ಲಿ ಸಾಗಿ ಅಲ್ಲಿ ಧ್ವಜವನ್ನು ಸ್ಥಾಪಿಸಿದ್ದರು. ಕ್ರಮೇಣ ಕಾಂಗ್ರೆಸ್ ಚಳುವಳಿಯಲ್ಲಿ ಪಾತ್ರ ವಹಿಸುತ್ತಾಅಹಮದಾಬಾದ್ನ ಸೆರೆಮನೆಗೂ ಹೋಗಬೇಕಾಗಿ ಬಂದು ಅಲ್ಲಿ ನೆಹರು ರವರ ಸಂಪರ್ಕ ವಾಯಿತು. 1939ರ ಶಿವಪುರದ ಸತ್ಯಾಗ್ರಹದಲ್ಲಿ ಇವರು ಅಗ್ರಗಣ್ಯ ಪಾತ್ರವನ್ನು ವಹಿಸಿದ್ದರು

1940 ರಲ್ಲಿ ಕರ್ಲಮಂಗಲಂ ನ ಹರಿಜನಕೇರಿಗೆ ಪ್ರವೇಶಿಸಿ ಮದ್ಯ ಮತ್ತು ಮಾಂಸವನ್ನು ತ್ಯಜಿಸಲು ಬೋಧಿಸಿದರಲ್ಲದೆ ಅವರೆಲ್ಲರಿಗೂ ರಾಮದೇವರ ಪಟವನ್ನು ಇಟ್ಟು ಜೀವನವನ್ನು ಸುಧಾರಿಸಿಕೊಳ್ಳುವ ಮಾರ್ಗವನ್ನು ತೋರಿಸಿ ದರು. ಇದರಿಂದಾಗಿ ಕೆಲವು ಸ್ವಜನ ರಿಂದಲೇ ವಿರೋಧವನ್ನು ಎದುರಿಸಬೇಕಾಗಿ ಬಂದರೂ ತಮ್ಮ ಧ್ಯೇಯೋದ್ದೇಶಗಳನ್ನು ಬದಲಿಸಲಿಲ್ಲ.

ಬೆಂಗಳೂರಿನಲ್ಲಿ ಪೊಲೀಸರ ಅಡೆತಡೆಗಳಿಂದ ಲೆಕ್ಕಿಸದೆ ವಿದೇಶಿ ಟೋಪಿಗಳನ್ನು ಸಂಗ್ರಹಿಸಿ ಅದನ್ನು ಸುಡುವ ಕಾರ್ಯದಲ್ಲಿ ಇವರು ನೇತೃತ್ವ ವಹಿಸಿದ್ದರು. ಇದರಲ್ಲಿ ಇವರೊಂದಿಗೆ

ಸಹಭಾಗಿ ಆಗಿದ್ದವರು ಕನ್ನಡಪರ ಹೋರಾಟದ ಪ್ರಸಿದ್ಧ ವ್ಯಕ್ತಿಯಾಗಿದ್ದ ಮ. ರಾಮಮೂರ್ತಿ ಅವರು.

ಪತ್ರಿಕೋದ್ಯಮ ಕ್ಷೇತ್ರಕ್ಕೂ ಇವರ ಕೊಡುಗೆ ಅಪಾರ. 1931 –32 ರಲ್ಲಿ ಇವರು' ಅಹಿಂಸೆ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು ನಂತರ 1935– 36 ರಲ್ಲಿ 'ಬ್ರಾಹ್ಮಣ' ಎಂಬ ಪತ್ರಿಕೆಯನ್ನು ಹೊರ ತರುತ್ತಿದ್ದರು. ಇದೊಂದು ವಿದ್ವತ್ಪೂರ್ಣ ಪತ್ರಿಕೆಯಾಗಿತ್ತು. ಇದರಲ್ಲಿ ವೇದ ಉಪನಿಷತ್ತುಗಳ ಅಂತಃಸತ್ವವನ್ನು ಪರಿಚಯಿಸುವ ಅಪಾರ ಕಾಳಜಿ ಅವರಿಗಿತ್ತು. ಈ ಪತ್ರಿಕೆಯಲ್ಲಿ ಪ್ರಕಟವಾದ ದ್ವಿರುಕ್ತಿ ಋಗ್ವೇದೋಕ್ತ ಆರ್ಯ ನಿವಾಸದ ಭೌಗೋಳಿಕ ವಿವರಣೆ, ಯಜ್ಞೋಪವಿತ ಧಾರಣೆಗೆ ವೇದಶಾಸ್ತ್ರದ ಆಧಾರಗಳು, ಮಧ್ವಾಚಾರ್ಯರ ಕಾಲದ

ಧಾರ್ಮಿಕ ಪರಿಸ್ಥಿತಿ ಮುಂತಾದ ಸಂಶೋಧನಾತ್ಮಕ ಲೇಖನಗಳು ಇಂದಿಗೂ ಉಪಯುಕ್ತವಾಗಿವೆ. ಆದರೆ ಇಂತಹ ವಿದ್ವತ್ಪೂರ್ಣವಾದ ಪತ್ರಿಕೆಯನ್ನು ನಡೆಸುವುದು ಬಹಳ ಕಷ್ಟಕರವಾದ ಕೆಲಸವಾಗಿತ್ತು. ಆರ್ಥಿಕ ಮುಗ್ಗಟ್ಟಿನಿಂದ ಪತ್ರಿಕೆ ನಿಲ್ಲಬೇಕಾಗಿ ಬಂದಾಗ 'ಬ್ರಾಹ್ಮಣ'ದ ಕೊನೆಯ ಸಂಚಿಕೆಯಲ್ಲಿನ 'ಮಂತವ್ಯ'ದಲ್ಲಿ ಒಂದು ವರ್ಷ ಕಾಲ ಪತ್ರಿಕೆ ಎದುರಿಸಿದ ದಾರುಣ ಪರಿಸ್ಥಿತಿಯ ಚಿತ್ರಣವನ್ನು ನೀಡಿದ್ದರು.

1930 ರಲ್ಲಿ ಇವರು ಪ್ರಕಟಿಸಿದ 'ಗುಂಪಿನ ಗುಟ್ಟು' ಎಂಬ ಕೃತಿ ಕನ್ನಡ ನಾಡಿನ ನುಡಿಯ ಬಗ್ಗೆ ಇವರಿಗಿದ್ದ ಉತ್ಕಟ ಪ್ರೇಮ ಮತ್ತು ಭಾಷೆ ಬಗ್ಗೆ ಇದ್ದ ಆಳವಾದ ಜ್ಞಾನದ ಪ್ರತೀಕವಾಗಿದೆ. ಕನ್ನಡನಾಡಿನ ಜಾತಿ ಪಂಗಡಗಳ ಮೂಲವನ್ನು ಹುಡುಕುವ ಪ್ರಯತ್ನವಾದ ಈ ಕೃತಿಯಲ್ಲಿ ಕನ್ನಡ ಶಬ್ದಗಳನ್ನು ಮಾತ್ರ ಬಳಸಲಾಗಿದೆ. ಹಾಗೆಯೇ 'ಬಡಗನಾಡು ಬ್ರಾಹ್ಮಣರ ಇತಿಹಾಸ' 'ವೀರಶೈವ ಮತಾಚಾರ್ಯರ ಕಾಲನಿರ್ಣಯ' ಈ ಕೃತಿಗಳು ಇಂದಿಗೂ ಸಂಶೋಧಕರಿಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಇವಿಷ್ಟಲ್ಲದೆ ಶ್ರೀಕಂಠಯ್ಯನವರು ಕನ್ನಡ ನಾಡಿಗೆ ನೀಡಿರುವ ಎರಡು ಅತ್ಯಮೂಲ್ಯ ಕೃತಿಗಳೆಂದರೆ 'ಕೆಂಪೇಗೌಡ ಜಯಪ್ರಶಸ್ತಿ' ಮತ್ತು' ಸಿರಿ ಭೂ ವಲಯ'

ಮೈಸೂರು ಮುತ್ತು ಮದ್ರಾಸಿನ ಪ್ರಾಚ್ಯ ವಿದ್ಯಾ ಸಂಶೋಧನಾ ವಲಯಗಳಲ್ಲಿ ಕೆಂಪೇಗೌಡರ ಬಗ್ಗೆ ಇದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಮೂಲ ಕೃತಿಯೊಂದಿಗೆ ತಮ್ಮ ವಿಶ್ಲೇಷಣೆ, ಭಾವಾರ್ಥಗಳ ಸಹಿತ ಗ್ರಂಥರೂಪದಲ್ಲಿ ಶ್ರೀಕಂಠಯ್ಯನವರು ರಚಿಸಿರುವ ಈ ಕೃತಿ ಬೆಂಗಳೂರು ಇತಿಹಾಸದ ಅಧ್ಯಯನಶೀಲರಿಗಂತೂ ಒಂದು ಮುಖ್ಯ ಕೈಪಿಡಿಯಾಗಿದೆ. ಮೂಲ ವಿಷಯಕ್ಕಿಂತ ಮುನ್ನುಡಿಯೇ ಬಹಳ ದೀರ್ಘವಾಗಿರುವ ಒಂದು ಅಪರೂಪದ ಕೃತಿ ಕೆಂಪೇಗೌಡ ಜಯಪ್ರಶಸ್ತಿ. ಈ ಕೃತಿಯಲ್ಲಿ 48 ಪದ್ಯಗಳು ಹತ್ತೊಂಬತ್ತು ಪುಟಗಳಲ್ಲಿ ಇದ್ದರೆ ಮುನ್ನುಡಿ 80 ಪುಟಗಳಷ್ಟಿವೆ. ಆದರೆ ಇವೆಲ್ಲವೂ ಶಾಸನ ಆಧಾರಗಳ ಸಹಿತ ಕೆಂಪೇಗೌಡನ ಇತಿಹಾಸದ ಹಿನ್ನೆಲೆಯನ್ನು ಓದುಗರಿಗೆ ಒದಗಿಸುತ್ತವೆ.

ಕೆಂಪೇಗೌಡನ ಜಯ ಪ್ರಶಸ್ತಿ ಒಂದು ಅಮೂಲ್ಯ ಕೃತಿಯಾದರೆ ಇವರು ಸಂಪಾದಿಸಿ ಪ್ರಚಾರ ಮಾಡಿದ ಮತ್ತೊಂದು ಅಮೋಘ ಕೃತಿ 'ಸಿರಿ ಭೂವಲಯ' . 12 ಶತಮಾನಗಳ ಹಿಂದೆಯೇ ಕುಮುದೆಂದು ಮುನಿ ಎಂಬ ವಿದ್ವಾಂಸರಿಂದ ರಚಿಸಲ್ಪಟ್ಟಿರುವ ಸಿರಿ ಭೂವಲಯ ವಿಸ್ಮಯಗಳ ಹಾಗೂ ಸಾಧ್ಯತೆಗಳ ಒಂದು ಗಣಿ. ಈ ಒಂದೇ ಗ್ರಂಥದಲ್ಲಿ718 ಭಾಷೆಗಳ ಕೃತಿಗಳನ್ನು ಹೆಣೆಯಲಾಗಿದೆ ಎನ್ನುವುದು ಒಂದು ಅದ್ಭುತ. ಇವೆಲ್ಲವನ್ನು ಚಕ್ರಬಂಧ ಸಂಖ್ಯಾ ಲಿಪಿಯಲ್ಲಿ ಅಳವಡಿಸಲಾಗಿದೆ. 64 ಸಂಖ್ಯೆಗಳಲ್ಲಿ ಇವೆಲ್ಲವನ್ನು ಸಾಧಿಸಲಾಗಿದೆ. ಹೀಗಾಗಿ ಈ ಗ್ರಂಥವು ಎಷ್ಟು ಕುತೂಹಲಕಾರಿ ಯೋ ಅಷ್ಟೇ ವಿಸ್ಮಯ ದಿಂದಲೂ ಕೂಡಿದೆ.

1953 ರಲ್ಲಿ ಶ್ರೀಕಂಠಯ್ಯನವರು ಈ ಅಪರೂಪದ ಗ್ರಂಥವನ್ನು ಸಂಪಾದಿಸಿ ಪ್ರಥಮವಾಗಿ ಬೆಳಕಿಗೆ ತಂದರು. ತಮ್ಮ ದೀರ್ಘ ಮುನ್ನುಡಿಯಲ್ಲಿ ಈ ಗ್ರಂಥ ಬಂದ ಬಗೆ ಹಾಗೂ ಗ್ರಂಥದ ಪರಿಚಯವನ್ನು ನೀಡಿದ್ದಾರೆ. ಮಲ್ಲಿಕಬ್ಬೆ ಎಂಬ ದಾನಚಿಂತಾಮಣಿಯು ಕುಮುದೆಂದು ಮುನಿಯ ಈ ಗ್ರಂಥವನ್ನು ಪ್ರತಿಲಿಪಿ ಮಾಡಿಸಿದ ಪ್ರತಿಯು ದೊಡ್ಡಬೆಲೆ ಗ್ರಾಮದ ಪ್ರಸಿದ್ಧ ಜೈನ ವಿದ್ವಾಂಸ ಧರಣೇಂದ್ರ ಪಂಡಿತ ಎಂಬುವರ ಬಳಿಯಿತ್ತು. ಅವರು ಈ ಗ್ರಂಥದ ವಿಷಯಗಳನ್ನು ಜನರಿಗೆ ತಿಳಿಸುತ್ತಿದ್ದರು. ಅದರ ಸಲುವಾಗಿ ಒಂದು ಪ್ರಯೋಗ ಶಾಲೆಯನ್ನು ನಡೆಸಿದರು.

ಆದರೆ ಧರಣೇಂದ್ರ ಪಂಡಿತರು ಸ್ವರ್ಗಸ್ಥರಾದ ಮೇಲೆ ಸಿರಿ ಭೂವಲಯ ಹಿಂದಕ್ಕೆ ಸರಿದಿತ್ತು. ಈ ಗ್ರಂಥಕ್ಕೆ ಮಾರು ಹೋಗಿದ್ದ ಸರ್ವಾರ್ಥ ಸಿದ್ಧಿ ಸಂಘದ ಪಂಡಿತ ಎಲ್ಲಪ್ಪ ಶಾಸ್ತ್ರಿಗಳು ಆ ಪಂಡಿತರ ಮನೆತನದ ಸಂಬಂಧವನ್ನು ಬೆಳೆಸಿ ನಂತರ ಈ ಗ್ರಂಥವನ್ನು ಪಡೆದುಕೊಂಡರು. 1935 ರ ವೇಳೆಗೆ ಶ್ರೀಕಂಠಯ್ಯನವರಿಗೆ ಶಾಸ್ತ್ರಿಗಳ ಪರಿಚಯವಾಯಿತು. ಇದರೊಂದಿಗೆ ಈ ಗ್ರಂಥದ ನಿರಂತರ ಅಧ್ಯಯನ, ಅದರ ಅಂಕಾಕ್ಷರ, 'ಸರ್ವಭಾಷಾಮಯೀ' ಸ್ವರೂಪವನ್ನು ಗುರುತಿಸಿ ಪರಿಚಯಿಸುವ ಕೆಲಸ ಅನಂತರದ ಕಾಲದಲ್ಲಿ ನಡೆಯಿತು. ಇವರ ಅವಿರತ ಪರಿಶ್ರಮದ ಫಲವಾಗಿ ಸಿರಿಭೂವಲಯದ ಮೊದಲ ಭಾಗ 1953 ರ ಮಾರ್ಚ್ 22 ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿಡುಗಡೆಯಾಯಿತು.

1955 ರಲ್ಲಿ ಇದರ ದ್ವಿತೀಯ ಭಾಗ ಪ್ರಕಟವಾಯಿತು . ಈ ಕೃತಿಯ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿ ಹೇಳುವ ಉದ್ದೇಶದಿಂದ ಶ್ರೀಕಂಠಯ್ಯನವರು ಹಲವಾರು ಕಡೆಗಳಲ್ಲಿ ಭಾಷಣ ಮಾಡಿದರು. ಪ್ರಸಿದ್ಧ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ನಾಡಿನ ಪ್ರಸಿದ್ಧ ಚಿಂತಕರು, ವಿದ್ವಾಂಸರು ಹಾಗೂ ಸಾಹಿತಿಗಳೊಂದಿಗೆ ಈ ಬಗ್ಗೆ ವಿಮರ್ಶೆ ನಡೆಸಿದರು. ಇವೆಲ್ಲದರಿಂದಾಗಿ ಇವರು 'ಸಿರಿಭೂವಲಯ ಶ್ರೀಕಂಠಯ್ಯ' ಎಂದೇ ಪ್ರಸಿದ್ಧರಾದರು. ಈ ಪವಿತ್ರ ಕಾರ್ಯದಲ್ಲಿ ಕೈ ಜೋಡಿಸಿದ ಮತ್ತೊಬ್ಬ ಮಹನೀಯರೆಂದರೆ ಕನ್ನಡ ಬೆರಳಚ್ಚು ಪಿತಾಮಹ ಎಂದು ಪ್ರಸಿದ್ಧರಾಗಿದ್ದ ಕೆ. ಅನಂತ ಸುಬ್ಬರಾಯರು.

ಸಿರಿ ಭೂ ವಲಯ ಕುರಿತು ಸಂಪೂರ್ಣ ವಿವರವನ್ನು ಕರ್ಲಮಂಗಲಂ ಶ್ರೀಕಂಠಯ್ಯ ಅವರಿಂದ ಕೊಲ್ಕತ್ತಾದ ಆಗರ್ಭ ಶ್ರೀಮಂತ ಶಾಂತಿಪ್ರಸಾದ್ ಜೈನ್ ಪಡೆದರು. ಈ ಅಗಾಧವಾದ ಜ್ಞಾನ ನಿಧಿಯನ್ನು ಸೂಕ್ತ ರೀತಿಯಲ್ಲಿ ಗೌರವಿಸುವ ಸಲುವಾಗಿ 'ನಾನು ನಿಮಗೆ ಹೇಗೆ ನೆರವಾಗಲಿ' ಎಂದು ವಿನಂತಿ ಮಾಡಿಕೊಂಡರು. ಶ್ರೀಕಂಠಯ್ಯನವರು ಈ ಗ್ರಂಥ ಸಂಶೋಧನೆಯ ಖರ್ಚು ಎಂದು ಕೋಟಿ ರೂಪಾಯಿ ಕೇಳಿದರೂ ಜೈನ್ ಕೊಡಲು ಸಿದ್ಧರಿದ್ದರು. ಆದರೆ ನಿರಪೇಕ್ಷ ಭಾವದಿಂದ ಶ್ರೀಕಂಠಯ್ಯನವರು ನನಗೇನು ಬೇಡ ಎಂದು ವಿನಯಪೂರ್ವಕವಾಗಿ ಸೂಚಿಸಿದರು.

ಇದು ಜೈನ್ ಅವರಿಗೆ ಶ್ರೀಕಂಠಯ್ಯನವರ ಬಗ್ಗೆ ಇದ್ದ ಗೌರವವನ್ನು ಮತ್ತಷ್ಟು ಹೆಚ್ಚು ಮಾಡಿತು. ಆಗ ಅವರು ಇಂತಹ ಜ್ಞಾನಿಗಳನ್ನು ಮುಂದೆಯೂ ಗೌರವಿಸುವ ಸಲುವಾಗಿ ತಮ್ಮ ಶ್ರೀಮಂತಿಕೆಯನ್ನು ದೇಣಿಗೆಯಾಗಿ ನೀಡಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕಾರದ ಪ್ರಾರಂಭಕ್ಕೆ ಕಾರಣರಾದರು. ಹೀಗೆ ಒಬ್ಬ ಕನ್ನಡಿಗ ಮತ್ತು ಒಬ್ಬ ಬ್ರಾಹ್ಮಣ ಇಂತ ಶ್ರೇಷ್ಠ ಪ್ರಶಸ್ತಿ ಪ್ರಾರಂಭಕ್ಕೆ ಕಾರಣನಾದ ಅನ್ನೋದು ನಮಗೆಲ್ಲರಿಗೂ ಅತ್ಯಂತ ಹೆಮ್ಮೆಯ ಸಂಗತಿ.

ಸಾಹಿತ್ಯ, ಸಂಶೋಧನೆ, ಸ್ವಾತಂತ್ರ್ಯ ಹೋರಾಟ, ಕನ್ನಡ ಸೇವೆ ಹೀಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಿದ ಶ್ರೀಕಂಠಯ್ಯನವರನ್ನು ಸಮಾಜ ಗುರುತಿಸಿರುವ ಪ್ರಮಾಣ ಕಡಿಮೆಯೇ.

ಮನಹಳ್ಳಿ ರಘುನಾಥ ಆಚಾರ್ಯರು ತಮ್ಮ ಸರ್ವಜ್ಞ ಸಂದೇಶ ನಿಮ್ಮ ಮಾಸಪತ್ರಿಕೆಯಲ್ಲಿ ಶ್ರೀಕಂಠಯ್ಯನವರನ್ನು 'ಪ್ರಾಚ್ಯ ವಿದ್ಯಾ ಸಂಶೋಧಕ ವಿದ್ವಾಂಸ' ಎಂದು ಕರೆದಿದ್ದಾರೆ. ಅಖಿಲ ಭಾರತೀಯ ಧರ್ಮಪೀಠ ಅಸೋಸಿಯೇಷನ್ ನ ಅಧ್ಯಕ್ಷ ಶ್ರೀ ಪುರಿ ಜಗದ್ಗುರು ಗೋವರ್ಧನ ಮಠದ ಯೋಗೇಶ್ವರ ಆನಂದ ತೀರ್ಥ ಮಹಾರಾಜರು ಅವರ ಪ್ರತಿಭೆಯನ್ನು ಗುರುತಿಸಿ 'ಸರಸ್ವತಿ ಕಂಠಾಭರಣ' ಎಂಬ ಬಿರುದನ್ನು ಇತ್ತು ಹರಿಸಿದ್ದಾರೆ. ಕೊಲ್ಕತ್ತಾ ದ ವಿಧಾನಪರಿಷತ್ತಿನ ಸಭಾಪತಿ ಹಾಗೂ ಸುಪ್ರಸಿದ್ಧ ವಿದ್ವಾಂಸ ಸುನೀತಿ ಕುಮಾರ್ ಚಟರ್ಜಿ ಅವರು ತಮ್ಮ ಒಂದು ಪತ್ರದಲ್ಲಿ ಶ್ರೀಕಂಠಯ್ಯನವರ ಉನ್ನತ ವಿದ್ವತ್ತನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

ಇವರ ಶ್ರೇಷ್ಠ ಮಟ್ಟದ ಚಿಂತನೆ ಮತ್ತು ಕಾರ್ಯಗಳನ್ನು ಜನಸಾಮಾನ್ಯರಿಗೆ ತಿಳಿಸುವ ಸಲುವಾಗಿ ದಕ್ಷಿಣ ಕನ್ನಡದ ಪುತ್ತೂರಿನ ಕನ್ನಡ ಸಂಘವು 1993 ರಲ್ಲಿ ಡಾಕ್ಟರ್ ಎಚ್ ಜಿ ಶ್ರೀಧರ್ ಅವರ 'ಕರ್ಲಮಂಗಲಂ ಶ್ರೀಕಂಠಯ್ಯನವರ ಲೇಖನಗಳು' ಎಂಬ ಪುಸ್ತಕವನ್ನು ಹೊರ ತಂದಿದೆ

ಹೀಗೆ ಬಹುಮುಖ ಪ್ರತಿಭೆಯ ಕನ್ನಡದ ಕಣ್ಮಣಿ ಕರ್ಲಮಂಗಲಂ ಶ್ರೀಕಂಠಯ್ಯನವರು 1965ರ ಮಾರ್ಚ್ 11 ರಂದು ದೈವಾಧೀನರಾದರು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**
**ಬನಶಂಕರಿ 2ನೆ ಹಂತ, ಬೆಂಗಳೂರು-70.**
**ದೂರವಾಣಿ : 080-26770066/26771695**
**ಸಮಯ : ಸಂಜೆ 5.00 ರಿಂದ 7.00 ರವರೆಗೆ**
**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=


**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**
**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**
**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ಜತೀಂದ್ರನಾಥ ಮುಖರ್ಜಿ

– ಛಾಯಾಪತಿ ಕೆ.ಎನ್.
(ಮಹಾಸಭಾ ಉಪಾಧ್ಯಕ್ಷರು)




ತನ್ನ ಗಂಡನೇನೋ ಒಳ್ಳೆಯವನು. ಆದರೆ ನನ್ನ ಕೈಗೆ ಸಿಗುವುದೇ ಕಷ್ಟ. ಹಗಲು ರಾತ್ರಿ ಎಂಬ ಬೇದ ಭಾವ ಇಲ್ಲದೆ ಯಾವಾಗಲೂ ಪ್ರವಾಸ ದಲ್ಲಿಯೇ ಇರುತ್ತಾರೆ. ಎಲ್ಲಿಗೆ ಹೋಗುತ್ತಾರೆ ಯಾವಾಗ ಬರುತ್ತಾರೆ ಎಂದು ತಿಳಿಯುವುದೇ ಇಲ್ಲ. ಎಲ್ಲಾ ಹೆಂಡತಿಯರಂತೆ ನನಗೂ ತನ್ನ ಗಂಡನ ಜೊತೆ ಚಕ್ಕಂದ ಮಾಡಬೇಕು, ದೇವ ಸ್ಥಾನಕ್ಕೆ ಹೋಗಬೇಕು, ದಿನವೆಲ್ಲ ಅವರೊಡನೆ ಕಾಲಕಳೆಯಬೇಕು, ಮುದ್ದಾದ ಮಕ್ಕಳಾಗ ಬೇಕು ಎಂಬ ಎಷ್ಟೋ ಬೆಟ್ಟದಷ್ಟು ಆಸೆಗಳು. ಆದರೆ ಅವು ಈ ಜನುಮದಲ್ಲಿ ಕನಸಿನ ಗೋಪುರಗಳು.ಈ ಜನ್ಮದಲ್ಲಿ ಅವು ನನಸಾಗುವ ಹಾಗಿಲ್ಲ.ಈ ಎಲ್ಲಾ ಅನಿಸಿಕೆಗಳು ಇಂದಿನ ಲೇಖನದ ಕಥಾನಾಯಕ ಜಿತೇಂದ್ರ ನಾಥ ಮುಖರ್ಜಿಯ ಪತ್ನಿ ಇಂದು ಬಾಲಾಳದ್ದು. ಒಮ್ಮೊಮ್ಮೆ ಕೈ ಹಿಡಿದ ಪತ್ನಿಯ ಕಾಲ್ಗುಣವೇನೋ ಗಂಡ ಪ್ರಸಿದ್ಧನಾಗುತ್ತಾನೆ, ಸಮಾಜಕ್ಕೆ ಉಪಕಾರಿಯಾಗುತ್ತಾನೆ, ಕ್ರಾಂತಿಕಾರಿ ಆಗುತ್ತಾನೆ.

ಆದರೆ ಆ ಪತ್ನಿಯಾದವಳು ತನ್ನ ಮನೆ ತನ್ನ ಮಕ್ಕಳು ಅವರ ಭವಿಷ್ಯ ಈ ಚಿಂತನೆಯಲ್ಲಿದ್ದರೆ ಪತಿ ಸಮಾಜದ ಭವಿಷ್ಯಕ್ಕೋಸ್ಕರ, ಒಳಿತಿ ಗೋಸ್ಕರ ನಾನು ಏನಾದರೂ ಮಾಡಬೇಕೆಂಬ ಮಹದಾಸೆ ಯಿರುತ್ತದೆ. ಹಾಗಾಗಿ ಮನೆ ಮಡದಿ ಮಕ್ಕಳು ಇದಾವ ಪರಿವಿಲ್ಲದೆ ತನ್ನನ್ನು ಸಮಾಜ ಕಾರ್ಯಕ್ಕೆ ತೊಡಗಿಸಿಕೊಳ್ಳುತ್ತಾನೆ. ಹೀಗೆ ಸ್ವಂತ ಸುಖಕ್ಕೆ ಬೆಂಕಿ ಹಚ್ಚಿಕೊಂಡು ಸಮಾಜದ ಹಿತಕ್ಕೆ ಹುಚ್ಚು ಹಿಡಿದವರಂತೆ ದುಡಿದ ವೀರ ಸಾವರ್ಕರ್, ತಿಲಕರು, ಗೋಖಲೆ, ಗಾಂಧೀಜಿ ಹೀಗೆ ಅನೇಕರಿದ್ದಾರೆ. ಆ ಗುಂಪಿಗೆ ಸೇರಿದವರೇ ಜತೀಂದ್ರನಾಥ ಮುಖರ್ಜಿ. ಬಾಳಿದ್ದೇ ಸ್ವಲ್ಪ ವರ್ಷವಾದರೂ ಕಾಡಿನ ಹೂವಿನಂತೆ ಬಾಡಿ ಮುದುಡಿ ಬಿಳುವಂತೆ ಬೀಳದೆ ತಾಯಿ ಭಾರತೀಯ ಪಾದದಡಿ ಬಿದ್ದ ಪುಷ್ಪ ಜತೀಂದ್ರ. ಕೇವಲ ಅಲ್ಪ ಆಯಸ್ಸಿನಲ್ಲೇ ಮಹಾ ಸಾಧನೆ ಮಾಡಿ ನೂರಾರು ವರ್ಷ ನೆನಪಿನಲ್ಲಿರುವ ಶಂಕರಾಚಾರ್ಯರು, ಶಿವಾಜಿಮಹಾರಾಜರು, ವಿವೇಕಾನಂದ ಮುಂತಾದವರ ಸಾಲಿನಲ್ಲಿ ನಿಲ್ಲುವ ವ್ಯಕ್ತಿಯೇ ಜತೀಂದ್ರನಾಥ ಮುಖರ್ಜಿ.

ಕೇವಲ 35 ವರ್ಷ ಬಾಳಿದ ಜಿತೇಂದ್ರ ತಾಯಿ ಭಾರತೀಯನ್ನು ಬ್ರಿಟಿಷರ ದಾಸ್ಯ ಸಂಕೋಲೆಯಿಂದ ಮುಕ್ತಗೊಳಿಸಲು ಹೋರಾಡುತ್ತ ತನ್ನ ಪ್ರಾಣವನ್ನು ಅರ್ಪಿಸಿದ ಮಹಾ ಕ್ರಾಂತಿಕಾರಿ ಯೋಧ. ಜತೀಂದ್ರ ಸಂಪ್ರದಾಯಸ್ಥ ಬ್ರಹ್ಮಣ ಜನಾಂಗದಲ್ಲಿ ಜನ್ಮತಾಳಿದ. ಜತೀಂದ್ರ ಕೇವಲ ತರಕಾರಿ ಪುಳಿಚಾರು ತಿಂದು ಕಟ್ಟುಮಸ್ತಾದ ದೇಹ. ಅದಕ್ಕೆ ತಕ್ಕನಾದ ವ್ಯಾಯಾಮ ಪ್ರಾಣಾ ಯಾಮ, ಯೋಗಗಳನ್ನು ಮಾಡಿ ಅದ್ಭುತ ದೇಹ ಶಕ್ತಿ ಹೊಂದಿದ್ದ ವ್ಯಕ್ತಿ. ಮಕ್ಕಳಿಗೆ ತಂದೆಗಿಂತ ತಾಯಿ ಕೊಡುವ ಶಿಕ್ಷಣ, ಆಚಾರ, ವಿಚಾರ, ಸಂಸ್ಕಾರವೇ ಮುಖ್ಯ. ಜೀಜಾಮಾತೆ ಶಿವಾಜಿಗೆ ಚಿಕ್ಕಂದಿನಿಂದಲೂ ರಾಮಾಯಣ ಮಹಾಭಾರತ ವೀರ ಪುರುಷರ ಕಥೆಗಳನ್ನು ಹೇಳಿದ್ದರಿಂದ ಹಿಂದವೀಸ್ವರಾಜ್ಯ ಸ್ಥಾಪಿಸಿದ.

ಹಾಗೆಯೇ ಜತೀಂದ್ರನ ತಾಯಿ ರಾಮಾಯಣ, ಮಹಾಭಾರತ ಅಲ್ಲದೇ ವಿವೇಕಾನಂದರು, ರವೀಂದ್ರನಾಥಠಾಗೂರ್, ಅರವಿಂದ ಘೋಷ್ ಮಂತಾದವರನ್ನು ಪರಿಚಯಿಸಿ ಸ್ಫೂರ್ತಿ ನೀಡುತ್ತಿದ್ದರು. ಆಕೆ ಕವಯತ್ರಿಯೂ ಹೌದು ಸಾಹಿತಿಯು ಆಗಿದ್ದರು. ಅವರ ಲೇಖನಿಯಿಂದ ದೇಶಭಕ್ತಿ ಗೀತೆಗಳು ಹೊರಹೊಮ್ಮುತ್ತಿದ್ದವು. ಆ ತಾಯಿಯ ರಕ್ತವೇ ಜತೀಂದ್ರನಲ್ಲಿಹರಿಯುತ್ತಿತ್ತು ಹಾಗಾಗಿ ಮಹಾ ದೇಶಭಕ್ತನಾಗಿ ಕ್ರಾಂತಿಕಾರಿ ಯಾಗಿ ಹೊರಹೊಮ್ಮುತ್ತಾನೆ. ಪುಟ್ಟ ಹುಡುಗನಾಗಿದ್ದಾಗ ಮನೆಯ ಮುಂದೆ ಸ್ನೇಹಿತರೊಂದಿಗೆ ಆಟವಾಡುತ್ತಿರುವಾಗ ಬಡಕಲು ಶರೀರದ, ಹಸಿವಿನಿಂದ ನರಳುತ್ತಿರುವ ಬಿಕ್ಷುಕನೊಬ್ಬ ಇವರ ಮನೆಯ ಮುಂದೆ ಭಿಕ್ಷೆ ಬೇಡುತ್ತಾನೆ. ಆಗ ಜತೀಂದ್ರ ಅವನಿಗೆ ಒಂದು ಕೋಲಿನಿಂದ ಬಾರಿಸುತ್ತಾ ಮುಂದೆ ಹೋಗು ಎನ್ನುತ್ತಾನೆ.ಅದನ್ನು ಕಂಡ ಅವನ ತಾಯಿ ಜತೀಂದ್ರನಿಂದ ಕೋಲು ಕಿತ್ತುಕೊಂಡು ಕೈ ಚಾಚು ಎಂದು ಹೇಳಿ ಎರಡು ಏಟು ಕೊಟ್ಟು ಮಠ–ಮಠ ಮಧ್ಯಾಹ್ನ ಒಂದು ತುತ್ತು ಅನ್ನ ಬೇಡಲು ಬಂದವನು. ಅವನು ಊಟ ಮಾಡಿ ಎಷ್ಟೋ ದಿನವಾಗಿರಬಹುದು ಈಗಲೇ ಸಾಯುವ ಸ್ಥಿತಿಯಲ್ಲಿದ್ದಾನೆ, ನಮಗೇನು ದೇವರು ಕಡಿಮೆ ಮಾಡಿದ್ದಾನೆ, ನಾವು ತಿನ್ನುವ ಅನ್ನದಲ್ಲಿ ಒಂದು ತುತ್ತು ಕೊಟ್ಟರೆ ನಮಗೆ ಏನು ಕಮ್ಮಿ ಆಗುವುದಿಲ್ಲ, ದೇವರು ಸಂತುಷ್ಠನಾಗು ತ್ತಾನೆ. ಈ ಭಿಕ್ಷುಕನೇ ದೇವರು. ನೀನು ಮಾಡಿದ ತಪ್ಪಿಗೆಕ್ಷಮೆ ಕೇಳು. ಎಂದು ಕ್ಷಮೆ ಕೇಳಿಸುತ್ತಾಳೆ. ತನಗಾಗಿ ತಾಯಿ ಬಡಿಸಿದ್ದ ಊಟವನ್ನು ತಂದು ಭಿಕ್ಷುಕನಿಗೆ ಕೊಡುತ್ತಾನೆ. ಇದಲ್ಲವೇ ತಾಯಿತನ. ಮಕ್ಕಳನ್ನು ಕೇವಲ ಬದುಕುವಂತೆ ಮಾಡದೆ ಬಾಳುವಂತೆ ಮಾಡಬೇಕು ಇದೇ ತಾಯಿ ತಂದೆಯ ಕರ್ತವ್ಯ. ಮಹಾರಾಷ್ಟ್ರದಂತೆ ಬಂಗಾಳವು ದೇಶಭಕ್ತರ, ಕ್ರಾಂತಿಕಾರಿಗಳ ತವರೂರು. ಭಾರತಾಂಬೆಯ ಹೆಚ್ಚಿನ ಸುಪುತ್ರರು ಜನಿಸಿದ್ದು ಈ ಪ್ರಾಂತಗಳಲ್ಲೆ.

ಪೂರ್ವ ಬಂಗಾಳದ ನಾದಿಯ ಜಿಲ್ಲೆಯ ಕೋಯ ಗ್ರಾಮ ಒಂದು ಪುಟ್ಟ ಸುಂದರ ಹಳ್ಳಿ, ಪ್ರಕೃತಿ ಸೌಂದರ್ಯದ ಜೊತೆಗೆ ಹಳ್ಳಿಯ ಪಕ್ಕದಲ್ಲಿ ಹರಿಯುತ್ತಿದ್ದ ಗರುಯಿನದಿ. ಆ ಹಳ್ಳಿಯ ಜೀವನದಿ. 1879 ಡಿಸೆಂಬರ್ 10ರಲ್ಲಿ ಈ ಗ್ರಾಮದಲ್ಲಿ ಜತೀನ್ ಜನಿಸಿದ. ಇದು ತಾಯಿ

ಶರತ್ ಶಶಿ ದೇವಿಯ ತವರೂರು. ಶರತ್ ಶಶಿದೇವಿ ಮದುವೆಯಾಗಿದ್ದು ಜಸ್ಸೂರ್ ಜಿಲ್ಲೆಯ ರಿಶಬತಿ ತಾಲೂಕಿನ ಜಿನ್ನೈದಾ ಗ್ರಾಮದ ಘನ ವಿದ್ವಾಂಸ ಉಮೇಶ ಚಂದ್ರ ಮುಖ್ಯೋಪಾಧ್ಯಾಯರನ್ನು.ಜತೀಂದ್ರನಾಥ ಚಿಕ್ಕ ವಯಸ್ಸಿನಲ್ಲಿಯೇ ಇದ್ದಾಗ ಇವರ ತಂದೆ ಸನ್ಯಾಸಿಯಾಗಿಬಿಟ್ಟರು. ತಾಯಿಕೂಡ ತೀರಿ ಕೊಂಡರು.ಜಿನ್ನೈದಾ ಗ್ರಾಮದಿಂದ ಉಮೇಶ್ ಚಂದ್ರರು ಕಾಲು ನಡೆಗೆಯಲ್ಲಿ ವಾರಣಾಸಿಗೆ ಬಂದು ಪಾಠಶಾಲೆಗೆ ಸೇರಿ ದೊಡ್ಡ ವಿದ್ವಾಂಸರಾಗುತ್ತಾರೆ.ಮಗ ಜತೀಂದ್ರ ಮೇರು ವ್ಯಕ್ತಿತ್ವದ ವಿದ್ವಾಂಸನಾಗಬೇಕೆಂದು ತಂದೆಯ ಆಸೆ, ಆದರೆ ವಿಧಿ ಬರಹದಂತೆ ತಂದೆ ಉಮೇಶ ಚಂದ್ರರು ಜತೀನನಿಗೆ ನಾಲ್ಕು ವರ್ಷವಿದ್ದಾಗಲೇ ಕಾಲವಾದರು. ಪಿತೃ ವಾತ್ಸಲ್ಯ ವಂಚಿತರಾದರು. ಏಳು ವರ್ಷದ ಅಕ್ಕ ವಿನೋದ್ ಬಾಲ ಮತ್ತು ಜತೀಂದ್ರನಿಗೆ ತಾಯಿಯೇ ಸರ್ವಸ್ವವಾದಳು.

ಜತೀನನಿಗೆ 5 ವರ್ಷವಿದ್ದಾಗಲೇ ವಸಂತ ಪಂಚಮಿಯ ದಿನದಂದು ಶಾಲಾಮಾಸ್ತರನ್ನು ಕರೆಯಿಸಿ, ಅವರಿಂದ ಮಗನ ಕೈಯಲ್ಲಿ ಗುರು ಬ್ರಹ್ಮ ಗುರು ವಿಷ್ಣು ಶ್ಲೋಕ ಹೇಳಿಸಿ,ತಟ್ಟೆಯಲ್ಲಿ ಇಟ್ಟಿದ್ದ ಅಕ್ಕಿಯಕಾಳಿನ ಮೇಲೆ ಓಂಕಾರ ಬರೆಸಿ ಅಕ್ಷರಭ್ಯಾಸ ಮಾಡಿಸಿದರು.ಜತಿನನ ಪ್ರಾಥಮಿಕ ಶಿಕ್ಷಣ ಕೋಯ ಗ್ರಾಮದಲ್ಲಿಯೇ ಆಯಿತು. ಅವನ ಶಾಲೆಯಲ್ಲಿ ಒಬ್ಬ ಗಟ್ಟಿಮುಟ್ಟಾದ ತುಂಟು ಹುಡುಗನಿದ್ದ.ಆ ಹುಡುಗ ಬೇರೆ ಮಕ್ಕಳ ಮೇಲೆ ದೌರ್ಜನ್ಯ ನಡೆಸುತ್ತಿದ್ದ.ಅವನ ಹೆಸರು ದೇವು .ಅವನ ಹತ್ತಿರ ಒಂದು ನಾಯಿ ಇತ್ತು. ದೇವು ನಾಯಿಯನ್ನು ಹುಡುಗರ ಮೇಲೆ ಛೂ ಬಿಡುತ್ತಿದ್ದ. ಹುಡುಗರೆಲ್ಲ ಹೆದರಿ ಚಲ್ಲಾ ಪಿಲ್ಲಿಯಾಗುತ್ತಿದ್ದರು. ಒಮ್ಮೆ ಜತೀನನಮೇಲು ಬಿಟ್ಟ, ಅವನೂ ಹೆದರಿ ಓಡುತ್ತಾ ಅಳುತ್ತಾ ಮನೆಗೆ ಬಂದ. ಹಿಂದೆಯೇ ನಾಯಿ ಅಟ್ಟಿಸಿ ಕೊಂಡು ಬಂದಿತ್ತು.ಇದನೋಡಿದ ತಾಯಿ ಒಳಗಡೆ ಹೋಗಿ ಒಂದು ಕೋಲು ತಂದು ಜತೀನನಿಗೆ ಕೊಟ್ಟುಹೆದರಬೇಡ ಈ ಕೋಲಿ ನಿಂದ ನಾಯಿಗೆ ಥಳಿಸು ಎಂದು ಹುರಿ ದುಂಬಿಸಿದಳು. ಹೂ ಕೋಲು ಬೀಸುತ್ತಾ ಹೋಗು ಹೊಡೆದಟ್ಟು ಎಂದು ಧೈರ್ಯ ತುಂಬಿದಳು. ಕೋಲು ಕಂಡ ನಾಯಿ ಬಾಲ ಮುದುರಿಕೊಂಡು ಓಡಿತು.ಅಂದಿನಿಂದ ಜತೀನನಿಗೆ ಹೆದರಿಕೆ ಮಾಯವಾಗಿ ಬ್ರಿಟಿಷರ ಎದೆ ನಡುಗಿಸುವಷ್ಟು ಧೈರ್ಯ ತುಂಬಿತು.ಹೀಗೆ ಆ ತಾಯಿಂದ ಇಂಥಹ ಧೈರ್ಯ ತುಂಬಿದ ಅನೇಕ ಘಟನೆಗಳು ನಡೆದಿವೆ. ಈ ತಾಯಿ ಜತೀನನಿಗೆ ತುಂಬಾ ವರ್ಷ ತಾಯಿಯಾಗಿರ ಲಿಲ್ಲ.

ಅವರು ಸಹ ತೀರಿಕೊಂಡರು. ಈಗ ಜತಿನ್ ಮತ್ತುಅವರ ಅಕ್ಕ ವಿನೋದಬಾಲ ಇಬ್ಬರೂ ಸೋದರ ಮಾವನ ಮನೆಯಲ್ಲಿ ಆಶ್ರಯ ಪಡೆದರು.ಪ್ರಾಥಮಿಕ ವಿದ್ಯಾಭ್ಯಾಸ ಕೋಯಾ ಗ್ರಾಮದಲ್ಲಾಯಿತು ಮುಂದಿನ ವಿದ್ಯಾಭ್ಯಾಸ ಕೃಷ್ಣನಗರದ ವೆರ್ನಾಕ್ಯೂಲರ್ ಮತ್ತು ಎ.ವಿ.ಸ್ಕೂಲಿನಲ್ಲಿ ಮುಗಿಸಿದರು. ಜತೀನನಿಗೆ 1900ರಲ್ಲಿ ಇಂದುಬಾಲ ಎಂಬ ಕನ್ಯೆಯೊಂದಿಗೆ ವಿವಾಹವಾಯಿತು. ಹರಿದ್ವಾರಕ್ಕೆ ತೀರ್ಥಯಾತ್ರೆಗೆ ತೆರಳಿದರು.ಅಲ್ಲಿ ಜತೀನರು ಬೋಲೋನಂದಗಿರಿ ಅವರಿಂದ ದೀಕ್ಷೆ ಪಡೆದರು.1906ರಲ್ಲಿ ಕೋಯಾ ಗ್ರಾಮಕ್ಕೆ ಬಂದು ನೆಲೆಸಿದರು.ಅಲ್ಲಿ ಸಮಾಚಾರವೊಂದು ಅವರ ಗಮನಕ್ಕೆ ಬಂತು. ಅವರ ಊರಿನ ಪಕ್ಕದ ಕಾಡಿನಲ್ಲಿ ಹುಲಿಯೊಂದು ಸೇರಿಕೊಂಡು ಭಾರಿ ಉಪದ್ರವಕೊಡುತ್ತಿತ್ತು.

ಗ್ರಾಮದ ಜನ ರೆಲ್ಲ ಹೆದರಿ ಹೋಗಿದ್ದರು.ಕೂಡಲೇ ಜತಿನ್ ಸೊಂಟಕ್ಕೆ ಒಂದು ಚೂರಿ ಸಿಕ್ಕಿಸಿಕೊಂಡು ಹುಲಿ ಸಂಹಾರಕ್ಕೆ ಹೊರಟೆ ಬಿಟ್ಟನು. ನೀಳಕಾಯ, ವ್ಯಾಯಾಮದಿಂದಾದ ಕಟ್ಟುಮಸ್ತಾದ ಶರೀರ. ಹುಲಿಯೊಂದಿಗೆ ಸೆಣೆಸಾಡಿದ. ಬಹಳ ಹೊತ್ತಿನ ಸೆಣಸಾಟದ ನಂತರ ಜತೀನ್ ತನ್ನ ಚೂರಿ ಯಿಂದ ಹುಲಿಯನ್ನು ಕೊಂದೇ ಬಿಟ್ಟನು. ಆದರೆ ಜತೀನನಿಗೆ ಸಾಕಷ್ಟು ಮಾರಣಾಂತಿಕ ಗಾಯ ಗಳಾಗಿದ್ದವು.ಬಲಗಾಲನ್ನು ತೆಗೆಯಲೇ ಬೇಕಾದ ಪರಿಸ್ಥಿತಿ ಇತ್ತು.ಆದರೆ ಪ್ರಸಿದ್ಧ ವೈದ್ಯರಾದ ಸುರೇಶ ಪ್ರಸಾದ್ ಸರ್ವಾಧಿಕಾರಿ ಯವರು ಜತೀನನಿಗೆ ಶುಶ್ರೂಶೆ ಮಾಡಿ ಬದುಕಿಸಿದರು ಕೆಲ ಸಮಯನಂತರ ಬಂಗಾಳ ಸರ್ಕಾರ *ಭಾಗಜತೀನ್* (ಬಾಗ ಎಂದರೆ ಹುಲಿ)ಎಂದು ಬಿರುದಿತ್ತು ,ಸನ್ಮಾನಿಸಿತು.ಕ್ರಮೇಣ ಜತೀನ್ ಮತ್ತು ಸ್ನೇಹಿತರು ಸೇರಿ *ಅನುಶೀಲನಾ ಸಮಿತಿ*ಎಂಬ ಕ್ರಾಂತಿಕಾರಿಗಳ ಸಂಘಟನೆ ಪ್ರಾರಂಭಿಸಿದರು.ಬಂಗಾಳದ ಎಲ್ಲಾ ಜಿಲ್ಲೆಯಲ್ಲಿ ಶಾಖೆಗಳು ಪ್ರಾರಂಭ ವಾದವು.ಅನುಶೀಲನ ಸಮಿತಿಯ ಮುಖೇನ ಕ್ರಾಂತಿಕಾರಿಕ ಚಟುವಟಿಕೆಯು ಪ್ರಾರಂಭವಾಯಿತು.ಒಂದು ದಿನ ಕಲ್ಕತ್ತಾದ ಗೋರಾ ಬಜಾರಿನಲ್ಲಿ ಜತೀನ್ ಒಂದು ದೃಶ್ಯ ಕಂಡ. ಒಬ್ಬ ಮದೋನ್ಮತ್ತ ಆಂಗ್ಲನೊಬ್ಬ ರಸ್ತೆಯಲ್ಲಿ ಮನಬಂದಂತೆ ದೊಣ್ಣೆ ಬೀಸುತ್ತಾ ಹಿರಿಯರು ಕಿರಿಯರು ಸ್ತ್ರೀಯರು ಮಕ್ಕಳೆನ್ನದೆ ಏಟು ಹಾಕುತ್ತಿದ್ದ. ಆಂಗ್ಲರಿಗೆ ಭಾರ ತೀಯರೆಂದರೆ ಮೃಗಗಳು, ದಾಸರು, ಬಿಕ್ಷುಕರು ಎಂಬ ಭಾವನೆ. ಆದ್ದರಿಂದ ಪ್ರಾಣಿಗಳಿಗೆ ಹೊಡೆ ದಂತೆ ಹೊಡೆಯುತ್ತಿದ್ದ. ನಮ್ಮವರೂ ಸಹ ನೂರಾರು ವರ್ಷಗಳ ಗುಲಾಮಗಿರಿ ಅನುಭ ವಿಸಿ ಅನುಭವಿಸಿ ನಿರ್ವೀರ್ಯರಾಗಿ ಹೇಡಿಗಳಂತಿದ್ದರು. ಅವರ ಮಧ್ಯದಲ್ಲಿ ಸಿಂಹದ ಮರಿಯಂತಿದ್ದ ಭಾಗಜತಿನ್ ಅವನ ಹತ್ತಿರ ಹೋಗಿ ಅವನ ಕೈನ ದೊಣ್ಣೆಯನ್ನು ಕಿತ್ತು ಕೊಂಡು ಅವನು ನೆಲಕ್ಕುರುಳುವವರೆಗೂ ಬಡಿದ.

ಅಲ್ಲೇ ಹತ್ತಿರದಲ್ಲಿ ಗೋದೈ ಎಂಬ ಹೆಸರಿನ ನದಿಯು ಹರಿಯುತ್ತದೆ. ಅದರ ಸೇತುವೆಯು ರಕ್ತಪಾತದ ಸೇತುವೆ ಎಂದು ಹೆಸರಾಗಿತ್ತು. ಕಾರಣವಿಷ್ಟೇ ಪ್ರವಾಹದಿಂದ ಸೇತುವೆ ಕೊಚ್ಚಿಹೋಗುತ್ತಿತ್ತು ಆಗ ಭಾರತೀಯ ಕೆಲಸ ಗಾರರು ಸರಿಪಡಿಸಲು ಪ್ರಯತ್ನಿಸಿದರೆ ಅದು ಮತ್ತೆ ಮತ್ತೆ ಕೊಚ್ಚಿ ಹೋಗುತ್ತಿತ್ತು.ಇದರಿಂದ ಬ್ರಿಟಿಷ್ ಅಧಿಕಾರಿ ರೊಚ್ಚಿಗೆದ್ದು ಈ ಸಲ ನೀವು ಸರಿಯಾಗಿ ನಿರ್ಮಾಣ ಮಾಡದಿದ್ದರೆ ನಿಮ್ಮನ್ನು ಕೊಂದು ಹಾಕುತ್ತೇವೆ ಎಂದು ಹೆದರಿಸಿದರು. ಮತ್ತೆ ಪ್ರಯತ್ನಿಸಿದರು ಮತ್ತೆ ಆ ಸೇತುವೆ ಕೊಚ್ಚಿ ಹೋಯಿತು. ಆಗ ಬ್ರಿಟಿಷರು ಹೇಳಿದಂತೆ ಗೋಲಿಬಾರ್ ಮಾಡಿದರು ಆಗ 10 /12 ಜನ ಸತ್ತರು.

ಮಧ್ಯ ಪ್ರವೇಶಿಸಿದ ಜತಿನ್ ಇನ್ನೂ ಹೆಚ್ಚು ಮಾರಣ ಹೋಗುವುದನ್ನು ತಡೆದು ಜೊತೆಗೆ ಜನರನ್ನು ಎತ್ತಿಕಟ್ಟಿದ.ಶೂರ ಧೀರ, ಅಪ್ರತಿಮ ಸಾಹಸಿ,ಜತಿನ್ ಸಹವಾಸದಲ್ಲಿ ಹೇಡಿಯು ಪರಾಕ್ರಮಿಯಾಗುತ್ತಾನೆ ಎಂದು ಜನ ಮಾತನಾಡಿಕೊಂಡರು. ಅಸು ಬಿಶ್ವಾಸ್ ಎಂಬ ಭಾರತೀಯವಕೀಲನಿದ್ದ. ಅವನು ಕ್ರಾಂತಿಕಾರಿಗಳ ವಿರುದ್ಧ ನ್ಯಾಯಾ ಲಯದಲ್ಲಿ ವಾದ ಮಾಡಿ ಕಠಿಣ ಶಿಕ್ಷೆ ಕೊಡಿಸುವುದರಲ್ಲಿ ಸಮರ್ಥನಾಗಿದ್ದ.

ಮತ್ತು ಬ್ರಿಟಿಷ್ ಓಲೈಕೆ ಅವನ ಮುಖ್ಯ ಉದ್ದೇಶ ಅಂದಿನ ದಿನಗಳಲ್ಲಿ ದೇಶದ್ರೋಹ ಮಾಡು ವವರು ಅವರು ಭಾರತೀಯರಾಗಿದ್ದರೂ ಅವರನ್ನು ಕ್ರಾಂತಿಕಾರಿಗಳು ಮುಗಿಸುತ್ತಿದ್ದರು.ಆ ಪ್ರಕಾರ ಜತಿನ್ ಆ ವಕೀಲನನ್ನು ಮುಗಿಸಲು ನಿರ್ಧರಿಸಿದನು. ಪಾರ್ಶ್ವ ವಾಯು ಪೀಡಿತ

ಚಾರು ಎಂಬ ವ್ಯಕ್ತಿ ಜತಿನರ ಶಿಷ್ಯ. ಆತನು ಆ ವಕೀಲನನ್ನು ತೆಗೆಯುವ ಕೆಲಸ ನನಗೆ ಕೊಡಿ ಎಂದು ಕೇಳಿದ. ಮತ್ತು ಒತ್ತಾಯಿಸಿದ ಚಾರು ವಿನ ಬಲಗೈ ಪಾರ್ಶ್ವ ವಾಯು ಬಡಿದು ಸ್ವಾಧೀನದಲ್ಲಿರಲಿಲ್ಲ. ಆದರೂ ಅದೇ ಕೈಗೆ ಪಿಸ್ತೂಲು ಕಟ್ಟಿಸಿಕೊಂಡು ನ್ಯಾಯಾಲಯದಲ್ಲಿ ವಿಚಾರಣೆ ನಡೆ ಯುತ್ತಿತ್ತು ಜನ ಕಿಕ್ಕಿರಿದು ತುಂಬಿದ್ದರು. ಜನಗಳ ಮಧ್ಯೆ ಚಾರು ತನ್ನ ಎಡಗೈಯಿಂದ ಬಲಗೈಯ ಎತ್ತಿ ಗುಂಡು ಹಾರಿಸಿಯೇಬಿಟ್ಟ.ಆ ವಕೀಲ ನೆಲಕ್ಕುರುಳಿದ.ವಿಲವಿಲ ಒದ್ದಾಡಿ ಸತ್ತ. *ಮೊಂಗುಂ ಲಂಗಯತೆಗಿರಿಃ* ಭಗವಂತನ ಕೃಪೆ.

ಇದ್ದರೆ ಕುಂಟನೂ ಸಹ ಬೆಟ್ಟವನ್ನು ಏರಬಲ್ಲ. *ಭಾರತವೀಗ ಸಿಡಿಮದ್ದಿನ ಬೃಹತ್ ಗುಡಾಣ ವಾಗುವುದನ್ನು ನಾನು ಕಾಣ ಬಯಸುತ್ತೇನೆ ಮತ್ತು ಕೆಲವಾರು ವರ್ಷಗಳವರೆಗೆ ದೇವರ ವಿಗ್ರಹಗಳನ್ನು ಕಟ್ಟಿ ಒಂದು ಕಡೆ ಇಡಿ ಭಾರತ ಮಾತೆ ಒಬ್ಬಳೇ ದೇವತೆ ಅವಳನ್ನು ಆರಾಧಿಸಿ ಅರ್ಚಿಸಿ ಅವಳೇ ನಮ್ಮದೇವತೆ* ಎಂಬ ಸ್ವಾಮಿ ವಿವೇಕಾನಂದರ ನುಡಿಗಳು ಜತೀನನ ನರನಾಡಿಗಳಲ್ಲಿ ಅಡಗಿತ್ತು. ಹೊರ ದೇಶಗಳಿಂದ ಹಣ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ತರಲೆಂದು *ಹ್ಯಾರಿ ಅಂಡ್ ಕಂಪನಿ* ಎಂಬ ಆಮದು ಮತ್ತು ರಫ್ತೀನ ಸಂಸ್ಥೆಯನ್ನು ಜತೀನ್ ಸ್ಥಾಪಿ ಸಿದನು. ಆದರೂ ಮದ್ದು, ಗುಂಡು ಬಂದೂ ಕುಗಳಿಗೆ ವಿದೇಶಿ ಸಹಾಯ ಅಪೇಕ್ಷಿಸದೆ ಭಾರತದಲ್ಲಿಯೇ ಸಂಗ್ರಹಿಸುತ್ತಿದ್ದರು. ಜತಿನನ ಸಹಕಾರಿಯೊಬ್ಬರಾದ ಮಾನವೇಂದ್ರನಾಥ್ ರಾಯ್ ಎಂಬುವರು *ಬರ್ಡ್ ಅಂಡ್ ಕಂಪನಿ* ಎಂಬ ಸಂಸ್ಥೆಯನ್ನು ಲೂಟಿ ಮಾಡಿ ಅಪಾರ ಸಂಪತ್ತಿನೊಂದಿಗೆ ಪರಾರಿಯಾಗಿ ಅದನ್ನು ಕ್ರಾಂತಿಕಾರ್ಯಕ್ಕೆ ಉಪಯೋಗಿಸಿದರು. ಹೀಗೆ ಅನೇಕ ಕಡೆಗಳಲ್ಲಿ ಆದ ಶಸ್ತ್ರಾಸ್ತ್ರ ದರೋಡೆ, ಬ್ರಿಟಿಷರ ಹತ್ಯೆ ಅದೆಲ್ಲವನ್ನೂ ಜತೀನನ ತಲೆಗೆ ಕಟ್ಟುತ್ತಿದ್ದರು. ಬ್ರಿಟಿಷರು ಜತೀನನನ್ನು ಹಿಡಿದು ಕೊಟ್ಟವರಿಗೆ ಅಥವಾ ಸುಳಿವು ಕೊಟ್ಟವರಿಗೆ ಬಹುಮಾನ ಘೋಷಿಸಿದರು. ಹಾಗಾಗಿ ಜತಿನ್ ಮತ್ತು ಅವನ ಜೊತೆಗಾರರು ಕಲ್ಕತ್ತಾವನ್ನು ಬಿಟ್ಟು ಒರಿಸ್ಸಾದ ಗೋಪಾಲಡಿಹ ಎಂಬ ಸ್ಥಳಕ್ಕೆ ಬಂದು ಸೇರಿದರು. ಅಲ್ಲಿಯ ರಾಜ ಮಣೀಂದ್ರ ಚಕ್ರವರ್ತಿ ಅವರಿಗೆ ಅರಣ್ಯ ಪ್ರದೇಶದ ಒಂದು ಭಾಗದಲ್ಲಿರಲು ವ್ಯವಸ್ಥೆ ಮಾಡಿಕೊಟ್ಟರು.

ಜತೀನ್ ಅರಣ್ಯ ಪ್ರದೇಶದಲ್ಲಿದ್ದರೂ ಕಲ್ಕತ್ತಾದ ಯುನಿ ವರ್ಸಲ್ ಎಂಪೋರಿಯಂ ಎಂಬ ಸಂಸ್ಥೆ ಜೊತೆ ಸಂಪರ್ಕ ಇಟ್ಟುಕೊಂಡಿದ್ದರು. ಅನುಮಾನ ಬಂದ ಪೊಲೀಸರು ಆ ಸಂಸ್ಥೆಯನ್ನು ತಪಾಸಣೆ ಮಾಡಿದರು.ಏನೂ ಪತ್ತೆಯಾಗಲಿಲ್ಲ. ಕೊನೆ ಯಲ್ಲಿ ಅಲ್ಲಿ ಬಿದ್ದಿದ್ದ ಕಾಗದದ ಒಂದು ಸಣ್ಣ ಚೂರು ಕಂಡಿತು. ಅದರಲ್ಲಿ *ಕಾಪ್ಟಿಪಿಡಾ* ಎಂದು ಬರೆದಿತ್ತು. ಅದು ಒರಿಸ್ಸಾ ಪ್ರಾಂತದ ಬಾಲಸೂರ್ ಪಟ್ಟಣದ ಹತ್ತಿರವಿರುವ ಒಂದು ಊರು. ಅದನ್ನ ಅನುಸರಿಸಿ ಪೊಲೀಸರು ಒರಿಸ್ಸಾದ ಕಾಪ್ಟಿಪಿಡಾಕ್ಕೆ ಧಾವಿಸಿ ಬಂದರು. ಜತೀನ್ ಪೊಲೀಸರನ್ನು ಕಂಡು ಕಣ್ಣರೆಯಾದ. ಪೊಲೀಸರು ಪತ್ತೆ ಹಚ್ಚಿ ಕಾಡಿನಲ್ಲಿದ್ದ ಅವನ ಗುಡಿಸಲಿಗೆ ಮುತ್ತಿಗೆ ಹಾಕಿದರು. ಬಾಗಿಲು ಒಡೆದು ಒಳಗೆ ಹೋದರು ಆದರೂ ಜತಿನ್ ಸಿಗಲಿಲ್ಲ. ಪೊಲೀಸರು ಮಣೀಂದ್ರ ಚಕ್ರವರ್ತಿ ಯನ್ನು ವಿಚಾರಣೆಮಾಡಿದರು. ಆಗವರು ಅವರೆಲ್ಲ ಬೇಟೆಯಾಡಲು ಕಾಡಿಗೆ ಹೋಗಿದ್ದಾರೆಂದು ತಿಳಿಸಿದರು.ಜತೀಂದ್ರ ಮತ್ತು ಸಂಗಡಿಗರು ಚಕ್ರವರ್ತಿಯ ಮನೆಯಲ್ಲೇ ಅಡಗಿ ಕುಳಿತಿದ್ದರು.ಜತೀನ್ ಜೊತೆ ಕೆಲವು ಸಂಗಡಿ ಗರೂ ಇದ್ದರು. ಆಗಲೇ ಪೊಲೀಸರು ನಿಮ್ಮೂರಿಗೆ ಡಕಾಯಿತರು ಬಂದಿದ್ದಾರೆ ಹಿಡಿದು ಕೊಟ್ಟವರಿಗೆ 10000 ರೂ ಬಹುಮಾನ ಎಂದು ಘೋಷಿ ಸಿದರು.

ಇವರು ಹೊರಗೆ ಹೋದ ಕೂಡಲೇ ಜನರುಹಿಡಿಯಲು ಬಂದರು. ಆಗ ಹುಸಿಗುಂಡು ಹಾರಿಸಿ ಓಡತೊಗಿದರು .ಓಡುತ್ತಾ ಓಡುತ್ತಾ ಚಾಸಕಂಡಿ ಎಂಬ ಹಳ್ಳಿಯ ಸಮೀಪ ಬಂದರು.ಅನ್ನ ಆಹಾರವಿಲ್ಲದೆ ಹಸಿವು ತಾಳಲಾ ರದೆ ಬಳಲಿ ಬೆಂಡಾಗಿದ್ದರು.ಆ ಹಳ್ಳಿಯ ಹತ್ತಿರ ವಿದ್ದ ಒಂದು ದಿಣ್ಣೆ ಕಾಣಿಸಿತು.ಅಲ್ಲಿ ಒಂದು ಮುಳ್ಳಿನಗಿಡದ ಪೊದೆಯಿಂದ ಕೂಡಿದ ಜಾಗ ಕಾಣಿಸಿತು. ಜತೀನ್ ಮತ್ತು ಸಂಗಡಿಗರು ಅಲ್ಲಿ ಹೋಗಿ ಅಡಗಿ ಕುಳಿತರು. ಪೊಲೀಸ್ ಪಡೆ ಅದರ ಅಧಿಕಾರಿಗಳೂ, ಕಿಲ್ಬಿ ಎಂಬ ಮ್ಯಾಜಿಸ್ಟ್ರೇಟ್ ಎಲ್ಲರೂ ಹುಡುಕುತ್ತಿರು ವಾಗ,ಯಾರೋ ಒಬ್ಬ ಗುಪ್ತಚರ ಜತಿನ್ ಇದ್ದ ಗುಡ್ಡದ ಕಡೆ ಕೈ ತೋರಿಸಿದ.ಕೂಡಲೇ ಎಲ್ಲರೂ ದಿಬ್ಬದ ಸುತ್ತ ಸುತ್ತವರಿದು ಗುಂಡು ಹಾರಿಸುತ್ತಾ ಜತೀನ್ ಮತ್ತು ಸಂಗಡಿಗರಿದ್ದ ಕಡೆ ಧಾವಿಸಿದರು. ಹತ್ತಿರ ಬರುವವರೆಗೂ ಸುಮ್ಮ ನಿದ್ದ ಜತೀನ್ ಪಡೆ ಪೊಲೀಸರ ಮೇಲೆ ಗುಂಡಿನ ಮಳೆ ಸುರಿಸಿದರು. ಸುಮಾರು 12 ಜನ ಪೊಲೀಸರು ಸತ್ತರು.ಜೊತೆಯಲ್ಲಿದ್ದ ಮದ್ದು ಗುಂಡು ಖಾಲಿಯಾದವು. ಅದನರಿತ ಪೊಲೀ ಸರು ಬಂದು ಅವರನ್ನು ಬಂಧಿಸಿದರು. ಆಗಾ ಗಲೇ ಜತೀನನ ಶರೀರದಲ್ಲಿ ಅನೇಕ ಗುಂಡುಗಳು ಸೇರಿದ್ದವು.ಬಾಲಸೂರಿನ ಆಸ್ಪತ್ರೆಗೆ ಜತೀನನ್ನು ಸೇರಿಸಿ ಚಿಕಿತ್ಸೆ ಕೊಡಿ ಸಿದರು.ಫಲಕಾರಿಯಾಗಲಿಲ್ಲ. 1915 ಸೆಪ್ಟೆಂಬರ್ 10ರಂದು ಅವರ ಪ್ರಾಣಪಕ್ಷಿ ಭಾರತಾಂಬೆಯಲ್ಲಿ ಲೀನವಾಯಿತು

**ಭಾರತ್ ಮಾತಾ ಕಿ ಜೈ**

## ಹಾವೇರಿಯಲ್ಲಿ "ಮಹಾಸಭಾ ಭವನ"ಕ್ಕೆ ಉದಾರ ದೇಣಿಗೆ ನೀಡಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಘಟಕಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಗಿದ್ದು, ರೂ.26 ಲಕ್ಷ ಶುಲ್ಕವನ್ನು ಈಗಾಗಲೇ ಪಾವತಿಸಲಾಗಿದೆ. ಈ ನಿವೇಶನದಲ್ಲಿ "ಸಭಾ ಭವನ" ನಿರ್ಮಾಣ ಮಾಡಲು ಯೋಚಿಸಲಾಗಿದ್ದು, ಜಿಲ್ಲೆಯ ವಿಪ್ರರು, ಸಂಘ-ಸಂಸ್ಥೆಗಳು ಉದಾರವಾಗಿ ದೇಣಿಗೆ ನೀಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಲು ಕೋರಿದೆ.

**- ಪ್ರಧಾನ ಕಾರ್ಯದರ್ಶಿಗಳು**

| ಬ್ಯಾಂಕಿನ ವಿವರಗಳು : | A/C DETAILS |
|---|---|
| A/C NAME | : SAPTHARSHI FOUNDATION DONATION |
| BANK | : KARNATAKA BANK LTD. |
| A/C NO. | : 1072500102061901 |
| IFSC | : KARB0000107 |
| BRANCH | : BANASHANKARI 2ND STAGE |

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

ಜಾಹಿರಾತು

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)

ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.
ಮೊ : 944 26771695

## ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ

ಹೆಸರು : ________________________

ವಿಳಾಸ ________________________

________________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE
ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಗಾಯತ್ರೀ ಭವನ, 9ನೇ ಮುಖ್ಯರಸ್ತೆ, ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70

ಅಯೋಧ್ಯೆಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ

**ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞ**

## ತ್ರಯೋದಶ ಲಕ್ಷ ಶ್ರೀ ರಾಮತಾರಕ ಮಹಾಯಾಗ
## ಶ್ರೀ ಸೀತಾ ಕಲ್ಯಾಣೋತ್ಸವ ಹಾಗೂ ಸಹಸ್ರ ಕಲಶಾಭಿಷೇಕ

### ಸಂಚಾಲನಾ ಸಮಿತಿ

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

**ಶ್ರೀಧರಮೂರ್ತಿ ಎಸ್.**
ಪ್ರಧಾನ ಕಾರ್ಯದರ್ಶಿ

**ವೆಂಕಟೇಶ ಎಸ್, ನಾಯಕ್**
ಖಜಾಂಚಿ

### ಪ್ರಧಾನ ಸಂಚಾಲಕರು

ಡಾ. ಬಿ.ಎಸ್. ರಾಘವೇಂದ್ರ ಭಟ್
ಉಪಾಧ್ಯಕ್ಷರು
9741025098

ಡಾ. ಭಾನುಪ್ರಕಾಶ್ ಶರ್ಮ
ಉಪಾಧ್ಯಕ್ಷರು
9980000696

ಹರಿಪ್ರಸಾದ್ ಪೆರಿಯಾಪು
ಸದಸ್ಯರು
8762524599

### ಸಂಚಾಲಕರು

ವೇದಮೂರ್ತಿ ವಿಶ್ವೇಶ್ವರ ಭಟ್
ವೇದಮೂರ್ತಿ ಮಂಜುನಾಥ ಶಾಸ್ತ್ರಿ

ರಾಜೇಂದ್ರ ಪ್ರಸಾದ
ಜಯಸಿಂಹ (ಉತ್ತರ ವಲಯ)
ಪುರುಷೋತ್ತಮ್

ಅರುಣ್ ಹಿರಿಯಣ್ಣ
ಸುಬ್ರಹ್ಮಣ್ಯ
ನರಸಿಂಹಮೂರ್ತಿ

ರವಿಕುಮಾರ್
ಉಮೇಶ ಶಾಸ್ತ್ರಿ
ಕಾರ್ತಿಕ್ ಬಾಪಟ್

ಡಾ|| ಶುಭಮಂಗಳ
ಅರುಣ್ ಕುಮಾರ್
ಸತೀಶ್

ಕೌಶಿಕ್
ಸುಬ್ಬರಾವ್

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಗಾಯತ್ರೀ ಭವನ, 9ನೇ ಮುಖ್ಯರಸ್ತೆ, ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70

ಸಹಕಾರ

**ಶ್ರೀ ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ (ರಿ),**

ವೃಷಭಾವತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು – 79.

ಅಯೋಧ್ಯೆಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ

## ತ್ರಯೋದಶ ಲಕ್ಷ ಶ್ರೀ ರಾಮತಾರಕ ಮಹಾಯಾಗ

## ಶ್ರೀ ಸೀತಾ ಕಲ್ಯಾಣೋತ್ಸವ ಹಾಗೂ ಸಹಸ್ರ ಕಲಶಾಭಿಷೇಕ

**ದಿನಾಂಕ : 21–01–2024 ಭಾನುವಾರ ಮತ್ತು 22–01–2024 ಸೋಮವಾರ**

**ಸ್ಥಳ : ರಾಣಿ ಅಬ್ಬಕ್ಕ ಆಟದ ಮೈದಾನ, ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು – 86**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಅಯೋಧ್ಯಾಧಿಪತಿ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ ಶತಕೋಟಿ ಶ್ರೀರಾಮನಾಮ ಜಪವು ಎಲ್ಲಾ ರಾಮ ಭಕ್ತರ ಸಹಕಾರದಿಂದ ನಡೆದಿದ್ದು ತತ್ಸಂಬಂಧವಾಗಿ ತ್ರಯೋದಶ ಲಕ್ಷ ಸಂಖ್ಯೆಯಲ್ಲಿ ಶ್ರೀ ರಾಮತಾರಕ ಮಹಾಯಾಗ, ಸೀತಾ ಕಲ್ಯಾಣೋತ್ಸವ ಹಾಗೂ ಸಹಸ್ರ ಕಲಶಾಭಿಷೇಕವನ್ನು ಲೋಕಕಲ್ಯಾಣಾರ್ಥವಾಗಿ ಹಮ್ಮಿಕೊಳ್ಳಲಾಗಿದೆ.



### ದಿವ್ಯ ಉಪಸ್ಥಿತಿ

**ಶ್ರೀ ಶ್ರೀ ವಿದ್ಯಾವಿಶ್ವೇಶ್ವರ ಭಾರತೀ ಮಹಾಸ್ವಾಮಿಗಳು,**

ಕೂಡಲಿ ಶೃಂಗೇರಿ ಮಹಾಸಂಸ್ಥಾನಮ್, ಚಾಮರಾಜಪೇಟೆ

**ಶ್ರೀ ಶ್ರೀ ನಿರ್ಮಲಾನಂದ ಸ್ವಾಮಿಜಿಗಳ,**

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ

**ಶ್ರೀ ಶ್ರೀ ಅದ್ವಯಾನಂದ ಸರಸ್ವತಿ ಸ್ವಾಮಿಗಳು,**

ಸಚ್ಚಿದಾನಂದ ಅದ್ವೈತ ಆಶ್ರಮ, ರಾಜಾಜಿನಗರ, ಬೆಂಗಳೂರು.

**ಶ್ರೀ ಶ್ರೀ ವಿಜಯಮಾರುತಿ ಶರ್ಮ ಗುರೂಜಿ**

ಬೆಲಗೂರು ಬಿಂಧು ಮಾಧವ ಶರ್ಮ ಅವಧೂತರ ಶಿಷ್ಯರು

ಶ್ರೀ ಕ್ಷೇತ್ರ ವೀರಪ್ರತಾಪ ಆಂಜನೇಯ ಸ್ವಾಮಿ ದೇವಸ್ಥಾನ ಬೆಲಗೂರು

### ಉಪಸ್ಥಿತಿ

ಅದ್ವೈತ ವಾಚಸ್ಪತಿ ಶ್ರೀ ರಾಮಭಕ್ತ ಶಿರೋಮಣಿ

**ಶ್ರೀ ಡಾ|| ಪಾವಗಡ ಪ್ರಕಾಶರಾಯರು**

ಸನಾತನ ಧರ್ಮದ ಆಸ್ತಿಕ ಬಂಧುಗಳು, ಶ್ರೀ ರಾಮತಾರಕ ನಾಮ ಜಪ ಪಠಣಗೈದ ಎಲ್ಲರೂ ಈ ಪುಣ್ಯಕಾರ್ಯದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ, ಪ್ರಭು ಶ್ರೀ ರಾಮಚಂದ್ರನ ಅನುಗ್ರಹ ಪಡೆಯಬೇಕಾಗಿ ಕೋರುತ್ತೇವೆ.

**ಆದರದ ಆಮಂತ್ರಣ**


PERIODICAL RATE
**VIPRANUDI KANNADA MONTHLY**
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 2-01-2024 Date of Publishing 1-01-2024

# ತ್ರಯೋದಶ ಲಕ್ಷ ಶ್ರೀ ರಾಮತಾರಕ ಮಹಾಯಾಗ - ಸೀತಾ ಕಲ್ಯಾಣೋತ್ಸವ ಹಾಗೂ ಸಹಸ್ರ ಕಲಶಾಭಿಷೇಕ

## ಕಾರ್ಯಕ್ರಮ ವಿವರ

**ದಿನಾಂಕ : 21.01.2024 ಭಾನುವಾರ, ಬೆಳಗ್ಗೆ 7:00 ರಿಂದ**

ಶ್ರೀರಾಮ ಸುಪ್ರಭಾತ, ಗೋಪೂಜೆ, ಯಾಗ ಶಾಲಾ ಪ್ರವೇಶ, ಗುರು ಪ್ರಾರ್ಥನೆ, ಗಂಗಾಪೂಜೆ, ಗಣಪತಿ ಪೂಜೆ, ಪುಣ್ಯಾಹ, ಪಂಚಗವ್ಯ, ಋತ್ವಿಕ್ ವರ್ಣ, ಸಹಸ್ರಕಲಶ ಸ್ಥಾಪನೆ, ರಾಮತಾರಕ ಯಾಗ ಪ್ರಾರಂಭ, ಚತುರ್ವೇದ ಪಾರಾಯಣ, ಶ್ರೀ ರಾಮಾಯಣ ಪಾರಾಯಣ






ಮಧ್ಯಾಹ್ನ : 12.30 ಕ್ಕೆ ಮಹಾಮಂಗಳಾರತಿ ತೀರ್ಥ, ಪ್ರಸಾದ ವಿನಿಯೋಗ

ಸಂಜೆ : 4 ಗಂಟೆಯಿಂದ 7 ರ ವರೆಗೆ, **ಶ್ರೀ ಸೀತಾ ಕಲ್ಯಾಣೋತ್ಸವ**

**7.00 ಕ್ಕೆ : ಸಾಂಸ್ಕೃತಿಕ ಕಾರ್ಯಕ್ರಮ – ಶ್ರೀ ರಾಮಾಯಣ ನೃತ್ಯರೂಪಕ**

ಮಹಾಮಂಗಳಾರತಿ ತೀರ್ಥ, ಪ್ರಸಾದ ವಿನಿಯೋಗ

**ದಿನಾಂಕ : 22.01.2024 ಸೋಮವಾರ, ಬೆಳಗ್ಗೆ ಗಂಟೆ 07:30 ರಿಂದ**

## ಶ್ರೀ ರಾಮತಾರಕ ಮಹಾಯಾಗ

ಬೆಳಗ್ಗೆ 10.30 ಕ್ಕೆ ಪೂರ್ಣಾಹುತಿ, 11.00 ಕ್ಕೆ ಅಯೋಧ್ಯೆಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನೆಯ ನೇರ ಪ್ರಸಾರ ನಂತರ ಸಹಸ್ರ ಕಲಾಶಾಭಿಷೇಕ, ಮಹಾಮಂಗಳಾರತಿ, ತೀರ್ಥ – ಪ್ರಸಾದ ವಿನಿಯೋಗ

---

**ಎಲ್ಲಾ ರಾಮ ಭಕ್ತರಿಗೂ ಕಾರ್ಯಕ್ರಮಕ್ಕೆ ಆದರದ ಸ್ವಾಗತ ಬಯಸುವ**



| ಅಶೋಕ ಹಾರನಹಳ್ಳಿ | ಶ್ರೀಧರಮೂರ್ತಿ ಎಸ್. | ವೆಂಕಟೇಶ ಎಸ್, ನಾಯಕ್ |
|---|---|---|
| ಅಧ್ಯಕ್ಷರು, | ಪ್ರಧಾನ ಕಾರ್ಯದರ್ಶಿ | ಖಜಾಂಚಿ |

**ಪ್ರದಾನ ಸಂಚಾಲಕರು**

| ಡಾ. ಬಿ.ಎಸ್. ರಾಘವೇಂದ್ರ ಭಟ್ | ಡಾ. ಭಾನುಪ್ರಕಾಶ್ ಶರ್ಮ | ಹರಿಪ್ರಸಾದ್ ಪೆರಿಯಾಪು |
|---|---|---|
| ಉಪಾಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು |
| 9741025098 | 9980000696 | 8762524599 |

ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ**

---

**ಶ್ರೀ ಕೆ. ಗೋಪಾಲಯ್ಯ**

ಮಾಜಿ ಮಂತ್ರಿಗಳು, ಹಾಲಿ ಶಾಸಕರು, ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರ

**ಶ್ರೀ ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ (ರಿ).**

If undelivered please return to :
**VIPRANUDI**
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar